ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಜನವರಿ 01, 2014 ಪುಟ 20 ರೂ. 15/-

ಗೀತ ರಚನಕಾರ ಸಂತೋಷ್ ನಾಯಕ್



ಸಂದರ್ಶನ



ಅನಂತಮೂರ್ತಿ @81 ವಿಶೇಷ

ಕ್ಕಲ್ ಸಿರಿಮನೆ, ನೂರ್ ಶ್ರೀಧರ್ ಸಂದರ್ಶನ


ಮುಖ್ಯವಾಹಿನಿಗೆ ಬರಲು ಸಿದ್ಧ

ಮಂಡ್ಯ



ಅಂಬಿ ದರ್ಶನಕ್ಕೆ ...ಮ, 'ಕಷ್ಟ'

6-5=2 ಚಿತ್ರ




ಒಂದು ದೆವ್ವದ ಗೆಲುವು

ಉತ್ತರಕನ್ನಡ



ಅನಂತಮಾಣಿಯ ಅಡಿಕೆ ರಾಜಕೀಯ

ಅನಂತಮೂರ್ತಿಯವರ 'ಅಧ್ವಾನಿಜೀಗೊಂದು ಕಿವಿಮಾತು'




ಡಾ. ಯು.ಆರ್.ಅನಂತಮೂರ್ತಿ ಸಮಕಾಲೀನತೆಗೆ ಸದಾ ಸ್ಪಂದಿಸುತ್ತ ಬಂದವರು. ದೇಶದ ರಾಜಕೀಯ ಸಾಮಾಜಿಕ ಬದುಕಿನ ಸ್ಥಿತ್ಯಂತರಗಳೊಂದಿಗೆ ತಾರ್ಕಿಕ ಮುಖಾಮುಖಿಯನ್ನಿಟ್ಟುಕೊಂಡವರು. ಏಕಮುಖಿ ಸಾಂಸ್ಕೃತಿಕ ಒತ್ತಡದ ಕಾಲದಲ್ಲಿಯೂ ಬಹುತ್ವವನ್ನು ಒಪ್ಪಿ ಪ್ರತಿಪಾದಿಸಿದವರು. ಇವರ 'ಬಾವಲಿ' ಮತ್ತು 'ಹದಿನೈದು ಪದ್ಯಗಳು' ಎಂಬ ಕವನಸಂಕಲನಗಳು ಪ್ರಕಟವಾಗಿದ್ದು 'ನವ್ಯ'ದ ಅತ್ಯಂತ ಕ್ರಿಯಾಶೀಲ ಅವಧಿಯಲ್ಲಿ. ಡಾ. ಜಿ.ಎಸ್.ಆಮೂರ ಅವರು ಗುರುತಿಸುವಂತೆ "ಲಯ ಶಿಲ್ಪ ಪ್ರತಿಮೆ ಇಂಥ ವಿಧಾನಗಳ ಸಂದರ್ಭದಲ್ಲಿ ಅನಂತಮೂರ್ತಿಯವರು ನವ್ಯ ಕಾವ್ಯವನ್ನನುಸರಿಸುತ್ತಾರಾದರೂ ವಸ್ತುವಿನ ವಿಷಯದಲ್ಲಿ ಅವರಿಗೆ ತಮ್ಮದೆಯಾದ-ದೃಷ್ಟಿಯಿದೆ." "ನವ್ಯ ಕವಿಯ ಜೀವದ ತಾಪ, ಕಾಡುವ ಹಾಳು ನೆನಪು ಹಾಗೂ ಟ್ಯಾಂಟಲಸ್ಸಿನ ಹಪಾಹಪಿ ಅವರ ಕವಿತೆಗಳ ನಾಯಕನಿಗೆ ಪ್ರಸ್ತುತವಾಗುವುದಿಲ್ಲ." ಈ ಭಿನ್ನತೆಗೆ ಸಮಾಜವಾದಿ ಚಿಂತನೆಯ ಗಾಢ ಪ್ರಭಾವ ಕಾರಣವಾಗಿದ್ದಿರಬಹುದು. ಎಂಭತ್ತರ ದಶಕದ ನಂತರ ಪ್ರಕಟವಾದ ಕಾವ್ಯದಲ್ಲಿ ನವ್ಯ ಮಾದರಿಯಿಂದ ಸಮಾಜ ನಿಷ್ಠೆಯ ಕಡೆಗಿನ ಚಲನೆ ಸ್ಪಷ್ಟವಾಗಿ ಗೋಚರಿಸುತ್ತದೆ. ವರ್ತಮಾನದ ಎರಡು ಸಂಕಟಗಳಾದ ಜಾಗತೀಕರಣ ಮತ್ತು ಕೋಮುವಾದಗಳಿಗೆ ಕವಿತೆಗಳ ಮೂಲಕ ಪ್ರತಿಕ್ರಿಯಿಸುತ್ತಾರೆ. 'ಊರಾದ ದೇಶ', 'ಊರಿಲ್ಲದ ದೇಶ', 'ಊರು - ದೇಶ', 'ದೇವಾನಾಂಪ್ರಿಯ' ಮೊದಲಾದ ಕವಿತೆಗಳಲ್ಲಿ ಜಾಗತೀಕರಣಕ್ಕೆ ಪ್ರತಿಕ್ರಿಯೆಯನ್ನು ನೋಡಬಹುದು. 'ಭಕ್ತಿ - ವಿಭಕ್ತಿ', 'ಮತ್ಸ್ಯಾವತಾರ', 'ಭಕ್ತಿ' ಮೊದಲಾದ ಕವಿತೆಗಳು ಕೋಮುವಾದಕ್ಕೆ ನೀಡಿದ ಪ್ರತಿಕ್ರಿಯೆಯಾಗಿದೆ. ಈ ಕವಿತೆಗಳನ್ನು ಡಾ. ಜಿ.ಎಸ್.ಆಮೂರ ಅವರು ದ್ವಂದ್ವಗಳ ಮುಖಾಮುಖಿ ಮತ್ತು ಒಪ್ಪಿಕೊಳ್ಳುವ ತಾತ್ವಿಕತೆಯಲ್ಲಿ ಚರ್ಚಿಸುತ್ತಾರೆ. ಎಚ್.ಎಸ್.ವೆಂಕಟೇಶಮೂರ್ತಿಯವರು ಇವರ ಕಾವ್ಯಗಳನ್ನು ಅನೇಕಾಂಶಗಳ ಒಳಗೊಳ್ಳುವಿಕೆಯಾಗಿ ಕಾಣುತ್ತಾರೆ. ಎಂಭತ್ತರ ಈಚಿನ ಇವರ ಕವಿತೆಗಳು ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಜಾಗತಿಕಮಟ್ಟದ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪಲ್ಲಟಗಳ ವೈಚಾರಿಕ ಆಕೃತಿಗಳ ಸಾಹಚರ್ಯದಲ್ಲಿ ಹುಟ್ಟಿ ತಾತ್ವಿಕ ಸಂಘರ್ಷಗಳು ಮುಖಾಮುಖಿ ಮತ್ತು ಆಯ್ಕೆಯ ಒತ್ತಾಸೆಗಿಂತಲೂ, ಅವುಗಳ ಸಾಧ್ಯತೆ ಮತ್ತು ಮಿತಿಗಳನ್ನು ಚರ್ಚಿಸುವುದರಲ್ಲಿ ಆಸಕ್ತವಾಗಿದೆ. ಹಾಗಾಗಿ ಅವು ಸಹಜ ಸಂವಹನಶೀಲತೆಗೆ ಒಳಗಾಗಿವೆ, ನವ್ಯದ ರೂಪ ನಿಷ್ಠತೆಯ ಹಟಮಾರಿತನವನ್ನು ಬಿಟ್ಟಿವೆ. ಗದ್ಯತನ ಹಾಗೂ ಸ್ವಭಾವೋಕ್ತಿಗಳ ಕಾರಣದಿಂದ ಅವರ ಆ ಕಾಲದ ಲೇಖನ ಹಾಗೂ ಭಾಷಣಗಳ ಮರು ನಿರೂಪಣೆಯಂತೆಯೂ ಭಾಸವಾಗುತ್ತದೆ. ಜಾಗತೀಕರಣದ ಏಕಮುಖಿ ಅಭಿವೃದ್ಧಿಯ ಕಲ್ಪನೆ ಹಾಗೂ ಕೋಮುವಾದದ ಏಕಮುಖಿ ಸಂಸ್ಕೃತಿಯ ಕಲ್ಪನೆಗಳಿಗೆ ಪರ್ಯಾಯವಾಗಿ ಬಹುತ್ವದ ಹುಡುಕಾಟ ಈ ಕಾಲದ ಲೇಖಕರ ಜವಾಬ್ದಾರಿಯಾಗಿದೆ ಎಂಬುದನ್ನು ಅನಂತಮೂರ್ತಿಯವರ ಕಾವ್ಯ ತನ್ನ ವಸ್ತು ಮತ್ತು ಶಿಲ್ಪದ ಮೂಲಕ ಎಚ್ಚರಿಸುತ್ತದೆ.

ಇಷ್ಟು ಹಿನ್ನೆಲೆಯಲ್ಲಿ ಅನಂತಮೂರ್ತಿಯವರ 'ಅಧ್ವಾನೀಜೀಗೊಂದು ಕಿವಿಮಾತು' ಎಂಬ ಕವಿತೆಯನ್ನು ಪ್ರವೇಶಿಸಬಹುದು. ಜಾಗತೀಕರಣ ಮತ್ತು ಕೋಮುವಾದಗಳಿಗೆ ಸೃಜನಶೀಲ ಪ್ರತಿಕ್ರಿಯೆಯಂತಿರುವ ಈ ಕವಿತೆಯನ್ನು ಬರೆದದ್ದು 1991 ರ ಡಿಸೆಂಬರ ಕೊನೆಯಲ್ಲಿ, ನವ ವಸಾಹತುಶಾಹಿಯ ಈ ಕಾಲ ಹಲವು ಅಧ್ವಾನಗಳ ಕಾಲವೂ ಹೌದು. ಮಂಡಲ್ ವರದಿಗೆ ಪ್ರತಿಯಾಗಿ ಹುಟ್ಟಿದ ಕಮಂಡಲ ಚಳವಳಿಯ ಅಧ್ವಾನಿಯವರ ರಥಯಾತ್ರೆಯ ಕಾಲ. ಅಧ್ವಾನಿಯವರು ರಾಮಜನ್ಮಭೂಮಿ ವಿವಾದದ ನಾಯಕತ್ವವನ್ನು ವಹಿಸಿ ಅಲ್ಪಸಂಖ್ಯಾತರ ವಿರುದ್ಧ ದೇಶದಾದ್ಯಂತ ದ್ವೇಷವನ್ನು ಬಿತ್ತುತ್ತ ವೋಟ್ ಬ್ಯಾಂಕನ್ನು ಸೃಷ್ಟಿಸಿಕೊಳ್ಳುತ್ತಿದ್ದ ಸಂದರ್ಭ, ಕವಿತೆಯ ಶೀರ್ಷಿಕೆ ಮತ್ತು ಕವಿತೆಯ ರಚನೆಯ ಕಾಲಸೂಚಿಗಳು ಕವಿತೆಯನ್ನು ಯಾವ ನೆಲೆಯಿಂದ ಪ್ರವೇಶಿಸಬೇಕೆನ್ನುವುದನ್ನು ಸೂಚಿಸುತ್ತದೆ. ತನ್ನ ಕಾಲದ ಅಬದ್ಧವನ್ನು ನೇರವಾಗಿಯೇ ಎದುರಾಗಿಸಿಕೊಳ್ಳುವ ಅನಂತಮೂರ್ತಿಯವರ ರಾಜಕೀಯ ನಿಲುವೂ ಗೋಚರವಾಗುತ್ತದೆ. ಇವರ ಸಮಗ್ರ ಕಾವ್ಯಕ್ಕೆ ಮೌಲಿಕವಾದ ಸುದೀರ್ಘ ಮುನ್ನುಡಿಯನ್ನು ಬರೆದಿರುವವರು ಡಾ. ಜಿ.ಎಸ್. ಆಮೂರ ಅವರು ಈ ಕವಿತೆಯನ್ನು ಜಾಗತೀಕರಣದ ದುಷ್ಪರಿಣಾಮದ ಹಿನ್ನೆಲೆಯಲ್ಲಿ ಗ್ರಹಿಸುತ್ತಾರೆ. ವ್ಯಕ್ತಿಯ ಆತ್ಮ ಸುರಕ್ಷತೆಯ ಸಮಸ್ಯೆಯಾಗಿ ವಿಶ್ಲೇಷಿಸಿದ್ದಾರೆ. ಆದರೆ ಕವಿತೆಯ ಕಾರಣ ಸತ್ಯವನ್ನು ಕೋಮುವಾದಿ ರಾಜಕಾರಣವನ್ನು ಉಲ್ಲೇಖಿಸುವುದಿಲ್ಲ. ಅದನ್ನು ಪ್ರಸ್ತಾಪಿಸುವುದು ಅವರಿಗೆ ಮುಖ್ಯವೆನ್ನಿಸುವುದಿಲ್ಲ, ಕಾವ್ಯ ತನ್ನ ನವ್ಯದ ಕಟ್ಟು ಪಾಡುಗಳನ್ನು ಮೀರಿದರೂ ನವ್ಯ ವಿಮರ್ಶೆ ತನ್ನ ಮಡಿವಂತಿಕೆಯನ್ನು ಉಳಿಸಿಕೊಂಡಂತೆ ಕಾಣುತ್ತದೆ. ಸೃಜನಶೀಲತೆ ವಿಭಿನ್ನ ನಿಲುವುಗಳಿಗೆ ಸಂಧಿಭೂಮಿಯಾಗಿರುತ್ತದೆ.

"ಯಾವುದು ನೈಜವಾಗಿ ಸ್ಥಳೀಯವೋ ಅದು ಮಾತ್ರ ಸರ್ವ ದೇಶೀಯವೂ ಆಗಿರುತ್ತದೆ" ಎನ್ನುತ್ತಾರೆ ಕವಿ. ಈ ಕವಿತೆ ವ್ಯಕ್ತಿಯ ವ್ಯೆಯಕ್ತಿಕತೆಯನ್ನು ಜಾತಿ-ಮತ- ಪಂಗಡ, ಪ್ರದೇಶ, ದೇಶ ಮತ್ತು ವಿಶ್ವಗಳ ಸಂಕೀರ್ಣ ಸಂಬಂಧದಲ್ಲಿ ನಿರ್ವಚಿಸಿಕೊಳ್ಳಲು ಹೊರಡುತ್ತದೆ. ವಿಶ್ವಾತ್ಮಕತೆಯಿಂದ ವೈಯಕ್ತಿಕದ ಕಡೆ ಚಲಿಸುವಂತಿದೆ. ಹರಡಿಕೊಂಡ ಪರಿಧಿಯು ಕೇಂದ್ರಕ್ಕೆ ಅಂತರ್ಗತವಾದಂತಿದೆ.

ಲಂಡನ್‌ನಲ್ಲಿ 'ನೀನು ಯಾರು' ಎಂದರೆ
'ನಾನು ಭಾರತೀಯ' ಸಾರಿ,
ಪಾಕಿಯಲ್ಲ ಎಂಬ ಗುರುತಿಗೆ
ಹಾಗೇ ದೆಹಲಿಯಲ್ಲಿ ಕನ್ನಡದವ
ಬೆಂಗಳೂರಲ್ಲಿ ಮಲೆನಾಡಿನವ
ಶಿವಮೊಗ್ಗದಲ್ಲಿ ತೀರ್ಥಹಳ್ಳಿಯವ
ತೀರ್ಥಹಳ್ಳಿಯಲ್ಲಿ ಹುಟ್ಟೂರು ಮೇಳಿಗೆಯವ
ಮೇಳಿಗೆಯಲ್ಲಿ ಕೇಳುವುದೇ ಬೇಡ
ಇಂಥ ಜಾತಿಯ ಇಂಥವರ ಮಗ.



ವೈಯಕ್ತಿಕ ಮತ್ತು ಸ್ಥಳೀಯ ಹಾಗೂ ಜಾತಿ-ಮತಗಳ ವೈವಿಧ್ಯಗಳು ಇರಲಾರದೇ ರಾಜ್ಯ ರಾಷ್ಟ್ರ ಹಾಗೂ ವಿಶ್ವಗಳೊಂದಿಗೆ ಮನುಷ್ಯ ಅಸ್ತಿತ್ವವನ್ನು ಪಡೆಯಲ್ಲಾರ. ವಿಶ್ವಾತ್ಮಕ ವಿಸ್ತಾರವನ್ನು ಪಡೆಯದೆಯೂ ಸ್ಥಳೀಯ ಅಸ್ಮಿತೆ ಸಾಧ್ಯ. ಆದರೆ ಸ್ಥಳೀಯತೆ ಇರದೆ ವಿಶ್ವಾತ್ಮಕತೆ ಇರದು. ಈ ಸ್ಥಳೀಯತೆಯ ಲಕ್ಷಣವೇ ಜಾತಿ-ಮತ-ಪಂಥಗಳ ವೈವಿಧ್ಯತೆ. ಇವು ಸಾಂಸ್ಕೃತಿಕ ವಿಶಿಷ್ಟತೆಯ ವಿವಿಧತೆಗಳಾಗಿ ಅಗತ್ಯ, ವೈರುಧ್ಯಗಳಾಗಿ ಅಲ್ಲ ಎನ್ನುವುದು ಅನಂತಮೂರ್ತಿಯವರು ಒಪ್ಪಿದ ಸಿದ್ಧಾಂತವೂ ಹೌದು. ಸಾಮ್ರಾಜ್ಯವಾದ ಬಂಡವಾಳವಾದಗಳ ವಿಸ್ತತ ರೂಪವಾದ ಜಾಗತೀಕರಣ ಕೇವಲ ಆರ್ಥಿಕ ಅತಿಕ್ರಮಣದ ಲಕ್ಷಣವನ್ನು ಮಾತ್ರ ಹೊಂದಿಲ್ಲ, ಅದು ಪ್ರಾದೇಶಿಕ ಅಸ್ತಿತ್ವವನ್ನು ನಿರಾಕರಿಸುತ್ತದೆ ಮತ್ತು ಅದನ್ನು ನಾಶಗೊಳಿಸುವ ತಂತ್ರವನ್ನೂ ಮಾಡುತ್ತದೆ. ಜಾಗತೀಕರಣದ 'ವಿಶ್ವ ಕುಟುಂಬ' ಪರಿಕಲ್ಪನೆಯೊಳಗಿನ ಹೂರಣವನ್ನು ಬಯಲುಗೊಳಿಸುತ್ತದೆ. ಈ ಕಿವಿಮಾತನ್ನು ಅದ್ವಾನೀಜಿಗೆ ಹೇಳಬೇಕಾಗಿರುವುದು ಯಾಕೆ? ಬಂಡವಾಳವಾದದ ಪೂರಕ ಶಕ್ತಿಯಾಗಿ ಕೆಲಸ ಮಾಡುವ ಪ್ರಭುತ್ವದ ಸಂಕೇತವೆಂದೇ? ನಿಜವಾದ ಸಮಸ್ಯೆಗಳಿಗೆ ಬೆನ್ನು ಹಾಕಿ ಮತ್ತಷ್ಟು ಛಿದ್ರತೆಯನ್ನು ಸೃಷ್ಟಿಸುತ್ತಿರುವ ನಾಯಕರೆಂದೇ? ತಾನು ಇಂಥ ಜಾತಿಯ ಇಂಥವರ ಮಗನಾಗಿದ್ದೇ, ಮೇಲಿನ ಎಲ್ಲವನ್ನೂ ಪಡೆಯಲು ಸಾಧ್ಯವಾಗಿರಬಹುದಾದ ಸಮೀಕರಣವನ್ನೂ ಕವಿತೆ ನಿರಾಕರಿಸುವುದಿಲ್ಲ, ಕೇಂದ್ರದಿಂದ ಪರಿಧಿಗೆ ನೆಗೆವ ನೆಗೆತ ಅನಾಯಾಸವಾಗಿ ಸಂಭವಿಸುವುದಿಲ್ಲ ಎಂಬ ಪರಸ್ಪರ ಚಲನಶೀಲ ಚಿಂತನೆಯನ್ನು ಗಮನಿಸಬಹುದಾಗಿದೆ.

ವರ್ತಮಾನದ ನಾಗರಿಕ ಬದುಕು ವಿಸ್ತಾರ ಅವಕಾಶಗಳನ್ನು ಇಟ್ಟಿದೆ. ಭೌತಿಕವಾಗಿ ವ್ಯಕ್ತಿ ತನ್ನನ್ನು ಹಲವು ಎತ್ತರ - ಬಿತ್ತರಗಳಲ್ಲಿ ಹಾಯಿಸಿಕೊಳ್ಳಬಹುದು. ಆದರೆ ಮೂಲ ಆಲೋಚನಾ ವಿಧಾನ ಮಾತ್ರ ತನ್ನ ಅನುಭವ ಕೇಂದ್ರಕ್ಕೆ ಮರಳಬೇಕಾಗಿರುವುದು. ಈ ಕವಿತೆ ಕೂಡ ಸ್ಥನಿವೇದನೆಯಲ್ಲಿ ತೊಡಗಿದ್ದುದು ಯಾವ ಪೂರ್ವಸೂಚನೆಯೂ ಇಲ್ಲದೆ ಪರಂಪರೆಯ ಸ್ಮತಿಕೋಶವನ್ನು ಪ್ರವೇಶಿಸುತ್ತದೆ. ಇದಕ್ಕೆ ಅಜ್ಜಿ ಪ್ರತೀಕವಾಗುತ್ತಾಳೆ.

ತನ್ನಜ್ಜಿಯಂತೆ ನನ್ನಜ್ಜಿ ದೇವರ ಕೋಣೆಯ
ಗಿಂಡಿಯಲ್ಲಿರುವ
ಗಂಗೆ ಕುಡಿದೇ ಪ್ರಾಣಬಿಟ್ಟದ್ದು.

ಕವಿತೆ ಅಧ್ವಾನಿಯವರ ಕಿವಿಯಲ್ಲುಸುರುತ್ತಿರುವ ಮಾತಾಗಿರುವಾಗ ಅದಕ್ಕೆ ಬೇರೆಯದೆ ಅರ್ಥವಲಯಗಳು ಒದಗುತ್ತದೆ. "ಅಯೋಧ್ಯಾ ರಾಮವಾದಿಗಳ ನಿಲುವು ಜನಪದ ಧರ್ಮದ ದೃಷ್ಟಿಯಿಂದ ಕೂಡ ಹಾಸ್ಯಾಸ್ಪದವೆ. ಜನಪದ ಧರ್ಮದ ಕಲ್ಪನೆ ಎಷ್ಟು ವಿಶಾಲವಾದದ್ದೆಂದರೆ ಅದಕ್ಕೆ ಹರಿವ ನೀರೆಲ್ಲ ಗಂಗೆ... ಮಿಡ್ಲಸ್ಕೂಲಿನಲ್ಲಿ ಓದುತ್ತಿದ್ದಾಗ ನಮ್ಮಮ್ಮ ಗಂಗಾಮೂಲಕ್ಕೆ ಹೋಗಿ ಪೂಜೆ ಮಾಡಬೇಕು ಎಂದು ಮತ್ತೆ ಮತ್ತೆ ಚಡಪಡಿಸುತ್ತಿದ್ದಳು... ಆದರೆ ನಾವು ಹೋದದ್ದು ಗೌರಿಬಿದನೂರಿನ ಹತ್ತಿರದ ಒಂದು ಸಣ್ಣ ಹಳ್ಳಕ್ಕೆ, ಅಮ್ಮನ ನಂಬಿಕೆಗೆ ಅದೇ ಗಂಗೆ." ಡಿ.ಆರ್.ನಾಗರಾಜ ಅವರ ಈ ಮಾತುಗಳು ಅನಂತಮೂರ್ತಿಯವರ ಕವಿತೆಯ ಉದ್ದೇಶವನ್ನು ಗ್ರಹಿಸಲು ಸಹಾಯಕವಾಗಿದೆ. ಪ್ರತಿ ಊರಿಗೊಂದೊಂದು ರಾಮಾಯಣ, ಮಹಾಭಾರತದ ಐತಿಹ್ಯದ ನಂಬುಗೆಗಳಿರುವ ನೆಲ ಇದು. ಇಂದಿಗೂ ಹೊಲದ ಪೂಜೆಗೆ ಹೋದ ರೈತರು ಅಲ್ಲೇ ಬಿದ್ದಿರುವ ಕಲ್ಲು ತೊಳೆದು ಪೂಜಿಸಿ ಉಂಡು ಬರುತ್ತಾರೆ. ಮಾರನೆಯ ದಿನ ಅದು ಬರಿಯ ಕಲ್ಲು ಎಂದೇ ತಿಳಿಯುತ್ತಾರೆ ಅಥವಾ ತುಳಿಯುವ ಕಲ್ಲಿನಲ್ಲಿರುವ ದೈವತ್ವವನ್ನು ಪ್ರಜ್ಞೆಯಾಗಿಸಿಕೊಳ್ಳುತ್ತಾರೆ. ಇಂತಹ ಸಾಮಾಜಿಕ ಆಧ್ಯಾತ್ಮದ ಈ ನೆಲದಲ್ಲಿ 'ಏಕಧರ್ಮ ಏಕದೇವ ಏಕಭಾಷೆ ಏಕಜನಾಂಗ'ದ ಕಲ್ಪನೆಯಿಂದ ಹೊರಡುವ ಕೋಮುವಾದಿ ರಾಜಕಾರಣ ಬಹುತ್ವವನ್ನು ನಿರಾಕರಿಸುತ್ತದೆ. ರಥಯಾತ್ರೆ ಮತ್ತು ಅಯೋಧ್ಯೆಯ ರಾಮಮಂದಿರ ನಿರ್ಮಾಣದ ಉದ್ದೇಶ ಒಂದು ಸ್ಥಾವರಕ್ಕೆ ಸಮಸ್ತರನ್ನೂ ಸೆಳೆಯುವುದು. ಡಿ.ಆರ್.ನಾಗರಾಜ ಗುರುತಿಸುವಂತೆ 'ಹಿಂದೂ ಎಂಬ ಕಲ್ಪಿತ ಕುಲದ ಒಳಗಿರುವ ವೀರಶೈವ, ಜೈನ, ಬೌದ್ಧ ಅದ್ವೈತ ದರ್ಶನಗಳು ಈ ಸ್ಥಾವರನ್ನು ನಿರಾಕರಿಸಿದಂಥವು.' ಈ ಕವಿತೆ ಸ್ಥಾವರ ದೇವರ ಏಕರೂಪಿ ಪರಿಕಲ್ಪನೆಯನ್ನು ಜನಮಾನಸದಲ್ಲಿ ಪ್ರತಿಷ್ಠಾಪಿಸುತ್ತಾ ಪ್ರಬಲವಾಗತೊಡಗಿದ ಕೋಮುವಾದಿ ರಾಜಕಾರಣಕ್ಕೆ ಜನಪದ ಧರ್ಮದ ತಾತ್ವಿಕತೆಯನ್ನು ಮುಖಾಮುಖಿಯಾಗಿಸುತ್ತದೆ. "ನಮ್ಮ ಪರಂಪರೆಗಳಿಗೆ ವಿಮರ್ಶಾತ್ಮಕವಾಗಿ ಒಳಗಿನವರಾಗಿ ಇರಬೇಕಾದ ಅಗತ್ಯವಿದೆ. ಪರಂಪರೆಯನ್ನು ಕುರುಡಾಗಿ ಟೀಕಿಸುವುದು ಸಲ್ಲದು. ಬಸವ, ತುಕಾರಾಂ, ಕಬೀರ ಮೊದಲಾದ ಮಧ್ಯಕಾಲೀನ ಸಂತರು ವಿಮರ್ಶಾತ್ಮಕ ಎಚ್ಚರದೊಂದಿಗೆ ಒಳಗಿನವರಾಗಿದ್ದಾರೆ." "ನಮ್ಮ ಪ್ರಾಚೀನ ಪರಂಪರೆ ಮತ್ತು ಪರಂಪರೆಯ ಶ್ರೇಷ್ಠ ಅಂಶಗಳನ್ನು ಕಾಪಾಡಿಕೊಂಡೇ ಆಧುನಿಕರಾಗಬೇಕಾದದ್ದು ನಮ್ಮ ಅವಶ್ಯಕತೆ." (ಯು.ಆರ್.ಅನಂತಮೂರ್ತಿ)

ಪರಂಪರೆಯ ಒಳಿತನ್ನು ಕೋಮುವಾದಕ್ಕೆ ಮುಖಾಮುಖಿಯಾಗಿಸಿ ಎದುರಿಸುವ ವಿಧಾನದ ಬಗ್ಗೆ ಅನಂತಮೂರ್ತಿಯವರಿಗೆ ವಿಶೇಷ ಒಲವಿದೆ. ಈ ಕವಿತೆ ಅಂತಹ ಒಲವನ್ನು ಪ್ರತಿಪಾದಿಸುತ್ತದೆ. ಜನಪದ ಧರ್ಮದ ಅರಿವಿನಲ್ಲಿ ಕೋಮುವಾದಕ್ಕೆ ಪರ್ಯಾಯವನ್ನು ಕವಿತೆ ಕೊಡುತ್ತದೆ. ಅಧ್ವಾನಿ ಕೋಮುವಾದಿ ರಾಜಕಾರಣದ ಸಾಂಕೇತಿಕ ಪದ. ಅಂತಹ ರಾಜಕಾರಣವನ್ನು ಜನಸಂಸ್ಕೃತಿಯ ಮೂಲಕ ವಿಡಂಬಿಸಲಾಗಿದೆ. ಆಶಿಶ್ ನಂದಿ ಗುರುತಿಸುವ 'ನಂಬಿಕೆಯಾಧಾರಿತ ಧರ್ಮ ಮತ್ತು ಸಿದ್ಧಾಂತ ಆಧಾರಿತ ಧರ್ಮ' ಎಂಬ ತಾತ್ವಿಕತೆಯು ಕವಿತೆಯಲ್ಲಿದೆ. ಅಜ್ಜಿಯ ಮೂಲಕ ಜನಪದರ ನಂಬಿಕೆಯಾಧಾರಿತ ಧರ್ಮವು ಅಧ್ವಾನಿಯವರ ಮೂಲಕ ಕೋಮುವಾದಿಗಳ ಸಿದ್ಧಾ... ಆಧಾರಿತ ಧರ್ಮಕ್ಕೆ ಎದುರಾಗುತ್ತದೆ. ಕೋಮುವಾದಿಗ... ಗಂಗೆಯನ್ನು ಹಿಂದೂತ್ವದ ಪ್ರತೀಕವೆಂದು ಪಾವಿತ್ರ... ರಾಜಕಾರಣ ಮಾಡುತ್ತಿರುವ ಕಾಲದಲ್ಲಿ ಅದೇ... ಕಿಲುಬುಗಿಂಡಿಯ ನೀರಾಗಿ ವಾಸ್ತವೀಕರಿಸಿಕೊಳ್ಳು... ಶಕ್ತಿಯನ್ನು ಕವಿತೆ ಪ್ರಕಟಿಸುತ್ತದೆ ಮತ್ತು ವಿಡಂಬಿಸುತ್ತ... 'ಇನ್ನೂ ಉಳಿದೇ ಇರುವ ನೀರು' ಪರಂಪರಾಗತ ನಂಬಿಕೆಗ... ಉಳಿದುಬರುವ ಸಂಗತಿಯನ್ನು ಸೂಚಿಸುತ್ತದೆ.


ವ್ಯಕ್ತಿಯ ಅಸ್ತಿತ್ವವಾದಿ ಸಂಕಥನದಂತೆ ಆರಂಭವಾಗಿ... ಕವಿತೆ ಕೊನೆಯಲ್ಲಿ ಕೋಮುವಾದವನ್ನು ತೀಕ್ಷ್ಣ... ಎದುರಿಸುತ್ತದೆ.

ನನ್ನಂತೆ ತನ್ನ ಅಡ್ರೆಸ್ ಕೊಡಬೇಕಾದ ಪಾಡು
ಅಜ್ಜಿಗಿರಲಿಲ್ಲ,
ಯಾಜ್ಞವಲ್ಕ್ಯರಿಗೂ ಇರಲಿಲ್ಲ
ಪೂರ್ವಸೂರಿಗಳಿಗೆ ನಮಸ್ಕಾರ

ಜಾತಿಯನ್ನು ಜಾತಿವಾದವಾಗಿಸುವ, ಧರ್ಮವ... ಕೋಮುವಾದವಾಗಿಸುವ, ಸ್ಥಳೀಯತೆಯನ್ನು ನಿರಾಕರಿಸು... ಕೋಮುವಾದಿ ರಾಜಕಾರಣದ ದುಷ್ಪರಿಣಾಮವನ್ನು 'ಅಡ್ರೆ... ಕೊಡಬೇಕಾದ ಪಾಡು' ಎಂದು ಕವಿತೆ ಗುರುತಿಸುತ್ತ... ದೇಶ, ಭಾಷೆ, ಜಾತಿ - ಧರ್ಮಗಳ ಪ್ರಜ್ಞಾಪೂರ್ವ... ಎಚ್ಚರವಿಲ್ಲದೆ ಸಹಜವಾಗಿ ಬದುಕಿಬಿಡುವ ... ಹಿಂದಿನದಾದರೆ ತನ್ನ ಗುರುತಿನ ಈ ಎಲ್ಲ ಚಹರೆಯ... ಎತ್ತಿ ತೋರಿಸಬೇಕಾದ ಅನಿವಾರ್ಯತೆ ಇಂದಿನ... ಅಲ್ಪಸಂಖ್ಯಾತ ಸಮುದಾಯವನ್ನು ಸಂಶಯದಿಂದ ನೋಡು... ಸಂದೇಹಿಸುವ ಸಂದರ್ಭದಲ್ಲಿ 'ಅಡ್ರೆಸ್ ಕೊಡಬೇಕ... ಪಾಡು' ಬೇರೆ ಬೇರೆ ಅರ್ಥ ಸಾಧ್ಯತೆಗಳನ್ನೂ ಧ್ವನಿಸುತ್ತ... ಕೆ.ಫಣಿರಾಜ್ ಅವರು ಪ್ರಸ್ತುತ ಕವಿತೆಯನ್ನು ಕುರಿ... ಮುಖ್ಯವಾದ ಸಂದಿಗ್ಧತೆಯನ್ನು ಪ್ರಸ್ತಾಪಿಸುತ್ತಾರೆ. "ಕವಿತೆಯ... ಯಾಜ್ಞವಲ್ಕ್ಯರ ಪ್ರವೇಶವು ಸದ್ಯದ ಆತಂಕಗಳ ನಡು... ಒಂದು ರೀತಿಯ ನಿರಾಳತೆಯನ್ನು ಮೂಡಿಸುವ ಪರಂಪರೆ... ಕಲ್ಪನೆಯ ಬಗ್ಗೆ ನನಗಂತೂ ಸದಾ ಅನುಮಾನ" ಎನ್ನುತ್ತ... ಕವಿತೆಯ ತಾತ್ವಿಕ ಗೊಂದಲದ ದೃಷ್ಟಿಯಿಂದ ... ಅಭಿಪ್ರಾಯ ಸರಿಯಾದದ್ದು.

ಈ ಕವಿತೆ ಅಧ್ವಾನಿಜೀ ಎಂದು ಸಂಬೋಧಿಸುವು... ಕವಿತೆಯ ಪೂರ್ಣಪಾಠದ ನಂತರ ಒಂದು ವ್ಯಂಗ್ಯ ಎಂ... ಅರಿವಾಗುತ್ತದೆ. ಕೋಮುವಾದಿ ರಾಜಕಾರಣವನ್ನು ಹರ... ಇಹವನ್ನು ಮರೆತಂತಾಡುವವರ ಬಗ್ಗೆ ನವವಸಾಹತುಶಾ... ಕಾಲದ ಕನ್ನಡ ಕಾವ್ಯ ವಿಷಾದ, ವ್ಯಂಗ್ಯಗಳಿಂದ ಬರೆಯುತ್ತ... ಚಂದ್ರಶೇಖರ ತಾಳ್ಯ ಅವರ 'ತೊಗಾಡಿಯಾನಿಗೆ ಒಂದ... ಕ್ಲಾಸಿನ ಪಾಠಗಳು' ಎಂಬ ಕವಿತೆ, "ತೊಗಾಡಿಯ... ತೊಗಾಡಿಯಾ ಹಿಂಗ್ಯಾಕ್ಮಾಡ್ತೀಯಾ?" ಎಂದು ನಯವ... ಪ್ರಶ್ನಿಸುತ್ತ ಅವನ ಮತಾಂಧ ಉನ್ಮಾದವನ್ನು ತಗ್ಗಿಸಿಕೊಳ್ಳ... ಬೋಧಿಸುತ್ತದೆ. ಕೋಮುವಾದವನ್ನು ತಾತ್ವಿಕವ... ಮಾತ್ರವಲ್ಲ, ವ್ಯಕ್ತಿವಾದಿ ನಿಲುವಿನಿಂದಲೂ ಸಶಕ್ತವ... ಎದುರಿಸಬೇಕಾದ ಅಗತ್ಯವಿದು. ಇಂತಹ ಎಚ್ಚರಕ್ಕೆ ಪ್ರಸ... ಕವಿತೆಯೊಂದು ನಿದರ್ಶನ. ಈ ಕಾಲದ ಕಾವ್ಯ ತೊಗಾಡಿಯ... ಅಧ್ವಾನಿ, ಮೋದಿ, ಬುಷ್, ಕ್ಲಿಂಟನ್, ಒಬಾಮಾ ಹಿಂ... ವ್ಯಕ್ತಿಗಳನ್ನೇ ಚರಿತ್ರೆಯಾಗಿಸಿಕೊಳ್ಳುವ ಅನಿವಾರ್ಯತೆಯ... ಪ್ರಕಟಿಸುತ್ತಿದೆ. ಯಾಕೆಂದರೆ ವ್ಯಕ್ತಿಗಳು ತಾತ್ವಿಕವಾ... ಪರಿಣಾಮವನ್ನು ಉಂಟುಮಾಡುತ್ತಿರುತ್ತಾರೆ. ದುಷ್ಟತನ ಯಾ... ಮಟ್ಟದಲ್ಲಿದ್ದರೂ ಅದರೊಂದಿಗೆ ಸಂಘರ್ಷಕ್ಕಿಳಿವ ಕಸುವ... ಕಾವ್ಯ ಪ್ರಕಟಿಸಬೇಕಾಗುತ್ತದೆ. ಆಗ ಅದು ಹಲವು ಭಾ... ಮಾದರಿಗಳನ್ನು ಹೊಂದುತ್ತವೆ.

ಈ ಕವಿತೆ ತಣ್ಣನೆಯ ನಿರುಮ್ಮಳ ಧಾಟಿಯಲ್ಲಿ... ತನ್ನ ಕಾಲವನ್ನು ಇಷ್ಟು ನಿರುಮ್ಮಳವಾಗಿ ಕಟ್ಟಲು ಅಗತ್ಯ... ಸಂಯಮ ಪ್ರಬುದ್ಧ ಚಿಂತನಶೀಲತೆಯಿಂದ ಮಾ... ಸಾಧ್ಯವಾಗುವಂಥದ್ದು. ನವ್ಯದ ಕಾವ್ಯ ಶಿಲ್ಪದ ಕ್ಲೀಷೆಯ... ಇಲ್ಲಿಲ್ಲ. ಚಿಂತನೆಯನ್ನು ಕಾವ್ಯವಾಗಿಸಲು ಸರಳ ಭಾ... ಒದಗಿದೆ. ಕವಿತೆ ಅಜ್ಜಿಗೂ ಯಾಜ್ಞವಲ್ಕ್ಯರಿಗೂ ಒಮ್ಮೆ... ನೆಗೆತವನ್ನು ವಿರ್ಷಡಿಸಿಕೊಳ್ಳುತ್ತ ಒಂದಿಷ್ಟು ಅಪರಿಚ... ಕಸಿವಿಸಿಯನ್ನು ಹುಟ್ಟಿಸುತ್ತದೆ. ಕವಿತೆಯು ರಾಚನಿಕತೆಯ... ಅಸ್ಪಷ್ಟವಾಗುವ ಕಾರಣಗಳ ಕಡೆಗೂ ಗಮನ ಸೆಳೆಯುತ್ತ... ನೇರವಾಗಿ ಹೇಳಿದಾಗ ಯಾವುದು ಕೋಪ, ವ್ಯಂಗ... ಹಸಿಹಸಿ ಭಾಷೆಯಲ್ಲಿ ಉಳಿದುಹೋಗುತ್ತದೆಯೋ ಅದ... ಕವಿತೆ ಅಸ್ಪಷ್ಟ ಅರ್ಥವಿರಾಮಕ್ಕೆ ನಿಲ್ಲಿಸುತ್ತದೆ. ಓದ... ಕವಿತೆಯೊಂದಿಗೆ ಗಂಭೀರವಾಗಿ ಅನುಸಂಧಾನಗೊಳ್ಳ... ಬೇಕಾದ ಅಗತ್ಯವೂ ಇಲ್ಲಿರುತ್ತದೆ. ಭಾಷೆ ಯನ್ನು ಉ... ಬಳಸುವ ಕಾರಣಕ್ಕಾಗಿ ವಿಶಿಷ್ಟತೆಯಿ... ಕೋಮುವಾದವನ್ನು ಮತ್ತೊಂ... ಬಗೆಯಲ್ಲಿ ಎದುರಿಸುವ ಅಪರೂಪ... ಕವಿತೆ ಇದಾಗಿದೆ.



ಎಂ.ಡಿ.ಒಕ್ಕುಂ...

ಅನಂತಮೂರ್ತಿಯವರಿಗೆ 81ನೇ ಹುಟ್ಟುಹಬ್ಬದ ಶುಭಾಶಯಗಳು

ನಾನು ಚಿಕ್ಕವಳಾಗಿದ್ದಾಗಿನಿಂದಲೂ ಯು.ಆರ್.ಅನಂತಮೂರ್ತಿಯವರ ಬಗ್ಗೆ ನನ್ನಲ್ಲಿ ಒಂದು ತರಹ ಅಭಿಮಾನ ಮತ್ತು ಹೊಟ್ಟೆಕಿಚ್ಚು. ಅಭಿಮಾನ ಯಾಕೆಂದರೆ ಅವರು ಅಷ್ಟು ದೊಡ್ಡ ಸಾಹಿತಿ ಆಗಿದ್ದರೂ ಕಿರಿಯರನ್ನು ಆಪ್ತ ಸ್ನೇಹಿತರಂತೆ ಮಾತನಾಡಿಸುವ ಪರಿ. ಹೊಟ್ಟೆಕಿಚ್ಚು ಯಾಕೆಂದರೆ ಅವರಿಗೆ ಸಿಕ್ಕಂತಹ ರಾಷ್ಟ್ರೀಯ, ಅಂತರರಾಷ್ಟ್ರೀಯ ಖ್ಯಾತಿ ನನ್ನ ಅಪ್ಪನಿಗೆ ಸಿಗದೇ ಇದ್ದಿದ್ದರಿಂದ! ಸ್ವತಃ ಅಪ್ಪ ಇದರ ಬಗ್ಗೆ ತಲೆಕೆಡಿಸಿಕೊಳ್ಳದಿದ್ದರೂ ನಾನಂತೂ ಕೆಡಿಸಿಕೊಳ್ಳುತ್ತಿದ್ದೆ. ಅದಕ್ಕೆ ಕಾರಣ ಅಪ್ಪನ ಬಗ್ಗೆ ನನಗಿದ್ದ ಪ್ರೀತಿ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ!!)


ನನ್ನಪ್ಪ ಒರಟ. ಹಳ್ಳಿಗ. ಪಾಶ್ಚಿಮಾತ್ಯರ ಸೊಫಿಸ್ಟಿಕೇಶನ್ ಇರದಿದ್ದ ಮನುಷ್ಯ. ವಿದೇಶಗಳಿಗಿರಲಿ, ಭಾರತದ ಹೆಚ್ಚು ರಾಜ್ಯಗಳಿಗೂ ಹೋಗಿರದಿದ್ದ ವ್ಯಕ್ತಿ. ಆದರೆ ಅನಂತಮೂರ್ತಿಯಾಗಲ್ಲ, ಅವರು ತೀರ್ಥಹಳ್ಳಿಯಲ್ಲಿ ಮಾತ್ರವಲ್ಲ, ನ್ಯೂಯಾರ್ಕ್‌ನಲ್ಲೂ ಆರಾಮಾಗಿರಬಲ್ಲವರು. ವಿವಿಧ ತರಹದ ಜನರೊಂದಿಗೆ ವ್ಯವಹರಿಸಬಲ್ಲವರು. ಜಗತ್ತಿನ ಹತ್ತಾರು ಜಾಗಗಳಲ್ಲಿ ವಾಸಿಸಿ, ಪ್ರಯಾಣಿಸಿ ಬಂದಂಥವರು. ಅಪ್ಪನಂತೆ ಸಿಡುಕನಾಗಿರದೆ, ಜಗಳವಾಡದೆ ಎಲ್ಲರೊಂದಿಗೆ ಬೆರೆಯಬಲ್ಲ ಸಂಯಮಶೀಲರು.

ನನ್ನಪ್ಪ ಯಾಕೆ ಹೀಗೆ ತನ್ನ ಮಿತ್ರರೊಂದಿಗೂ ಜಗಳವಾಡಿಕೊಂಡು ಏಕಾಂಗಿಯಾಗುತ್ತಾರೆಂದು ಅರ್ಥಮಾಡಿಕೊಳ್ಳಲು ನಾನು ಪ್ರಯತ್ನಿಸುತ್ತಿದ್ದಾಗ ಅದು ಹೇಗೆ ಅನಂತಮೂರ್ತಿಯವರು ಸುಲಭವಾಗಿ ಎಲ್ಲರೊಂದಿಗೆ ಬೆರೆಯಬಲ್ಲರು ಎಂದು ನನಗೆ ಅಚ್ಚರಿಯಾಗುತ್ತಿತ್ತು. ಇಷ್ಟೆಲ್ಲದರ ನಡುವೆಯೂ ಪರಸ್ಪರ ತದ್ವಿರುದ್ಧದಂತಿದ್ದ ಅಪ್ಪ ಮತ್ತು ಅನಂತಮೂರ್ತಿಯವರ ನಡುವೆ ಇದ್ದ ಪರಸ್ಪರ ಅಭಿಮಾನ ನನ್ನನ್ನು ಬೆಕ್ಕಸಬೆರಗಾಗಿಸುತ್ತಿತ್ತು. ಒಮ್ಮೆ ಅಪ್ಪ ಮತ್ತು ಅನಂತಮೂರ್ತಿಯವರ ವ್ಯಕ್ತಿತ್ವಗಳ ನಡುವಿನ ವ್ಯತ್ಯಾಸವನ್ನು ಚರ್ಚಿಸುತ್ತಿದ್ದಾಗ ಡಿ.ಆರ್.ನಾಗರಾಜ್ ಅವರು ಹೇಳಿದ್ದು ಇವತ್ತಿಗೂ ಚೆನ್ನಾಗಿ ನೆನಪಿದೆ. ಅವರು ಅವತ್ತು ಹೀಗೆ ಹೇಳಿದ್ದರು: "ಎ.ಕೆ. ರಾಮಾನುಜನ್ ಅವರ ಪ್ರಕಾರ ಲಂಕೇಶ್ ಮತ್ತು ಅನಂತಮೂರ್ತಿ ಹೀಗೆ ಪರಸ್ಪರ ಜಗಳವಾಡುವುದಕ್ಕೆ ಕಾರಣ **Lankesh wants to be like Ananthamurthy and Ananthamurthy wants to be like Lankesh.**"

ರಾಮಾನುಜನ್ ಅವರ ಈ ತರ್ಕ ಎಷ್ಟರಮಟ್ಟಿಗೆ ಸರಿ ಇರಬಹುದು?!

ಅನಂತಮೂರ್ತಿ ಮತ್ತು ಅಪ್ಪ ಹಲವು ದಶಕಗಳ ಮಿತ್ರ-ವೈರಿಗಳಾಗಿದ್ದರೂ ನಾನು ಅನಂತಮೂರ್ತಿಯವರನ್ನು ಹತ್ತಿರದಿಂದ ಕಂಡಿದ್ದು ಅವರ ಪುತ್ರ ಶರತ್ ಮತ್ತು ಅಳಿಯ ವಿವೇಕ್ ಶಾನಭಾಗ್ ನನ್ನ ಸ್ನೇಹಿತರಾದ ನಂತರವೇ. ಆಗ ಇವರಿಬ್ಬರೂ ಬೆಂಗಳೂರಿನ ಒಂದು ಫ್ಲ್ಯಾಟ್‌ನಲ್ಲಿ ವಾಸಿಸುತ್ತಿದ್ದರಿಂದ ಅದೇ ನಮ್ಮೆಲ್ಲರ ಪಾರ್ಟಿಗಳ ಅಡ್ಡೆಯಾಯಿತು. ಆಗೆಲ್ಲ ಶರತ್ ಮತ್ತು ವಿವೇಕ್ ಎಲ್ಲಾ ತರಹದ ಸಂತೋಷಕೂಟಗಳಿಗೆ ನನ್ನನ್ನು ಮತ್ತು ನನ್ನ ತಂಗಿ ಬೇಬಿಯನ್ನು ತಪ್ಪದೇ ಆಹ್ವಾನಿಸುತ್ತಿದ್ದರು. ಅಂತಹ ಒಂದೆರಡು ಕೂಟಗಳಿಗೆ ಬಂದಿದ್ದ ಅನಂತಮೂರ್ತಿಯವರು ಪ್ರೀತಿಯಿಂದಲೇ ನನ್ನನ್ನು ಮಾತನಾಡಿಸಿದ್ದರು. ನಾನು ಅಪ್ಪ ಮತ್ತು ಅಪ್ಪನ ಪತ್ರಿಕೆಯನ್ನೂ, ಅನಂತಮೂರ್ತಿಯವರನ್ನೂ ಬೇರೆ ಬೇರೆಯಾಗಿ ಇಟ್ಟು ನೋಡುತ್ತಿದ್ದರಿಂದ ನಾನಾಗಲಿ, ಅನಂತಮೂರ್ತಿಯವರಾಗಲಿ ಅಪ್ಪನ ಬಗ್ಗೆ ಹೆಚ್ಚು ಮಾತನಾಡುತ್ತಿರಲಿಲ್ಲ.

ಒಮ್ಮೆ ಶರತ್ ಮೈಸೂರಿನಲ್ಲಿ ವಾಸಿಸುತ್ತಿದ್ದಾಗ ಅವನನ್ನು ಭೇಟಿ ಆಗಲು ನಾನು, ವಿಶಾಲ ಮತ್ತು ಪ್ರಶಾಂತ್ ಮೈಸೂರಿಗೆ ಡ್ರೈವ್ ಮಾಡಿಕೊಂಡು ಹೋದೆವು. ಆಗ ಅನಂತಮೂರ್ತಿ ಮತ್ತು ಎಸ್ತರ್ ಕೂಡ ಮೈಸೂರಿಗೆ ಹತ್ತಿರದಲ್ಲಿರುವ ತಮ್ಮ ತೋಟದ ಮನೆಯಲ್ಲಿ ಇದ್ದಿದ್ದರಿಂದ ಅವರನ್ನೂ ಭೇಟಿಯಾಗಲು ನಾವೆಲ್ಲಾ ಅಲ್ಲಿಗೇ ಹೋದೆವು. ಅವತ್ತು ಎಲ್ಲರೂ ಮಾತನಾಡುತ್ತಿದ್ದಾಗ ಡಾಲರ್ಸ್ ಕಾಲೋನಿಯಲ್ಲಿ ಅವರಿಗೆ ಮನೆ ಅಲಾಟ್ ಆಗಿದ್ದರ ಬಗ್ಗೆ ಪ್ರಸ್ತಾಪವಾಗಿತ್ತು. ಅದರ ಬಗ್ಗೆ ಕೇಳಿಸಿಕೊಂಡ ನಾನು ಸುಮ್ಮನಾಗಿದ್ದೆ. ನಾವು ಬೆಂಗಳೂರಿಗೆ ವಾಪಸ್ ಬಂದನಂತರದ ಪತ್ರಿಕೆಯ ಸಂಚಿಕೆಯಲ್ಲಿ ಆ ಮನೆಯ ಬಗ್ಗೆ ದೊಡ್ಡ ವಿಮರ್ಶಾತ್ಮಕ ವರದಿ ಪ್ರಕಟಗೊಂಡಿತ್ತು. ಅದನ್ನು ಓದಿದ್ದೇ ತಡ ಶರತ್ ನಾನೇ ಆ ಮನೆಯ ಬಗ್ಗೆ ಅಪ್ಪನಿಗೆ ಮಾಹಿತಿ ನೀಡಿದ್ದೇನೆಂದು ಭಾವಿಸಿ ನನ್ನೊಂದಿಗೆ ದೊಡ್ಡ ಜಗಳವಾಡಿದ್ದ. ವಾಸ್ತವವಾಗಿ ನಾನು ಅನಂತಮೂರ್ತಿಯವರನ್ನು ಭೇಟಿ ಆಗಿದ್ದರ ಬಗ್ಗೆಯೇ ಅಪ್ಪನಿಗೆ ಹೇಳಿರಲಿಲ್ಲ, ಇನ್ನು ಮನೆಯ ಕುರಿತು ಹೇಳುವುದಾದರೂ ಎಲ್ಲಿಂದ? ಆದರೂ ಕೆಲವು ಸಮಯದ ಕಾಲ ನಾನೇ ಅಪ್ಪನಿಗೆ ಮಾಹಿತಿ ನೀಡಿದ್ದೆ ಎಂದು ಎಸ್ತರ್ ಮತ್ತು ಶರತ್ ನನ್ನ ಬಗ್ಗೆ ಬೇಜಾರು ಮಾಡಿಕೊಂಡಿದ್ದರು. ನಂತರದ ದಿನಗಳಲ್ಲಿ ಅದನ್ನೆಲ್ಲ ಮರೆತ ನಮ್ಮೆಲ್ಲರ ಸ್ನೇಹ, ಸಂತೋಷಕೂಟ ಎಲ್ಲವೂ ಮುಂದುವರೆದವು. ಅನಂತಮೂರ್ತಿಯವರೊಂದಿಗಿನ ಭೇಟಿಗಳು ಕೂಡ.



ಅಪ್ಪನ ಪತ್ರಿಕೆಗೆ 25 ವರ್ಷ ತುಂಬಿದಾಗ ಆ ಸಮಾರಂಭಕ್ಕೆ ಅನಂತಮೂರ್ತಿಯವರನ್ನು ಆಹ್ವಾನಿಸಿದೆ. ಅವತ್ತು ಅನಂತಮೂರ್ತಿಯವರು ಪರಸ್ಪರ ವಿಮರ್ಶೆಯ ನಡುವೆಯೂ ಅಪ್ಪ ಮತ್ತು ಅವರ ನಡುವೆ ಇದ್ದ ಸ್ನೇಹದ ಬಗ್ಗೆ ಆತ್ಮೀಯವಾಗಿ ಮಾತನಾಡಿದ್ದರು. ಅಂದು ಅವರು "ಇವತ್ತಿಗೂ ನಾನು ಏನನ್ನಾದರು ಬರೆದರೆ ಲಂಕೇಶ್ ಅದರ ಬಗ್ಗೆ ಏನನ್ನುತ್ತಿದ್ದ ಎಂದು ಯೋಚಿಸುತ್ತೇನೆ" ಎಂದಿದ್ದರು.

ಅದಾದನಂತರ ಒಂದು ಪ್ರಕರಣ ನಡೆಯಿತು. ತುಂಗಾ ಮೂಲ ಉಳಿಸಿ ಹೋರಾಟವನ್ನು ಕರ್ನಾಟಕ ವಿಮೋಚನಾ ರಂಗದ ಯುವಕರು ಸಂಘಟಿಸಿ ಅದನ್ನು ಯಶಸ್ವಿಯಾಗಿ ಮುಂದುವರೆಸಿದ್ದರು. ಆಗ ಆ ಯುವಕರು ತಮ್ಮ ಹೋರಾಟಕ್ಕೆ ಅನಂತಮೂರ್ತಿ ಮತ್ತು ಪೂರ್ಣಚಂದ್ರ ತೇಜಸ್ವಿಯವರನ್ನೂ ಆಹ್ವಾನಿಸಿದರು. ಇವರಿಬ್ಬರ ಪಾಲುಗೊಳ್ಳುವಿಕೆ ಆ ಹೋರಾಟಕ್ಕೆ ಹೊಸ ತೂಕವನ್ನು ನೀಡಿತ್ತು ಎಂಬುದು ನಿಸ್ಸಂಶಯ. ಆದರೆ ಅದಾದ ಕೆಲವು ದಿನಗಳಲ್ಲೇ ಆಗಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಕೊಟ್ಟಿದ್ದ ಪೊಳ್ಳು ಭರವಸೆಯನ್ನು ಈ ಹಿರಿಯರಿಬ್ಬರೂ ನಂಬಿದ್ದರಿಂದ ಇಡೀ ಹೋರಾಟವೇ ನೆನೆಗುದಿಗೆ ಬಿದ್ದಿತು. ಆ ಕುರಿತು ಆ ಯುವಕರಲ್ಲಿ ಅಸಮಾಧಾನ ಇತ್ತು. ಅದೇ ಹೊತ್ತಿಗೆ ನಮ್ಮ ವರದಿಗಾರರೊಬ್ಬರು ಅನಂತಮೂರ್ತಿಯವರು ತುಂಗಾ ಮೂಲ ಉಳಿಸಿ ಹೋರಾಟದಲ್ಲಿ ಸಕ್ರಿಯವಾಗಿದ್ದಕ್ಕೆ ಕಾರಣ ಅವರು ನೊಬೆಲ್ ಪ್ರಶಸ್ತಿ ಕನಸು ಎಂಬ ಕಪೋಲಕಲ್ಪಿತ ವರದಿಯನ್ನು ಬರೆದರು. ಅದರ ಹಿಂದೂಮುಂದೂ ಯೋಚಿಸದ ನಾನು ಅದನ್ನು 'ತುಂಗಾ ತೀರದಲ್ಲಿ ನೋಬೆಲ್ ಕನಸು' ಎಂದು ಪ್ರಕಟಿಸಿದೆ. ಪರಿಸರ ರಕ್ಷಣೆ ಬಗೆಗಿನ ತಮ್ಮ ಕಾಳಜಿಯನ್ನೂ ಹೀಗೆ ತಿರುಚಿದ್ದರ ಬಗ್ಗೆ ಸಹಜವಾಗಿಯೇ ಅನಂತಮೂರ್ತಿಯವರಿಗೆ ಬೇಸರವಾಗಿತ್ತು.



• ಗೌರಿ ಲಂಕೇಶ್
editorlankesh@gmail.com

ಅನಂತಮೂರ್ತಿಯವರ ಒಂದು ವಿಶಿಷ್ಟ ಗುಣ ಯಾವುದೆಂದರೆ ಕಿರಿಯರಾದ ನನ್ನಂಥವರು ಮಾಡುವ ಇಂತಹ ಯಡವಟ್ಟುಗಳನ್ನು ತುಂಬ ಕಾಲ ತಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳದೆ ಅದನ್ನು ಸಂಪೂರ್ಣವಾಗಿ ಮರೆತು ಮತ್ತೆ ಅಷ್ಟೇ ಪ್ರೀತಿಯಿಂದ ಮತ್ತು ವಿಶ್ವಾಸದಿಂದ ನಮ್ಮನ್ನು ಮಾತನಾಡಿಸುವುದು. ಆ ವರದಿ ಪ್ರಕಟಗೊಂಡ ಕೆಲವು ತಿಂಗಳ ನಂತರ ಅವರನ್ನು ಹೋಟೆಲ್ ಒಬೆರಾಯ್‌ನಲ್ಲಿ ಭೇಟಿ ಆದಾಗ ಅವರು ಆ ವರದಿ ಬಗ್ಗೆ ಮರೆತು ನನ್ನನ್ನು ಎಂದಿನಂತೆ "ಹೇಗಿದ್ದೀಯಮ್ಮಾ ಗೌರಿ?" ಎಂದು ಮಾತನಾಡಿಸಿದ್ದರು. ಅವರ ಈ ಪ್ರೀತಿಯ ಮುಂದೆ ನಾನು ಮೂಕಳಾಗಿದ್ದೆ.

ಇದಾದನಂತರ ಅನಂತಮೂರ್ತಿ ಮತ್ತು ನನ್ನ ನಡುವೆ ಮನಸ್ತಾಪಕ್ಕೆ ಕಾರಣವಾಗಿದ್ದು 'ದೇಶಕಾಲ' ವಿಶೇಷಾಂಕ ಕುರಿತ ಚರ್ಚೆ. ವಿವೇಕ್ ಶಾನಭಾಗ್ ಮತ್ತು ಜಯಂತ್ ಕಾಯ್ಕಿಣಿ ನನ್ನ ಮಿತ್ರರಾಗಿದ್ದರೂ ಅವರಿಬ್ಬರು ನಿರೂಪಿಸಿದ್ದ ವಿಶೇಷಾಂಕದ ಬಗ್ಗೆ ಹಲವು ವಿಮರ್ಶೆಗಳಿದ್ದವು. ಅಂತಹ ವಿಮರ್ಶೆಯನ್ನು ಬಹಳ ಉಗ್ರವಾಗಿ ವ್ಯಕ್ತಪಡಿಸಿದ್ದು ಮಿತ್ರರಾದ ಚಂದ್ರಶೇಖರ್ ಐಜೂರ್ ಮತ್ತು ಮಂಜುನಾಥ್ ಲತಾ. ಸಾಹಿತ್ಯ ವಲಯದಲ್ಲಿ 'ದೇಶಕಾಲ'ಕ್ಕೆ ತನ್ನದೇ ಆದ ಒಂದು ಸ್ಥಾನ ಇದ್ದಿದ್ದರಿಂದ ಐಜೂರ್ ಮತ್ತು ಲತಾ ಅವರು ಬರೆದಿದ್ದ ಲೇಖನವನ್ನು ಪ್ರಕಟಿಸುವ ಮೂಲಕ ಚರ್ಚೆಗೆ ಪತ್ರಿಕೆ ಒಂದು ವೇದಿಕೆಯನ್ನು ಕಲ್ಪಿಸಿತ್ತೇ ಹೊರತು ಅದರ ಹಿಂದೆ ಬೇರೆ ಯಾವ ವೈಯಕ್ತಿಕ ದುರುದ್ದೇಶಗಳೂ ಇರಲಿಲ್ಲ. (ನಾನು 'ದೇಶಕಾಲ' ಕುರಿತು ಒಂದೇ ಒಂದು ಪದವನ್ನೂ ಬರೆಯಲಿಲ್ಲ)

ಸಾಹಿತ್ಯ ವಲಯದಲ್ಲಿ ವಿಮರ್ಶೆ ಸಹಜವಾದ್ದರಿಂದ ಅದನ್ನು ವಿವೇಕ್, ಕಾಯ್ಕಿಣಿ ಮತ್ತು ಅನಂತಮೂರ್ತಿಯವರು ಆರೋಗ್ಯಕರ ಚರ್ಚೆಯಾಗಿಯೇ ಸ್ವೀಕರಿಸುತ್ತಾರೆ ಎಂದು ನಂಬಿದ್ದೆ. ಅವರು ಹಾಗೆಯೇ ಮಾಡುತ್ತಿದ್ದರು ಕೂಡ ಎನಿಸುತ್ತದೆ. ಆದರೆ ಕವಯತ್ರಿಯೊಬ್ಬಳು ನನ್ನ ವಿರುದ್ಧ ಅನಂತಮೂರ್ತಿಯವರಿಗೆ ಇಲ್ಲಸಲ್ಲದ್ದನ್ನು ಹೇಳಿ ಅವರ ಮನಸ್ಸನ್ನು ಕೆಡಿಸಿದಳು. ಅನಂತಮೂರ್ತಿಯವರು ನನ್ನ ಬಗ್ಗೆ ತುಂಬಾ ಅಸಮಾಧಾನಗೊಂಡಿದ್ದಾರೆ ಎಂದು ಹಲವು ಮಿತ್ರರು ಹೇಳಿದಾಗ ನಾನು ಸುಮ್ಮನಾಗಿದ್ದೆ.

ಆದರೆ ಅನಂತಮೂರ್ತಿಯವರು ಅದನ್ನೂ ಬಹಳ ದಿನ ಮನಸ್ಸಿನಲ್ಲಿ ಇಟ್ಟುಕೊಳ್ಳಲಿಲ್ಲ. ಅಪ್ಪನನ್ನು ಕುರಿತು ಅಮ್ಮ ಬರೆದಿರುವ 'ಹುಳಿಮಾವು ಮತ್ತು ನಾನು' ಪುಸ್ತಕವನ್ನು ಅವರು ಅದೆಷ್ಟು ಮೆಚ್ಚಿದರೆಂದರೆ ಹಿಂದಿನದೆಲ್ಲವನ್ನು ಮರೆತು ನನಗೆ ಫೋನ್ ಮಾಡಿ, ಅಮ್ಮನ ನಂಬರ್ ಪಡೆದು, "ಲಂಕೇಶ್ ಇದ್ದಿದ್ದರೆ ಅವನಿಗೆ ಹೇಳುತ್ತಿದ್ದೆ ನಿನಗೆ ಈಕೆ ತಕ್ಕ ಹೆಂಡತಿ ಅಂತ" ಎಂದು ಹೇಳಿದರು.


ಇತ್ತೀಚೆಗೆ ನರಹಂತಕ ನರೇಂದ್ರ ಮೋದಿ ಬೆಂಗಳೂರಿಗೆ ಬಂದಿದ್ದಾಗ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಒಂದು ಪ್ರತಿಭಟನೆಯನ್ನು ಹಮ್ಮಿಕೊಂಡಿತ್ತು, ಅದರ ಬಗ್ಗೆ ನಾನು ಅವರಿಗೆ ಒಂದು ಈಮೇಲ್ ಕಳುಹಿಸಿದ್ದೆ. ಅದನ್ನು ನೋಡಿದ್ದೇ ತಡ ಅವರು ನನಗೆ ಫೋನ್ ಮಾಡಿ "ಪ್ರತಿಭಟನೆ ಒಳ್ಳೆಯದು, ಆದರೆ ನೀವು ಹುಷಾರಾಗಿರಿ. ಆತನ ಹಿಂಬಾಲಕರು ನಿಮ್ಮ ಮೇಲೆ ದಾಳಿ ಮಾಡಬಹುದು. ಅವರು ಎಂಥದ್ದಕ್ಕೂ ಹೇಸುವವರಲ್ಲ" ಎಂದು ನಮ್ಮೆಲ್ಲರ ಸುರಕ್ಷತತೆ ಬಗ್ಗೆ ಕಾಳಜಿ ತೋರಿದ್ದರು.

ಹಾಗೆಯೇ ಮೂರು ವಾರಗಳ ಹಿಂದೆ ನಾನು ತರುಣ್ ತೇಜ್‌ಪಾಲ್ ಬಗ್ಗೆ ಬರೆದಿದ್ದ ಅಂಕಣವನ್ನು ಓದಿ "ಗೌರಿ, ನಿನ್ನ ಅಪ್ಪ ಇದ್ದಿದ್ದರೆ ಅವನೂ ಹೀಗೆ ಬರೆಯುತ್ತಿದ್ದ ಅನ್ನಿಸಿತು. ನಿನ್ನ ಲೇಖನದಲ್ಲಿ ಮಿತ್ರನೊಬ್ಬನ ಬಗ್ಗೆ ನೋವು ಮತ್ತು ಕೋಪ ಎರಡೂ ಸೂಕ್ಷ್ಮವಾಗಿ ವ್ಯಕ್ತವಾಗಿದೆ" ಎಂದರು. ಸಾಮಾನ್ಯ ಪತ್ರಕರ್ತೆಯಾದ ನನ್ನಂಥವಳಿಗೆ ಅದಕ್ಕಿಂತ ದೊಡ್ಡ ಮಾತು ಸಿಗಲಿಕ್ಕೆ ಸಾಧ್ಯವೇ?

ಅನಂತಮೂರ್ತಿಯವರು ಕೇವಲ ಓರ್ವ ಸಾಹಿತಿ ಅಲ್ಲ, ಅವರು ನಮ್ಮ ನಡುವೆ ಇರುವ ಬಹುಮುಖ್ಯವಾದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಪ್ರಜ್ಞೆ.

ಅವರಿಗೆ ನಮ್ಮ ತಂಡದ ಪರವಾಗಿ 81ನೇ ಹುಟ್ಟುಹಬ್ಬದ ಶುಭಾಶಯಗಳು.

ಲಂಕೇಶ್ ಪ್ರಕಾಶನದ



ನಾಲ್ಕನೇ ಬಾರಿ ಮುದ್ರಣಗೊಂಡಿರುವ ಲಂಕೇಶರ ಆತ್ಮಕಥನ

ಹುಳಿಮಾವಿನ ಮರ

ಈಗ ಎಲ್ಲೆಡೆ ಲಭ್ಯ

ಪ್ರತಿಗಳಿಗಾಗಿ 080-26676427

ಭೂಗತ ಹೋರಾಟಗಾರರನ್ನು ಭೇಟಿಯಾದಾಗ...

ಕಳೆದ ಆರು ತಿಂಗಳಿನಿಂದ ಆಗೀಗ ಸುದ್ದಿ ಮಾಡುತ್ತಿದ್ದ ಸಿದ್ದರಾಮಯ್ಯನವರ ಸರ್ಕಾರದ 'ನಕ್ಸಲೀಯರೊಂದಿಗೆ ಮಾತುಕತೆ, ಮುಖ್ಯವಾಹಿನಿಗೆ ಬಂದು ಸೇರಲು ನಕ್ಸಲೀಯರಿಗೆ ಆಹ್ವಾನ...'ಗಳೆಂಬ ಹೇಳಿಕೆಗಳು ಈಗ ಇನ್ನೊಂದು ಹಂತಕ್ಕೆ ಬಂದು ತಲುಪಿದೆ.

ಕರ್ನಾಟಕದ ನಕ್ಸಲೀಯ ಹೋರಾಟದಲ್ಲಿದ್ದ, ಈಗೊಂದು ಆರೆಂಟು ವರ್ಷಗಳ ಹಿಂದೆಯೇ ಸೈದ್ಧಾಂತಿಕ ಕಾರಣಗಳಿಂದಾಗಿ ಅಲ್ಲಿಂದ ಹೊರಬಂದು, ಆದರೆ ಪೊಲೀಸರ ಕೇಸುಗಳು ಹಾಗೂ ಕಿರುಕುಳದಿಂದಾಗಿ ಸಾರ್ವಜನಿಕವಾಗಿ ಹೊರಬರಲಾಗದೆ ಭೂಗತರಾಗಿಯೇ ಉಳಿದಿದ್ದ ಇಬ್ಬರು ಪ್ರಮುಖ ಹೋರಾಟಗಾರರು ಈಗ ತಾನೇ ಖುದ್ದಾಗಿ ಒಂದು ಪತ್ರಿಕಾಗೋಷ್ಠಿ ನಡೆಸಿದ್ದಾರೆ.

ಕರ್ನಾಟಕ ಸರ್ಕಾರವು ಅವಕಾಶ ನೀಡುವುದೇ ಆದಲ್ಲಿ ತಾವು ಭೂಗತ ಜೀವನ ತೊರೆದು ಮುಖ್ಯ ವಾಹಿನಿಯಲ್ಲಿ ಕಾನೂನುಬದ್ಧ ಚೌಕಟ್ಟಿನೊಳಗೆ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗುವ ಆನಿಸಿಕೆ ವ್ಯಕ್ತಪಡಿಸಿದ್ದಾರೆ.

ಅವರು ಸಿರಿಮನೆ ನಾಗರಾಜ್ ಹಾಗೂ ನೂರ್ ಶ್ರೀಧರ್ ಯಾನೆ ನೂರ್ ಜುಲ್ಫೀಕರ್!

ಈಗ ನಿರ್ಣಾಯಕ ತೀರ್ಮಾನ ಆಗಬೇಕಿರುವುದು ಸರ್ಕಾರದಿಂದ.


ನಾಗರೀಕ ವೇದಿಕೆಯ ಪ್ರಯತ್ನ


2013ರ ಮೇ ತಿಂಗಳಲ್ಲಿ ರಾಜ್ಯದಲ್ಲಿ ಬಿಜೆಪಿಯ ಭ್ರಷ್ಟ ಆಡಳಿತವನ್ನು ಜನತೆ ಕೊನೆಗಾಣಿಸಿ ಕಾಂಗ್ರೆಸ್ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಭೂಗತ ನಕ್ಸಲ್ ಹೋರಾಟಗಾರರನ್ನು ಮುಖ್ಯವಾಹಿನಿಗೆ ಕರೆತರುವ ಮಾತುಗಳಿಗೆ ಚಾಲನೆ ದೊರೆಕಿತ್ತು.

ಇದನ್ನು ಮೊದಲಿಗೆ ಶುರು ಮಾಡಿದ್ದು ಹೊಸ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹಸಚಿವ ಕೆ.ಜೆ. ಜಾರ್ಜ್.

ರಾಜ್ಯದಲ್ಲಿ ಸಶಸ್ತ್ರ ಬಂಡಾಯ ಹಾಗೂ ಅವರಿಂದಾಗಿ ಬೆಳೆಯುತ್ತಿದ್ದ ಹಿಂಸೆ-ಪ್ರತಿಹಿಂಸೆಯ ಕೊನೆಗಾಣದ ಘಟನೆಗಳನ್ನು ತಡೆದು ಜನಪರ ಆಡಳಿತ ನೀಡಬೇಕೆಂಬ ಸಿದ್ದರಾಮಯ್ಯನವರ ಸಮಾಜವಾದಿ ಹಿನ್ನೆಲೆಯ ಈ ನಿಲುವು ರಾಜ್ಯದ ಅನೇಕ ಬುದ್ಧಿಜೀವಿ ಹಾಗೂ ಬರಹಗಾರರ ಗಮನವನ್ನೂ ಸೆಳೆದಿತ್ತು. ಆಗಲೇ ಶಾಂತಿಗಾಗಿ ನಾಗರೀಕರ ವೇದಿಕೆಯ ವತಿಯಿಂದ ನಕ್ಸಲೀಯರು ಶಸ್ತ್ರಾಸ್ತ್ರ ತ್ಯಜಿಸಿ ಹೊರಬರುವಂತೆ ಹಾಗೂ ಸರ್ಕಾರವು ತನ್ನ ಕಠಿಣ ನಿಲುವನ್ನು ಬದಲಿಸಿ ಈ ಸಮಸ್ಯೆ ಬಗೆಹರಿಸಲು ಒಂದು ಪೂರಕ ರಚನಾತ್ಮಕ ವಾತಾವರಣವನ್ನು ನಿರ್ಮಿಸುವಂತೆ ಮಾಡುವ ಪ್ರಯತ್ನವು ಜೂನ್ ತಿಂಗಳಲ್ಲಿ ಶುರುವಾಯಿತು.


ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ದೊರೆಸ್ವಾಮಿ, ಸಾಹಿತಿಗಳಾದ ಯು.ಆರ್. ಅನಂತಮೂರ್ತಿ,







ದೇವನೂರ ಮಹಾದೇವ, ಎ.ಕೆ. ಸುಬ್ಬಯ್ಯ, ಜಿ. ರಾಜಶೇಖರ್, ರಹಮತ್ ತರೀಕೆರೆ, ಜಿ. ರಾಮಕೃಷ್ಣ, ಕೆ. ಫಣಿರಾಜ್, ಇಂದೂಧರ್ ಹೊನ್ನಾಪುರ, ಗೌರಿ ಲಂಕೇಶ್, ಎಲ್. ಹನುಮಂತಯ್ಯ, ಬಿ.ಎಂ. ಬಶೀರ್, ಬಂಜಗೆರೆ ಜಯಪ್ರಕಾಶ್, ನಗರಿ ಬಾಬಯ್ಯ, ಪಾರ್ವತೀಶ್, ನಗರಗೆರೆ ರಮೇಶ್, ಸನತ್ ಕುಮಾರ್ ಬೆಳಗಲಿ, ವಿ.ಎಸ್. ಶ್ರೀಧರ್ ಹಾಗೂ ಲಂಕೇಶ್ ಬಳಗವೂ ಸೇರಿದಂತೆ ಇನ್ನೂ ಮುಂತಾದವರೆಲ್ಲಾ ಸಮಾಲೋಚಿಸಿ ಸರ್ಕಾರ ಹಾಗೂ ನಕ್ಸಲಿಯರಿಬ್ಬರೂ ಒಂದೊಂದು ಹೆಜ್ಜೆ ಮುಂದೆ ಬರುವಂತೆ ಬಹಿರಂಗ ಮನವಿ ಮಾಡಿದ್ದರು.

ನಕ್ಸಲೀಯರನ್ನು ಮುಖ್ಯವಾಹಿನಿಗೆ ಕರೆ ತರಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಬಹುದೆಂಬ ಬಗ್ಗೆ ಚರ್ಚಿಸಲು







ಕಳೆದ ಆಗಸ್ಟ್ 7ರಂದು ಮುಖ್ಯಮಂತ್ರಿಗಳ ಕಚೇರಿಯಲ್ಲೇ ಒಂದು ಸಮಾಲೋಚನಾ ಸಭೆಯೂ ನಡೆಯಿತು.

ಆ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಶಾಂತಿಗಾಗಿ ನಾಗರೀಕರ ವೇದಿಕೆಯ ನಿಯೋಗದ ಸದಸ್ಯರು ಪಾಲ್ಗೊಂಡಿದ್ದರು. ಈ ಪ್ರಕ್ರಿಯೆಯಲ್ಲಿ ವೇದಿಕೆಯ ಕೆಲ ಸದಸ್ಯರು ಮುಖ್ಯಮಂತ್ರಿಯವರ ಸಲಹೆಯ ಮೇರೆಗೆ ಗೃಹ ಸಚಿವ ಕೆ.ಜೆ. ಜಾರ್ಜ್ ಹಾಗೂ ಕೆಲ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೂ ಈ ವಿಚಾರ ಕುರಿತಂತೆ ಚರ್ಚಿಸಿ ಬಂದರು.

ಇದರಲ್ಲಿ ಕೆಲವು ಸಂಗತಿಗಳು ಸುದ್ದಿ ಮಾಧ್ಯಮಗಳಲ್ಲೂ ಪ್ರಕಟಗೊಂಡವು. ನಂತರ ಇದಕ್ಕೆ ಪ್ರತಿಕ್ರಿಯೆಯಾಗಿ ನಕ್ಸಲೀಯ ಹೋರಾಟದಲ್ಲಿದ್ದ ಭೂಗತ ನೂರ್ ಶ್ರೀಧರ್ ಹಾಗೂ ಸಿರಿಮನೆ ನಾಗರಾಜ್ ಶಾಂತಿಗಾಗಿ ನಾಗರೀಕರ ವೇದಿಕೆಗೆ ಒಂದು ಪತ್ರ ಬರೆದು,

"ತಾವು ಮುಖ್ಯವಾಹಿನಿಗೆ ಬರಲು ಸಿದ್ಧರಿದ್ದು ತಮ್ಮ ಮೇಲಿರುವ ಸುಳ್ಳು ಕೇಸುಗಳನ್ನು ಸರ್ಕಾರ ಹಿಂಪಡೆಯುವುದಾದಲ್ಲಿ ಪ್ರಜಾಸತಾತ್ಮಕ ಮಾರ್ಗದಲ್ಲಿ ಒಂದಾಗುವುದಾಗಿ ತಿಳಿಸಿ ಈ ಬಗ್ಗೆ ಸರ್ಕಾರದ ಖಚಿತ ನಿಲುವು ಏನೆಂದು" ತಿಳಿಯ ಬಯಸಿದ್ದರು.

ಈ ಮಾಹಿತಿಯನ್ನು ವೇದಿಕೆಯು ಖುದ್ದು ಮುಖ್ಯಮಂತ್ರಿಯವರಿಗೇ ತಲುಪಿಸಿತು.

ಆ ನಡುವೆ ಉತ್ತರ ಭಾರತದ ನಾಲ್ಕು ರಾಜ್ಯಗಳ ಚುನಾವಣೆ ಮುಗಿದ ನಂತರ ಈ ವಿಚಾರಕ್ಕೆ ಮತ್ತೆ ಚಾಲನೆ ನೀಡುವ ಇರಾದೆಯನ್ನು ಸರ್ಕಾರ ವ್ಯಕ್ತಪಡಿಸಿತ್ತು. ಚುನಾವಣೆಗಳೀಗ ಮುಗಿದಿದೆ. ಸ್ವತಃ ಇಬ್ಬರು ಭೂಗತ ಹೋರಾಟಗಾರರೇ ಪತ್ರಿಕಾಗೋಷ್ಠಿ ನಡೆಸಿ ತಮ್ಮ ಹಿನ್ನೆಲೆ ಹಾಗೂ ಮುಂದಿನ ರಾಜಕೀಯ ನಡೆ ಕುರಿತಂತೆ, ಮುಖ್ಯವಾಹಿನಿಗೆ ಬಂದು ಸೇರುವ ಕುರಿತಂತೆ ಸ್ಪಷ್ಟ ಮಾತುಗಳ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಅವಕಾಶವನ್ನು ವಿವೇಚನೆಯಿಂದ ಉಪಯೋಗಿಸಿಕೊಂಡು ನಕ್ಸಲೀಯ ಸಶಸ್ತ್ರ ಬಂಡಾಯಕ್ಕೆ ಸ್ವಲ್ಪ ಮಟ್ಟಿಗಿನ ಪರಿಹಾರ ಕಂಡುಕೊಳ್ಳುವ ಸಾಧ್ಯತೆ ಸರ್ಕಾರದ ಮುಂದಿದೆ.

ಶರಣಾಗತಿ ಎಂಬ ಪದ ಬಳಕೆ ಅಥವಾ ಪ್ಯಾಕೇಜನ್ನು ಒಪ್ಪದ ಈ ಇಬ್ಬರು ಹೋರಾಟಗಾರರ ಮೇಲಿರುವ ಕೇಸುಗಳಲ್ಲಿ ಸುಳ್ಳು ಕೇಸುಗಳೇ ಹೆಚ್ಚಿವೆ ಎಂಬುದಾಗಿ ಹೇಳಲಾಗುತ್ತಿದೆ.

ಸಿದ್ದರಾಮಯ್ಯನವರ ಸರ್ಕಾರವು ಈಗ ಕೊಂಚ ಚುರುಕಾಗಿ ಕೆಲಸ ಮಾಡಿದಲ್ಲಿ ಇಬ್ಬರು ಪ್ರಮುಖ ಭೂಗತ ಹೋರಾಟಗಾರರು ಮುಖ್ಯವಾಹಿನಿಗೆ ಬರಲು ಆಸ್ಪದ ನೀಡಿದಲ್ಲಿ ಅದು ಮುಂದೆ ಇನ್ನೂ ಅನೇಕರ ಮನಪರಿವರ್ತನೆಗೆ ಪ್ರೇರಣೆ ನೀಡಲೂಬಹುದು.


ಚೆಂಡು ಈಗ ಸರ್ಕಾರದ ಅಂಗಳದಲ್ಲಿದೆ. ಸರ್ಕಾರದ ಹಂತದಲ್ಲಿ ಇದು ಹಲವು ಡೈಮನ್ಷನ್ ಪಡೆದುಕೊಳ್ಳುವ ಸಾಧ್ಯತೆಗಳಿವೆ.

ಒಂದು ಪೊಲೀಸ್ ಅಧಿಕಾರಿಗಳ ನಿಲುವು. "ನಕ್ಸಲರು ಶರಣಾಗತಿಯ ಪ್ಯಾಕೇಜನ್ನು ಒಪ್ಪಿಕೊಂಡು ಮುಖ್ಯವಾಹಿನಿಗೆ ಬೇಕಿದ್ದರೆ ಬರಲಿ" ಎಂಬ ಮಾತನ್ನು ಕೆಲವರಾದರೂ ಸೂಚಿಸುವ ಸಾಧ್ಯತೆಗಳಿವೆ. ಆದರೆ ಅದರಲ್ಲಿ ಹೋರಾಟಗಾರರ ಘನತೆ, ಆತ್ಮಗೌರವ ಕುಗ್ಗಿಸುವ ದನಿ ಇರುತ್ತದೆ. ಕೊನೆಗೂ ಪೊಲೀಸರೇ (ಪ್ರಜಾತಾಂತ್ರಿಕ ಸರ್ಕಾರವಲ್ಲ) ಗೆದ್ದರೆಂದು ಬಿಂಬಿಸಿಕೊಳ್ಳುವ ಒಳ ಉದ್ದೇಶ ಇರಲಿಕ್ಕೂ ಸಾಕು. ಅನೇಕ ಸಂದರ್ಭದಲ್ಲಿ ಪೊಲೀಸರ ಅತಿರೇಕಗಳು, ಕಿರುಕುಳ ಹಾಗೂ ಸುಳ್ಳು ಕೇಸುಗಳ ಕಾರಣದಿಂದಲೇ ಅನೇಕ ಹೋರಾಟಗಾರರು ಅನಿವಾರ್ಯವಾಗಿ ಅಂಡರ್‌ಗ್ರೌಂಡ್ ಹೋಗಬೇಕಾಗಿ ಬಂದಿದೆಯೆಂಬುದು ಸ್ವತಃ ಪೊಲೀಸರಿಗೂ ಗೊತ್ತಿದೆ. ಈ ಹಿಂದೆ ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದ ನಕ್ಸಲಿಯರ ಮೇಲಿನ ಡಜನ್‌ಗಟ್ಟಲೆ ಕೇಸುಗಳಲ್ಲಿ ನೂರಕ್ಕೆ ತೊಂಬತ್ತು ಭಾಗ ಕೇಸುಗಳು ಕೋರ್ಟಿನಲ್ಲಿ ಸಾಬೀತು ಮಾಡಲಾಗದೆ ಆರೋಪಿಗಳು ನಿರ್ದೋಷಿಗಳೆಂದು ಬಿಡುಗಡೆಯಾಗಿರುವ ಸಾಕಷ್ಟು ಉದಾಹರಣೆಗಳಿವೆ.

ಹಾಗಾಗಿ ಈಗ ಆಗಬೇಕಿರುವುದು ಸರ್ಕಾರಿ ಅಧಿಕಾರಿಗಳ ಅಥವಾ ಪೊಲೀಸರ ತೀರ್ಮಾನವಲ್ಲ, ಒಂದು ರಾಜಕೀಯ ನಿರ್ಧಾರ ಮಾತ್ರ ಭೂಗತ ಹೋರಾಟಗಾರರನ್ನು ಸಮಾಜದ ಮುಖ್ಯ ವಾಹಿನಿಗೆ ಕರೆತರಲು ಪೂರಕ ವಾತಾವರಣ ನಿರ್ಮಿಸಬಲ್ಲದಷ್ಟೆ.

● ಲಂಕೇಶ್ ಬಳಗ

ಸಾಕಿ ಜೊತೆ ಸಮಾಲೋಚನೆ



ಕಾಮ್ರೇಡ್,
ನೀವು ನಮ್ಮನ್ನು ಮನದಿಂದ ಹೊರಗಿಟ್ಟು
ಇಲ್ಲಿಗೆ 8 ವರ್ಷಗಳು
ನಾವು ನಮ್ಮ ಮನೆಯಿಂದ ಹೊರಬಂದು
ಇಂದಿಗೆ ಬರೋಬ್ಬರಿ 6 ವರ್ಷಗಳು

ನೀವಿರಬೇಕಿತ್ತು
ಭಿನ್ನಾಭಿಪ್ರಾಯಗಳೇನೇ ಇದ್ದರೂ
ಇಂದು ನೀವು ನಮ್ಮೊಟ್ಟಿಗಿರಬೇಕಿತ್ತು,
ಕ್ರಾಂತಿಯ ಕಿಚ್ಚನ್ನು ಹೆಚ್ಚಿಸಲು,
ತ್ಯಾಗದ ಮಹತ್ವವನ್ನು ಹುದುಗಿಸಲು,
ದಣಿದವರನ್ನು ಹುರಿದುಂಬಿಸಲು,
ಸೋತವರಿಗೆ ಕರ್ತವ್ಯದ ಮನದಟ್ಟು ಮಾಡಿಸಲು,

ನಮ್ಮ ಸರಿತಪ್ಪುಗಳನ್ನು ಎತ್ತಿ ತೋರಿಸಲು
ಇಂದು ನೀವು ನಮ್ಮೊಟ್ಟಿಗೆ ಇದ್ದೇ ಇರಬೇಕಿತ್ತು

ನಾವೆಲ್ಲರೂ ಇಂದು ಒಟ್ಟಿಗಿದ್ದಿದ್ದಲ್ಲಿ
ನೆಲದ ದಮನಿಗೆ ಕಿವಿಗೊಟ್ಟಿದ್ದಲ್ಲಿ
ಒಮ್ಮನಸಿನ ಹಾದಿ ಹಿಡಿದಿದ್ದಲ್ಲಿ
ಜನಶಕ್ತಿಯ ಜೊತೆಗೇ ಉಳಿದಿದ್ದಲ್ಲಿ
ಜನಹೋರಾಟದ ರಂಗು ಏರಿರುತ್ತಿತ್ತು
ಈ ದಿನದ ಕಳೆ ಬೇರೆಯದೇ ಆಗಿರುತ್ತಿತ್ತು,

ಆದರೆ ಇಂದು ನೀವು ನಮ್ಮೊಂದಿಗಿಲ್ಲ
ಆದರೂ ನಿಮ್ಮೊಂದಿಗೆ ಮಾತನಾಡಲಿಕ್ಕಿದೆಯಲ್ಲ
ನಮ್ಮ ಗುರಿ ಒಂದೇ ಆಗಿದ್ದರೂ- ದಾರಿ ಬೇರೆಯಾದವು
ಯಾವುದು ಸರಿ- ಕಾಲವೇ ನಿರ್ಧರಿಸಬೇಕು
* * *

ಬೇರೆಯಾಗುವ ಮುನ್ನ:
ಇತರೆ ಸಮಾಜಗಳ ಜೊತೆಗಿನ ಸಾಮ್ಯತೆಗೆ ನೀವು ಒತ್ತುಕೊಟ್ಟಿರಿ
ನಮ್ಮ ಸಮಾಜದ ಭಿನ್ನತೆಗೆ ನಾವು ಒತ್ತು ಕೊಟ್ಟೆವು.
ಕಾಲಚಕ್ರ ಮುಂದಕ್ಕೆ ಉರುಳಿಲ್ಲ- ನಿಮಗನಿಸಿತು
ಯಾವುದೂ ಹಾಗೇ ಉಳಿದಿಲ್ಲ- ನಮಗನಿಸಿತು
ಸಶಸ್ತ್ರ ಪಥವೇ ಪ್ರಧಾನ- ನೀವೆಂದಿರಿ
ಪ್ರಜಾಪಂಥವೇ ಪ್ರಧಾನ- ನಾವೆಂದವು.

ಅಲ್ಲ ಎನಿಸಿದರೂ ಒಲ್ಲೆ ಎನ್ನದೆ
ನೀವು ತೋರಿದ ಹಾದಿಯಲ್ಲೆ ಅಡಿ ಇಟ್ಟೆವು
ಕಾಲುಗಳು ಹುದುಗಿಕೊಂಡವು

ಜನಸಾಗರದೊಳಗಲ್ಲ
ಸಮಸ್ಯೆಗಳ ಆಗರದೊಳಗೆ
ಒಂದೊಂದೇ ಕಾಲುಗಳು ಕುಸಿಯತೊಡಗಿದವು
ಕ್ರಾಂತಿಯ ಉಜ್ವಲ ಕನಸುಗಳೊಂದಿಗೆ
ನೀವು ತೋರಿದ ಹಾದಿ ನುಂಗತೊಡಗಿತು
ನಿಮ್ಮನ್ನೂ ಸಹ ಬಿಡದೆ

ಮಾಡುವುದೆಂತು?
ಕಾಲಕೆಳಗಣ ಭೂಮಿ ಕುಸಿಯುತ್ತಿದ್ದರೂ
ಕೊರಳ ಬಳಸಿದ ಬಿಳಲಿನ ಹಾರವ ತೆಗೆಯಬಾರದೆಂದರು
ಮರದ ಜೊತೆಗಿನ ಅಂಟು ಹರಿದರೂ
ನೆಲದ ಜೊತೆಗಿನ ನಂಟು ಉಳಿಯಬೇಕೆಂದೆವು
ಮೂಲ ಮರದ ಜೊತೆ ಅವರು ಉಳಿದರು
ನವ ನೆಲೆ ಅರಸುತ್ತಾ ನಾವು ಹೊರಟೆವು

ಪಕ್ಷವನ್ನು ತೊರೆಯುವುದೆಂದರೆ
ಕ್ರಾಂತಿಯನ್ನು ತೊರೆದಂತೆ- ಅವರೆಂದರು
ಜನರನ್ನು ತೊರೆದರೆ ಕ್ರಾಂತಿಯೇ ಹಳಿ ತಪ್ಪಿದಂತೆ- ನಾವಂದೆವು

ಕಮರುತ್ತಿದ್ದ ಕ್ರಾಂತಿಯ ಸಸಿಯನ್ನು ಉಳಿಸಿ ಬೆಳೆಸಲು
ಇದ್ದಬಿದ್ದ ಮಣ್ಣು, ನೀರು, ಗೊಬ್ಬರದೊಂದಿಗೆ
ಕೃಷಿ ಮಾಡುತ್ತಿದ್ದೇವೆ.

ಹಲವು ತಪ್ಪು, ಮಿತಿ, ಕೊರತೆಗಳ ನಡುವೆಯೂ
ಕಷ್ಟ ಜೀವಿಗಳೊಂದಿಗಿನ, ದೀನದಲಿತರೊಂದಿಗಿನ,
ಮಹಿಳೆ ಮತ್ತು ಅಲ್ಪಸಂಖ್ಯಾತರೊಂದಿಗಿನ ಒಡನಾಟ ಬೆಳೆಯತೊಡಗಿದೆ

'ಪ್ರಜಾತಾಂತ್ರಿಕ ಹೋರಾಟಕ್ಕಾಗಿ ಮುಖ್ಯವಾಹಿನಿಗೆ ಬರಲು ಸಿದ್ಧ'

ನಕ್ಸಲ್ ನಾಯಕರೊಂದಿಗೆ ಒಂದು ಪತ್ರಿಕಾಗೋಷ್ಠಿ

ನಮ್ಮ ಪತ್ರಿಕಾ ತಂಡಕ್ಕೆ ಅದೊಂದು ಅನಿರೀಕ್ಷಿತ ಆಮಂತ್ರಣ. ಯಾಕೆಂದರೆ ಆಮಂತ್ರಣ ಬಂದದ್ದು ಕ್ರಾಂತಿಕಾರಿ ಕಮ್ಯುನಿಸ್ಟ್ ಪಾರ್ಟಿ (ಆರ್‌ಸಿಪಿ) ಅರ್ಥಾತ್ ವಿಭಜಿತ ನಕ್ಸಲೈಟ್ ಪಡೆಯ ಒಂದು ಗುಂಪಿನಿಂದ!

ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರದಲ್ಲಿ ನಕ್ಸಲರನ್ನು ಮುಖ್ಯವಾಹಿನಿಗೆ ಕರೆತರುವ ಹಲವಾರು ಪ್ರಯತ್ನಗಳು ನಡೆದದ್ದು, ಅದಕ್ಕೆ ಪೂರಕವಾಗಿ ಸಿಎಂ ಸಿದ್ದರಾಮಯ್ಯ ಸ್ಪಂದಿಸಿದ್ದು, ಹಿರಿಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ನೇತೃತ್ವದಲ್ಲಿ ಸಾಹಿತಿಗಳ-ಬುದ್ಧಿಜೀವಿಗಳ 'ಶಾಂತಿಗಾಗಿ ನಾಗರೀಕರ ವೇದಿಕೆ' ಮಧ್ಯಸ್ಥಿಕೆ ವಹಿಸಿದ್ದು; ಇವೆಲ್ಲವನ್ನೂ ಗಮನಿಸುತ್ತಲೇ ಇದ್ದ ನಾವು ಸಮಾಜದ ಮಹತ್ತರ ಮನ್ವಂತರದಲ್ಲಿ ಸಣ್ಣದೊಂದು ಪಾತ್ರ ನಿಭಾಯಿಸಲು ಸಿದ್ಧರಾದೆವು. ನಮಗೆ ಇದ್ದ ಮಾಹಿತಿಯಾದರು ಸಶಸ್ತ್ರ ಹೋರಾಟದ ಮಾರ್ಗವನ್ನು ಒಪ್ಪದೆ ಹೊರಬಂದ



ನಕ್ಸಲ್ ಪಡೆಯ ಒಂದು ಗುಂಪಿನ ಇಬ್ಬರು ಪ್ರತಿನಿಧಿಗಳು ಪತ್ರಿಕಾಗೋಷ್ಠಿ ನಡೆಸಲಿದ್ದಾರೆ ಎಂಬುದಷ್ಟೆ.


ಸಿಕ್ಕ ಸೂಚನೆಗಳನ್ನು ಅನುಸರಿಸಿ ನಮ್ಮ ತಂಡ ಸ್ಥಳಕ್ಕೆ ಹೋದಾಗ ಅಲ್ಲಾಗಲೆ ನಮ್ಮಂತೆಯೇ ರಾಜ್ಯದ ಬೇರೆ ಬೇರೆ ಪತ್ರಿಕೆಯ ಹಲವಾರು ಪತ್ರಿಕಾ ಮಿತ್ರರು ಸೇರಿದ್ದರು. ನಮ್ಮಂತೆಯೆ ವಿವಿಧ ಪತ್ರಿಕೆಗಳಿಗೂ ಇಂತಹ ಆಹ್ವಾನ ತಲುಪಿಯಾಗಿತ್ತು, ಎಲ್ಲರ ಮುಖದಲ್ಲೂ ಅದೇ ಕೌತುಕಗಳು. ಸ್ವಲ್ಪ ಹೊತ್ತಿನಲ್ಲಿಯೇ ಇಬ್ಬರು ಆಗಂತುಕರು ನಮ್ಮನ್ನು ಆತ್ಮೀಯವಾಗಿ ಸ್ವಾಗತಿಸಿದರು. ನಮ್ಮಲ್ಲಿ ಕೆಲವರಿಗೆ ಅವರ್‍ಯಾರೆಂಬುದು ತಿಳಿಯಲಿಲ್ಲ, ಈ ಗೊಂದಲವನ್ನು ಅರ್ಥ ಮಾಡಿಕೊಂಡ ಅವರಿಬ್ಬರಲ್ಲಿ ಒಬ್ಬರು ತಮ್ಮನ್ನು ಸಿರಿಮನೆ ನಾಗರಾಜ್ ಅಂತಲೂ ಮತ್ತೊಬ್ಬರನ್ನು ನೂರ್ ಜುಲ್ಫೀಕರ್ (ನೂರ್ ಶ್ರೀಧರ್) ಅಂತಲೂ ಪರಿಚಯಿಸಿಕೊಂಡರು.

ಯಾರೋ ಒಂದಿಬ್ಬರು ಪ್ರತಿನಿಧಿಗಳು ಬಂದು ಮಾತನಾಡಬಹುದೆಂದು ನಿರೀಕ್ಷಿಸಿದ್ದ ನಮಗೆಲ್ಲ ಅಚ್ಚರಿ. ಯಾಕೆಂದರೆ ಕರ್ನಾಟಕ ನಕ್ಸಲ್ ಚಳವಳಿಯ ಪ್ರಮುಖ ಶಕ್ತಿಗಳಲ್ಲಿ ಅವರಿಬ್ಬರನ್ನೂ ಗುರುತಿಸಲಾಗುತ್ತದೆ. ಅಲ್ಲದೆ ನಕ್ಸಲ್ ಪಾರ್ಟಿ ಇಬ್ಭಾಗವಾದ ನಂತರ ಸಶಸ್ತ್ರ ಹೋರಾಟದ ಮಾರ್ಗವನ್ನು ಧಿಕ್ಕರಿಸಿ ಪ್ರಜಾತಾಂತ್ರಿಕ ಹೋರಾಟ ಮಾರ್ಗದಲ್ಲಿ ಮುನ್ನುಗ್ಗುತ್ತಿರುವ ಕ್ರಾಂತಿಕಾರಿ ಕಮ್ಯುನಿಸ್ಟ್ ಪಾರ್ಟಿಯ ಆಧಾರಸ್ತಂಭಗಳೇ ಅವರು. ಸರ್ಕಾರ ಮತ್ತು ಪೊಲೀಸ್ ಇಲಾಖೆಗಳು ಇಬ್ಬರ ತಲೆಗೂ ಲಕ್ಷಾಂತರ ರೂಪಾಯಿ ಇನಾಮೂ ಘೋಷಿಸಿವೆ! ಅಂತವರು ನಮ್ಮ ಮುಂದೆ ಸರ್ವೇಸಾಮಾನ್ಯರಂತೆ ತಣ್ಣಗೆ ಕುಳಿತಿದ್ದರು.

ಆರಂಭಿಕ ಸಾರಾಂಶವಾಗಿ ನಮಗೆ ತಿಳಿದಿದ್ದೇನೆಂದರೆ 'ಶಾಂತಿಯುತ ಮಾತುಕತೆಗೆ ಮುಂದೆ ಬರಲಿ ಪರಿಶೀಲಿಸೋಣ' ಎನ್ನುವ ಸರ್ಕಾರದ ಹೇಳಿಕೆಗೆ ಪ್ರತಿಕ್ರಿಯೆಯಾಗಿ ತಮ್ಮ ಬೇಡಿಕೆಗಳ ಸಮೇತ ಮಾತುಕತೆಗೆ ಸಿದ್ಧವಿರುವುದಾಗಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡುವುದೇ ಅವತ್ತಿನ ಗೋಷ್ಠಿಯ ಉದ್ದೇಶವಾಗಿತ್ತೆಂಬುದು. ಮೊದಲು ಮಾತು ಆರಂಭಿಸಿದ ಸಿರಿಮನೆ ನಾಗರಾಜ್ ತಮ್ಮ ಪರಿಚಯವನ್ನು ನಮ್ಮ ಮುಂದಿಟ್ಟರು. ಅವರ ಪರಿಚಯವನ್ನು ಸಂಕ್ಷೇಪಿಸಿ ಹೇಳುವುದಾದರೆ ಮೂಲತಃ ಅವರದು ಶೃಂಗೇರಿ ತಾಲ್ಲೂಕಿನ ಸಿರಿಮನೆ. ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆಗೆ ಹಾಯ್ದುಕೊಂಡಂತ ಅಪ್ಪಟ ಮಲೆನಾಡಿನ ಹಳ್ಳಿ. ಮೈಸೂರಿನಲ್ಲಿ ತಮ್ಮ ಶಿಕ್ಷಣವನ್ನು ಪೂರೈಸಿದ ಅವರು ಕೆಲಕಾಲ ಅಂಚೆತಂತಿ ಇಲಾಖೆಯಲ್ಲಿ ಸರ್ಕಾರಿ ನೌಕರನಾಗೂ ದುಡಿದಿದ್ದರಂತೆ. ಸುಮಾರು ಏಳು ವರ್ಷಗಳ ಸರ್ಕಾರಿ ವೃತ್ತಿ ಬದುಕಿಗೆ ಇತಿಶ್ರೀ ಹಾಡಿದ ನಾಗರಾಜ್ ಸಮಾಜಮುಖಿ ಚಟುವಟಿಕೆಗಳಲ್ಲಿ, ಜನಾಂದೋಲನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಆರಂಭದಲ್ಲಿ ಅವರು ಆರ್.ಎಸ್.ಎಸ್.ನ ಕಟ್ಟಾ ಕಾರ್ಯಕರ್ತನಾಗಿದ್ದರೂ ಅದರೊಳಗಿನ ದುಷ್ಟತೆ, ಮುಸ್ಲಿಂದ್ವೇಷಿ ಕೋಮುತಾಪವನ್ನು ತಾಳದೆ ಹೊರಬಂದು ದಲಿತ ಚಳವಳಿ, ರೈತ ಸಂಘದ ಹೋರಾಟಗಳಲ್ಲಿ ಸಕ್ರಿಯರಾಗಿದ್ದುಕೊಂಡೇ 'ಆಂದೋಲನ' ಪತ್ರಿಕೆಯಲ್ಲಿ ಒಂದೂವರೆ ವರ್ಷ ಕೆಲಸ ಮಾಡಿದ್ದರು. ಅಷ್ಟರಲ್ಲಾಗಲೆ ತನ್ನ ಹುಟ್ಟೂರಲ್ಲಿ 'ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆ' ನೆಪದಲ್ಲಿ ಜನರನ್ನು ಒಕ್ಕಲೆಬ್ಬಿಸುವ ಕಾರ್ಯ ಆರಂಭವಾಗಿತ್ತು. ಹಾಗಾಗಿ ಅದರ ಹೋರಾಟದಲ್ಲಿ ತೊಡಗಿಸಿಕೊಂಡಿದ್ದರು. ಆ ಹೋರಾಟ ಅವರನ್ನು ಮಾವೋವಾದಿ ಪೀಪಲ್ಸ್ ವಾರ್ ಪಾರ್ಟಿಯೊಂದಿಗೆ ನಂಟು ಹಾಕಿಸಿತ್ತು, ಅಲ್ಲಿಂದಾಚೆಗೆ ಅವರು ಪಾರ್ಟಿಯ ನೇತೃತ್ವದಲ್ಲಿ ಬೀದರ್ ಗುಲ್ಬರ್ಗಾಗಳಲ್ಲಿ ರಾಸಾಯನಿಕ ಪರಿಸರ ಮಾಲಿನ್ಯ ಹೋರಾಟ, ನೈಸ್ ವಿರೋಧಿ ಹೋರಾಟ, ರಾಷ್ಟ್ರೀಯ ಉದ್ಯಾನ ವಿರೋಧಿ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾ ಪೊಲೀಸ್ ದಾಖಲೆಗಳಲ್ಲಿ 'ವಾಂಟೆಡ್' ಆಗುತ್ತಲೇ ಬಂದರು.

ಸಿರಿಮನೆ ನಾಗರಾಜ್ ಮಾತು ಮುಗಿಸಿದ ನಂತರದ ಸರಧಿ ನೂರ್ ಶ್ರೀಧರ್‌ದಾಗಿತ್ತು, ತನ್ನ ಮೊದಲನೇ ಪತ್ರಿಕಾಗೋಷ್ಠಿ ಎನ್ನುವ ತುಸು ಸಂಕೋಚದಲ್ಲೇ ಆರಂಭವಾದ ಶ್ರೀಧರ್ ಮಾತು ಮುಂದಿನ ಕೆಲಕ್ಷಣಗಳಲ್ಲೆ ತುಂಬಾ ಸ್ಪಷ್ಟತೆ, ನಿಖರತೆ, ಚಿಂತನೆಯ ಮುತ್ಸದ್ದಿತನಗಳನ್ನು ಪಡೆದುಕೊಳ್ಳಲಿವೆಯೆಂಬ ಅಂದಾಜು ನಮಗೆ ಇರಲಿಲ್ಲ. ತಮ್ಮ ಪರಿಚಯವನ್ನು ಕೆಲವೇ ಮಾತುಗಳಿಗೆ ಸೀಮಿತಗೊಳಿಸಿದ ಶ್ರೀಧರ್ ತಾನೊಬ್ಬ **drop-out** ಇಂಜಿನಿಯರಿಂಗ್ ವಿದ್ಯಾರ್ಥಿ; ಮನೆಯಲ್ಲಿಟ್ಟ ಹೆಸರು ನೂರ್ ಜುಲ್ಫೀಕರ್ ಆದರೂ ಸಂಘಟನೆ ತನಗೆ ಕೊಟ್ಟ ಹೆಸರು ಶ್ರೀಧರ್ ಎಂದಷ್ಟೆ ತಮ್ಮನ್ನು ತೆರೆದಿಟ್ಟರು. ಆನಂತರದ ಅವರ ಮಾತುಗಳೆಲ್ಲವೂ ಕರ್ನಾಟಕದಲ್ಲಿ ನಕ್ಸಲ್ ಚಳವಳಿಯ ಹೋರಾಟ, ಸಫಲತೆ, ವೈಫಲ್ಯತೆ, ವೈರುಧ್ಯತೆ, ಅಸಹಾಯಕತೆ, ಇಬ್ಭಾಗವಾಗುವಿಕೆ, ಸರ್ಕಾರದ ದಮನಕಾರಿ ಕಾರ್ಯತಂತ್ರ, ಮುಖ್ಯವಾಹಿನಿಗೆ ತಾವು ಬರುವ ಅನಿವಾರ್ಯತೆ, ಅಗತ್ಯತೆಗಳ ಸುತ್ತಲೇ ಕೇಂದ್ರಿತವಾಗಿದ್ದವು.

ಸುಮಾರು ಮೂವತ್ತೂರು ವರ್ಷಗಳಷ್ಟು ಸುದೀರ್ಘ (ಆರಂಭಿಕ ಕೆಲ ವರ್ಷಗಳ ನಕ್ಸಲ್ ಪಥವನ್ನು ಅವರು ಹೋರಾಟಕ್ಕಿಂತ ಹೆಚ್ಚಾಗಿ **construction** ಮತ್ತು **Perceptive** ಅವಧಿಗಳೆಂದು ಪರಿಗಣಿಸಿದರು) ಕರ್ನಾಟಕ ನಕ್ಸಲ್ ಹೋರಾಟದ ಕಠಿಣ ಹಾದಿಯನ್ನು ಸರಳವಾಗಿ ತೆರೆದಿಟ್ಟ ಶ್ರೀಧರ್ ಮಾತಿನುದ್ದಕ್ಕೂ ಪ್ರಜಾಪೂರಕ ಚಳವಳಿಯೊಂದು ಪ್ರಾದೇಶಿಕ ಸ್ಥಿತಿ-ಗತಿಗಳಿಗೆ ತನ್ನನ್ನು ಪುನರ್‌ರಚಿಸಿಕೊಳ್ಳಲಾಗದೆ ಸೊರಗಿದ ಖೇದ ಪ್ರತಿಧ್ವನಿಸುತ್ತಲೇ ಇತ್ತು. ಅವರ ಅಷ್ಟೂ ಮಾತುಗಳನ್ನು ಸಂಕಲಿಸಿ ನೋಡಿದಾಗ ಮಾವೋವಾದಿ ಚಿಂತನೆ ಮತ್ತು ಹೋರಾಟ ಮಾರ್ಗಗಳನ್ನು ಅನುಷ್ಠಾನಗೊಳಿಸಲು ಭಾರತವನ್ನು ಇಡಿಯಾಗಿ ಅರ್ಥೈಸಿಕೊಳ್ಳುವಲ್ಲಿ ನಕ್ಸಲ್ ಚಳವಳಿ ಎಡವಿದೆ ಎಂಬ ಅಂಶ ಸ್ಪಷ್ಟವಾಯಿತು. ಅದು ಭಾರತವನ್ನು 'ಅರೆ ಊಳಿಗಮಾನ್ಯ-ಅರೆ ವಸಾಹತುಶಾಹಿ' **(semi feudal semi colonial)** ದೇಶವನ್ನಾಗಿ ಅರ್ಥಮಾಡಿಕೊಂಡು (ಮಾವೋ ತನ್ನ ಹೋರಾಟವನ್ನು ಆರಂಭಿಸಿದಾಗ ಚೀನಾದಲ್ಲಿ ಇದ್ದಂತಹ ಸ್ಥಿತಿ-ಗತಿ) ಅದಕ್ಕೆ ಅನುಗುಣವಾಗಿಯೇ ತನ್ನ ಯೋಜನೆಗಳನ್ನು ರೂಪಿಸಿತ್ತು. ಆದರೆ ಶ್ರೀಧರ್‌ರ ಪ್ರಕಾರ ಭಾರತ ಈಗ ಊಳಿಗಮಾನ್ಯ, ವಸಾಹತುಶಾಹಿ ರಾಷ್ಟ್ರವಾಗಿದ್ದರೂ ಅವೆರಡರ ಮೇಲೂ ಬಂಡವಾಳಶಾಹಿಗಳ ಹಿಡಿತವಿದೆ. ಊಳಿಗಮಾನ್ಯತೆ ಯಥಾವತ್ ತನ್ನ ಸನಾತನ ರೂಪದಲ್ಲಿ ಪ್ರಕಟವಾಗದೆ ಜಾಗತೀಕರಣದ ಪ್ರಭಾವಳಿಯಲ್ಲಿ ಅಧಿಕಾರಶಾಹಿ ಬಂಡವಾಳಿಗರ ರೂಪದಲ್ಲಿ ವ್ಯಕ್ತವಾಗುತ್ತಿದೆ. ವಿಶ್ವಬ್ಯಾಂಕ್, ಐಎಂಎಫ್‌ಗಳಂತವುಗಳು ವಸಾಹತುಶಾಹಿಯನ್ನು ಮತ್ತೊಂದು ನವ್ಯ ರೀತಿಯಲ್ಲಿ ಹೇರುತ್ತಿವೆ. ಇಂತಹ ಸಂದರ್ಭದಲ್ಲಿ ನಕ್ಸಲ್ ಹೋರಾಟ ಒಂದು ಸಿದ್ಧಸೂತ್ರಕ್ಕೆ ಅಂಟಿ ಕುಳಿತದ್ದೇ ವಿಘಟನೆಯ ದಾರಿ ಹಿಡಿಯಲು, ಜನಬೆಂಬಲ ಗಳಿಸದಿರಲು ಮುಖ್ಯ ಕಾರಣವಾಗಿರಬಹುದೆನ್ನುವ ವಿಷಾದವೂ ಶ್ರೀಧರ್‌ಗಿತ್ತು.



ಇಂತಹ ಸೈದ್ಧಾಂತಿಕ ಭಿನ್ನಾಭಿಪ್ರಾಯವೇ ನಕ್ಸಲ್ ತಂಡವನ್ನು ಇಬ್ಭಾಗವಾಗಿಸಿದೆ ಎಂದ ಶ್ರೀಧರ್, ಅದರ ವೃತ್ತಾಂತವನ್ನು ಸಂಕ್ಷಿಪ್ತವಾಗಿ ಬಿಚ್ಚಿಟ್ಟರು. ನಕ್ಸಲ್ ಹೋರಾಟ ಮಾರ್ಗದ ಕುರಿತೇ ಇಂತಹ ವೈರುಧ್ಯತೆಗಳು ತಲೆ ಎತ್ತಿದಾಗ ಸಹಜವಾಗೇ ಕರ್ನಾಟಕ ನಕ್ಸಲ್ ಚಳವಳಿಯೊಳಗೆ ಬಿರುಕು ಮೂಡಿಸಿತ್ತು. ಆ ವೇಳೆಗಾಗಲೆ ಹೈದ್ರಾಬಾದ್-ಕರ್ನಾಟಕದಲ್ಲಿ ಊಳಿಗಮಾನ್ಯದ ವಿರುದ್ಧ ಹಾಗೂ ಪರಿಸರ ಸಂರಕ್ಷಣೆಯ ಚಳವಳಿ ನಡೆಸಿ ಮಿಶ್ರಪ್ರತಿಫಲ ಕಂಡಿದ್ದ ನಕ್ಸಲರ ತಂಡ ಮಲೆನಾಡ ತಪ್ಪಲಿನಲ್ಲಿ ಶುರುವಾಗಿದ್ದ ರಾಷ್ಟ್ರೀಯ ಉದ್ಯಾನವನ ಯೋಜನೆಯತ್ತ ಹೊರಳಲು ನಿರ್ಧರಿಸಿದ್ದರು. ಆಗ ಮತ್ತೊಮ್ಮೆ ಹೋರಾಟದ ಹಾದಿಯ ಚರ್ಚೆ ಎದುರಾಗಿತ್ತು. ಸಮಸ್ಯೆಗಳು ಒಂದೇ ಆದರು ಬಯಲುಸೀಮೆ ಮತ್ತು ಮಲೆನಾಡಿನ ಸಂದರ್ಭ, ಸನ್ನಿವೇಶಗಳು ವಿಭಿನ್ನವಾಗಿದ್ದು


⏭ 06

...ಹೋರಾಡುವ ಶಕ್ತಿಗಳ ನಡುವೆ ಸಮನ್ವಯವನ್ನು ಬೆಳೆಸಲು,
...ಮಲೆನಾಡಿನಲ್ಲಿ ಕಾಲೂರುತ್ತಲೇ ಇತರೆ ಕ್ರಾಂತಿಕಾರಿಗಳ ಜೊತೆಗೂಡಲು,
...ಬಯಸುತ್ತಿದೆ, ತುಡುಕಾಡುತ್ತಿದೆ.
* * *

...ಮ್ರೇಡ್ ಸಾಕಿ,
...ಳೆ ಕಹಿಯ ಬದಿಗಿಟ್ಟು, ಹಳೆ ಕನ್ನಡಕಗಳ ತೆಗೆದಿಟ್ಟು
...ಮಾತನಾಡೋಣ, ಕಂಡದ್ದನ್ನು ಕಂಡಹಾಗೇ ಹಂಚಿಕೊಳ್ಳೋಣ.
...ಯಾವುದು ಸರಿ ಇತ್ತು? ತಪ್ಪು ಎಲ್ಲಿ ನುಸುಳಿತ್ತು?
...ನ್ನು ನೇರ ಮಾತಿಗೆ, ಮೊನಚು ವಿಮರ್ಶೆಗೆ
...ಮನಸ್ಸನ್ನು ತೆರೆದಿಟ್ಟು ಕುಂತಿದ್ದೇವೆ
... ಇರುವುದಕ್ಕೆ ಶಿರಬಾಗಿ ಶರಣೆನ್ನುತ್ತೇವೆ
...ಬ್ಬೊಂದಲೂ ಅದನ್ನೇ ನಿರೀಕ್ಷಿಸುತ್ತೇವೆ.

ನಿಮಗೇನೆನಿಸುತ್ತೆ?
ಮರದ ಜೊತೆ ನಿಂತವರಿಗೆ
ಆಲದ ಅಷ್ಟೊಂದು ಆಸರೆ ಇದ್ದರೂ
ಆಧರಿಸಿದವರ ಶಕ್ತಿ ಕುಂದುತ್ತಲೇ ಹೋದದ್ದೇಕೆ?
ಬಂದೂಕು ಬಿಡದಿದ್ದರೂ ಸಶಸ್ತ್ರ ಸಂಗ್ರಾಮ ಬೆಳೆಯಲಿಲ್ಲವೇಕೆ?

ಇದೊಂದು ವಿಚಿತ್ರ ವೈರುಧ್ಯವಲ್ಲವೇನು?
ಕನಸು ಕೈಜಾರಿ ಹೋಗುತ್ತಿದ್ದರೆ
'ಸದಾ ಇದೇ ಪಥ' ಎಂದು ಹೊರಡುವುದೇ 'ತಪ್ಪು ಪಥ' ಅಲ್ಲವೇನು?
ಪಥದಲ್ಲಿ ಇರುವ ತಪ್ಪನ್ನು ಒಪ್ಪಿಕೊಳ್ಳದಿದ್ದರೆ
ಸರಿಮಾರ್ಗ ಸಿಗಲಾದರೂ ಸಾಧ್ಯವೇನು?
* * *
ಆಡಿದ್ದನ್ನು ಆಚರಿಸಬೇಕೆಂದರೆ,



ಇರುವುದನ್ನು ಬದಲಿಸಬೇಕಾದರೆ,
ಮೊದಲು ನಾವು ಬದಲಾಗಬೇಕು,
ಮತ್ತಕ ಬಿರಿಯುವ ಸಂಗ್ರಾಮ ನಡೆಯಬೇಕು,
ನಮ್ಮೊಳಗಿನ ಶತ್ರು ಸಾಯಬೇಕು,
ನಮ್ಮೆದೆಯ ಶಕ್ತಿ ಹೊರಹರಿಯಬೇಕು.

ಪಕ್ಷ ಬೆಳೆಯುವುದೆಂದರೆ ಪರಿಪಕ್ವ ಸಮಷ್ಟಿ ರೂಪಗೊಳ್ಳಬೇಕು.
ಸಮಷ್ಟಿ ಉಗಮಿಸಬೇಕೆಂದರೆ ಸ್ವಾರ್ಥ ಅಳಿಯಬೇಕು
'ನಾನು' ಸಾಯಬೇಕು, 'ನಾವು' ಬೆಳೆಯಬೇಕು.

ನಡೆಯುವ ರಭಸ ಹೆಚ್ಚಬೇಕಾದರೆ,
ತಪ್ಪಡಿ ಇಕ್ಕುವುದು ಕಡಿಮೆಯಾಗಬೇಕು,
ಎರಡು ಕಣ್ಣುಗಳೂ ತೀಕ್ಷ್ಣವಾಗಿರಬೇಕು, ಸದಾ ತೆರೆದಿರಬೇಕು.
* * * *
ನಮ್ಮ ಕಣ್ಣುಗಳು ಕುರುಡಾಗಿಲ್ಲ,
ಸಾಧಿಸುವ ಛಲ ಸೋತು ಕುಂತಿಲ್ಲ,
ಸಾಧ್ಯತೆಯ ಬಾಗಿಲುಗಳು ಮುಚ್ಚಿಹೋಗಿಲ್ಲ,
ಸಾಗಿಹ ದಿಕ್ಕು ಪಡವಾದ ಕಡೆಗಿಲ್ಲ,
ಎಲ್ಲಕ್ಕಿಂತ ಮಿಗಿಲಾಗಿ
ಅಂತರಾತ್ಮದಿಂದ ನೀವು ಅಳಿಸಿಹೋಗಿಲ್ಲ,
ಅಳಿಸಿಹೋಗುವುದೂ ಇಲ್ಲ.

ನೀವಿರುತ್ತೀರಿ, ನೀವಿರಬೇಕು
ಅಗಲಿದ ಸಂಗಾತಿಗಳು, ಅಲೆಯುತ್ತಿರುವ ಸಂಗಾತಿಗಳು,
ಸರಳ ಹಿಂದೆ ಸೇರಿರುವ ಸಂಗಾತಿಗಳು, ಎಲ್ಲರೂ ನಮ್ಮೊಳಗಿರಬೇಕು.
ಕರ್ತವ್ಯದ ಕರೆಯ ಹರಿಕಾರರಾಗಿ, ಇರುಳ ಕಾಯುವ ಹಣತೆಗಳಾಗಿ
ನಮ್ಮೆದೆಯ ಕ್ರಾಂತಿ ದೀಪಗಳಾಗಿ, ಸದಾ ನಮ್ಮೊಳಗಿನ ಸಾಕ್ಷಿಪ್ರಜ್ಞೆಗಳಾಗಿ.

● ನೂರ್ ಶ್ರೀಧರ್

ಪತ್ರಿಕಾಗೋಷ್ಠಿಯ ಆಯ್ದ ಭಾಗಗಳು

ಸಿರಿಮನೆ ನಾಗರಾಜ್ ಹಾಗೂ ನೂರ್ ಶ್ರೀಧರ್‌ರವರ ಪತ್ರಿಕಾಗೋಷ್ಠಿಯ ನಂತರ ನಡೆಸಿದ ಸಂದರ್ಶನದ ಮುಖ್ಯಾಂಶಗಳು ಇಲ್ಲಿವೆ.

ಪ್ರಶ್ನೆ: ನಿಮ್ಮಗಳ ಕಿರುಪರಿಚಯ ಹಾಗೂ ಕೌಟುಂಬಿಕ ಹಿನ್ನಲೆ ಬಗ್ಗೆ ಹೇಳಿ?

ಸಿರಿಮನೆ: ಕೊಪ್ಪ ತಾಲ್ಲೂಕಿನ ಸಿರಿಮನೆಯ ರೈತ ಕುಟುಂಬ ನಮ್ಮದು. ಮೊದಲು ಕೆಲಕಾಲ RSSನಲ್ಲಿದ್ದೆ. ಆದರೆ ಅದರ ಅಮಾನವೀಯ, ಅಸಹ್ಯ ಸಿದ್ಧಾಂತ ಒಪ್ಪಲಾಗದೆ ಹೊರಬಂದೆ. ಮೈಸೂರಿನಲ್ಲಿ ಅಂಚೆ ಇಲಾಖೆಯಲ್ಲಿ ಕೆಲವರ್ಷ ಕೆಲಸ ಮಾಡುವಾಗ ದಲಿತ ಸಂಘರ್ಷ ಸಮಿತಿಯಲ್ಲೂ ಸಕ್ರಿಯವಾಗಿದ್ದೆ. ನಂತರ ಸರ್ಕಾರಿ ಕೆಲಸ ತ್ಯಜಿಸಿ ಆಂದೋಲನದಲ್ಲಿ ಪತ್ರಕರ್ತನಾಗಿದ್ದು ಆಮೇಲೆ ಊರಿಗೆ ಹಿಂತಿರುಗಿ ಮುಂಜಾವು ಪತ್ರಿಕೆ ಆರಂಭಿಸಿದೆ. ಸಾಮಾಜಿಕ ನ್ಯಾಯ, ಪರಿಸರ ರಕ್ಷಣೆ, ಜನಸಾಮಾನ್ಯರಲ್ಲಿ ರಾಜಕೀಯ ಪ್ರಜ್ಞೆ ಬೆಳೆಸುವ ಕೆಲಸಗಳಲ್ಲಿ ಇದ್ದೆ. ಮುಂದೆ ಕರ್ನಾಟಕ ವಿಮೋಚನಾರಂಗ ಸೇರಿದೆ. ಗುಬ್ಬಗದ್ದೆ ಹೋರಾಟ, ಬೀದರ್‌ನ ಕೈಗಾರಿಕಾ ಮಾಲಿನ್ಯ ವಿರೋಧಿ ಹೋರಾಟ, ನೈಸ್ ರಸ್ತೆ ವಿರೋಧಿ ಚಳವಳಿಗಳಲ್ಲಿದ್ದೆ. ಬಂಧನ, ಜೈಲು ಕಂಡೆ. ಪೊಲೀಸರ ಕೇಸುಗಳೂ ಹೆಚ್ಚಾದವು. ಕೊನೆಗೆ ಎನ್‌ಕೌಂಟರ್ ಕೊಲೆ ಅಥವಾ ಜೈಲು ಎರಡೇ ಉಳಿದದ್ದು ಎಂಬ ಸನ್ನಿವೇಶ ಬಂದಾಗ ಭೂಗತನಾಗಿ ನನ್ನ ಕೆಲಸ ಮುಂದುವರೆಸಿದೆ. ಈಗ ಹೊಸ ಸರ್ಕಾರ 'ಮುಖ್ಯವಾಹಿನಿಗೆ ಬನ್ನಿ' ಎಂದಿರುವುದರಿಂದ ಆ ಬಗ್ಗೆ ಯೋಚಿಸಬಹುದು ಅನಿಸಿದೆ.

ನೂರ್ ಶ್ರೀಧರ್ : ನನ್ನದು ಚಿತ್ರದುರ್ಗ ಜಿಲ್ಲೆಯ ಭರಮಸಾಗರದ ಸಾಮಾನ್ಯ ರೈತ ಕುಟುಂಬ. ದುರ್ಗದಲ್ಲಿ ಇಂಜಿನಿಯರಿಂಗ್ ಓದುತ್ತಿದ್ದಾಗ ಕ್ರಾಂತಿಕಾರಿ ವಿದ್ಯಾರ್ಥಿ ಚಳವಳಿಯ ಪರಿಚಯವಾಯಿತು. ನಂತರ ಓದು ತ್ಯಜಿಸಿ ಪೂರ್ಣಾವಧಿ ರಾಜಕೀಯ ಕಾರ್ಯಕರ್ತನಾದೆ. ಕಳೆದೆರಡು ದಶಕದಲ್ಲಿ ಕರ್ನಾಟಕದ ಅನೇಕ ಜನಪರ ಚಳವಳಿಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಕೆಲಸ ಮಾಡುತ್ತಾ ಬಂದಿದ್ದೇನೆ. ಹೋರಾಟದ ಅನುಭವ, ಗ್ರಹಿಕೆ, ಮಾರ್ಕ್ಸ್‌ವಾದಿ ಹಾಗೂ ಮಾವೋವಾದಿ ಸಿದ್ಧಾಂತದ ಆಚರಣೆ ಕುರಿತಂತೆ 'ಭಾರತದ ಕ್ರಾಂತಿ ಮತ್ತು ಮಾವೋವಾದಿ ಚಳವಳಿ' ಎಂಬ ಪುಸ್ತಕ ಬರೆದಿದ್ದೇನೆ.

ಪ್ರಶ್ನೆ : ನಕ್ಸಲ್ ಹೋರಾಟದ ಬಗೆಗಿನ ನಿಮ್ಮ ಪ್ರಮುಖ ಭಿನ್ನಾಭಿಪ್ರಾಯವೇನು?

ಉತ್ತರ : ಅಸಂಖ್ಯ ಜನರ ತ್ಯಾಗ-ಬಲಿದಾನಗಳ ಮೂಲಕ ಬೆಳೆದುಬಂದ ಚಳವಳಿ ಅದು. ಆ ಹೋರಾಟಗಾರರ ಬದ್ಧತೆ ಹಾಗೂ ಪ್ರಾಮಾಣಿಕತೆಗಳ ಬಗ್ಗೆ ನಮಗೆ ಈಗಲೂ ಅಪಾರ ಗೌರವವಿದೆ. ಆದರೆ ಭಾರತಕ್ಕೆ/ಕರ್ನಾಟಕದ ಸಮಾಜ ಬದಲಾವಣೆಗೆ ಅನುಸರಿಸಬೇಕಾದ ಮಾರ್ಗ ಏನಾಗಿರಬೇಕೆಂಬುದೇ ಭಿನ್ನಾಭಿಪ್ರಾಯದ ಮುಖ್ಯಾಂಶವಾಗಿತ್ತು. ಹಲವು ದಶಕಗಳ ಹಿಂದೆ ಚೀನಾ ಕ್ರಾಂತಿಗೆ ಅಳವಡಿಸಿಕೊಂಡಿದ್ದ ವಿಧಾನವನ್ನೇ ಯಥಾವತ್ತಾಗಿ ಭಾರತಕ್ಕೂ ಅಳವಡಿಸಲಾಗುವುದಿಲ್ಲ. ಅಲ್ಲದೆ ವಿಭಿನ್ನ ಸ್ಥಿತಿಗತಿಗಳಿರುವ ಇಂಡಿಯಾದಲ್ಲಿ ಎಲ್ಲಾ ಕಾಲಕ್ಕೂ ಎಲ್ಲಾ ಕಡೆಯೂ ಸಶಸ್ತ್ರ ಹೋರಾಟವನ್ನೇ ಪ್ರಧಾನ ಮಾಡಿಕೊಳ್ಳುವ ಧೋರಣೆಯಿಂದಾಗಿ ಇಲ್ಲಿ ನೈಜ ಜನಪರ ಹಾಗೂ ಜನಸಾಮಾನ್ಯರ ಪಾಲ್ಗೊಳ್ಳುವಿಕೆಗೂ ತೊಡಕಾಗುತ್ತಿದೆ ಎಂಬುದು ನಾವು ಕಂಡುಕೊಂಡ ಅಂಶವಾಗಿದೆ. ಈ ಭಿನ್ನಾಭಿಪ್ರಾಯಗಳು ಬಗೆಹರಿಯದೇ ಹೋದ ಕಾರಣ ನಾವು ಕಳೆದ ದಶಕದಲ್ಲೇ ನಕ್ಸಲೀಯ ಚಳವಳಿಯಿಂದ ಹೊರಬಂದು ನಮ್ಮದೇ ಆದ ಹೊಸ ಹೋರಾಟದ ಹಾದಿ ರೂಪಿಸಲು ತೊಡಗಿದ್ದೇವೆ.

ಪ್ರಶ್ನೆ : ಸಾಕೇತ್ ಹತ್ಯೆಯ ನಂತರ ಏನೇನು ಬೆಳವಣಿಗೆಗಳಾದವು ಹೇಳುತ್ತೀರಾ?

ನೂರ್ ಶ್ರೀಧರ್ : ನನ್ನನ್ನು ಪಾರ್ಟಿಯ ಸೆಕ್ರೆಟರಿಯಾಗುವಂತೆ ಕೇಳಲಾಯಿತು. ಆದರೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದ ನಾನು ನಿರಾಕರಿಸಿದೆ. ಅಲ್ಲದೆ ಮಲೆನಾಡಿನಲ್ಲಿ ಏಕಾಏಕಿ ಸಶಸ್ತ್ರ ಹೋರಾಟ ಆರಂಭಿಸುವ ಬಗ್ಗೆ ನಾನೂ ಸೇರಿದಂತೆ ಅನೇಕ ಸಂಗಾತಿಗಳಿಗೆ ಒಪ್ಪಿಗೆ ಇದ್ದವರಲ್ಲಿ ಪ್ರಮುಖರಾಗಿ ನವೀನ್ [illegible] ಕಾರ್ಯದರ್ಶಿಯಾದರು. ಸಶಸ್ತ್ರ ಹೋರಾಟಕ್ಕೆ ಆದ್ಯತೆ ನೀಡುವ ಬದಲಾಗಿ ಜನರನ್ನು ತೊಡಗಿಸುವ ಸಾಮೂಹಿಕ ಪ್ರಬಲ ಚಳವಳಿ ಕಟ್ಟಬೇಕೆಂದು ಪ್ರತಿಪಾದಿಸುತ್ತಿದ್ದ ನಾವೆಲ್ಲ ನಕ್ಸಲೈಟ್ ಪಕ್ಷದೊಂದಿಗೆ ಸಂಘರ್ಷ ನಡೆಸುತ್ತಲೇ ಬಂದು ಕೊನೆಗೆ 2006ರಲ್ಲಿ ಪಕ್ಷ ಬಿಟ್ಟು ಹೊರಬಂದೆವು.

ಪ್ರಶ್ನೆ : ನಿಮ್ಮ ಸೈದ್ಧಾಂತಿಕ ಭಿನ್ನಾಭಿಪ್ರಾಯದ ಇನ್ನಿತರ ವಿಚಾರಗಳೇನು?

ಉತ್ತರ : ಭಾರತದ ದುಡಿಯುವ ಜನತೆಯ ಪ್ರಮುಖ ಶತ್ರುವಾಗಿ ಯಾರನ್ನು ಗುರುತಿಸಬೇಕೆಂಬ ವಿಚಾರದಲ್ಲಿ ಅನೇಕ ಕಾಲದಿಂದ ತಾತ್ವಿಕ ಸಂಘರ್ಷ ನಡೆದಿದೆ. ಮಾವೋವಾದಿಗಳಿಗೆ ಊಳಿಗಮಾನ್ಯತೆ (Feudalism)ಯೇ ಈ ದೇಶದ ಪ್ರಮುಖ ಸಮಸ್ಯೆ ಅನಿಸಿದೆ. ಆದರೆ ಕಳೆದ ಮೂರು ದಶಕಗಳ ವಿದ್ಯಮಾನ ಗಮನಿಸಿದರೆ ವಿದೇಶಿ ಕಂಪನಿಗಳು (ಸಾಮ್ರಾಜ್ಯಶಾಹಿ) ಹಾಗೂ ಭಾರತದ ದಲ್ಲಾಳಿ ಬಂಡವಾಳಶಾಹಿ (Comprader bourgeoisie) ಮತ್ತು ಅಧಿಕಾರಶಾಹಿಗಳು ಭಾರತದ ಸರ್ಕಾರ ಹಾಗೂ ಇಡೀ ವ್ಯವಸ್ಥೆಯನ್ನು ನಿಯಂತ್ರಿಸುತ್ತಾ ಇರುವುದು ಕಾಣುತ್ತಿದೆ. ಊಳಿಗಮಾನ್ಯತೆ ಸಂಪೂರ್ಣ ಅಳಿದಿಲ್ಲವಾದರೂ ಗ್ರಾಮೀಣ ಭಾರತದ ಸ್ಥಿತಿಗತಿಗಳು ವೇಗವಾಗಿ ಬದಲಾಗುತ್ತಿವೆ ಎಂಬುದನ್ನು ನಾವು ಕಾಣುತ್ತಿದ್ದೇವೆ. ಹಾಗಾಗಿ ಇದನ್ನು ಖಚಿತವಾಗಿ ಅರ್ಥೈಸದೆ ಹಳೆಯ ಚೀನಾ ಮಾದರಿಯ ಹೋರಾಟದ ಹಾದಿ ಹಿಡಿಯುವಂತಾಗಿರುವುದು ಮಾರ್ಕ್ಸ್‌ವಾದಿ ಚಿಂತನೆಗಳನ್ನು ಅದರ ಸ್ಫೂರ್ತಿಯನ್ನು ನಿರ್ಲಕ್ಷಿಸಿ ಕೇವಲ ಯಾಂತ್ರಿಕವಾಗಿ ಅಳವಡಿಸುವ ತರದ ಅನೇಕ ಸಂಗತಿಗಳ ಬಗ್ಗೆ ಭಿನ್ನಾಭಿಪ್ರಾಯವಿದೆ. ಇದು ಭಾರತದ ಇನ್ನಿತರ ಅನೇಕ ಹೋರಾಟಗಾರರ ಅನಿಸಿಕೆಯೂ ಹೌದು.

ಪ್ರಶ್ನೆ : ಕರ್ನಾಟಕದಲ್ಲಿ ನಕ್ಸಲ್ ಚಳವಳಿ ಹಿನ್ನಡೆ ಕಂಡಿದೆಯಲ್ಲವೆ?

ಉತ್ತರ : ಕೇವಲ ನಕ್ಸಲ್ ಚಳವಳಿ ಮಾತ್ರವಲ್ಲ, ದಲಿತ, ರೈತ, ಕಾರ್ಮಿಕ ಚಳವಳಿಗಳೂ ಜಾಗತೀಕರಣದ ಈ ಕಾಲಘಟ್ಟದಲ್ಲಿ ಹಿನ್ನಡೆ ಅನುಭವಿಸುತ್ತಿವೆ. ಕರ್ನಾಟಕದಲ್ಲೀಗ ಡೆಮಾಕ್ರೆಟಿಕ್ ಆದ ಒಂದು ಮಿಲಿಟೆಂಟ್ ಸಮೂಹ ಚಳವಳಿಯನ್ನು ಕಟ್ಟಬಹುದಾಗಿದೆ. ಅದಕ್ಕೊಂದು ಯುನೈಟೆಡ್ ಫ್ರಂಟ್‌ನ ಅಗತ್ಯವೂ ಇದೆ.

ಪ್ರಶ್ನೆ : ಸಶಸ್ತ್ರ ಹೋರಾಟದ ಬಗ್ಗೆ ಈಗಿನ ನಿಮ್ಮ ನಿಲುವೇನು?

ಉತ್ತರ : ಮನುಷ್ಯ ಸಮಾಜದೊಳಗಿನ ಅನೇಕ ಬದಲಾವಣೆಗಳು ಹೋರಾಟ ಹಾಗೂ ಪ್ರತಿರೋಧದಿಂದಲೇ ಆಗಿವೆ. ಆದರೆ ಆಗೆಲ್ಲಾ ಡೆಮಾಕ್ರಸಿ ಇರಲಿಲ್ಲ. ಹಾಗಾಗಿ ಅಸ್ತ್ರಗಳೇ ಪ್ರಮುಖವಾಗಿದ್ದವು. ಆಗ ಡೆಮಾಕ್ರಸಿಯ ಕಲ್ಪನೆಯೂ ಇರಲಿಲ್ಲ. ಆದರೀಗ ಸಶಸ್ತ್ರ ಹೋರಾಟ ಒಂದೇ ಹಾದಿ ಅಂದುಕೊಂಡರೆ ಅದು ಮೂರ್ಖತನ ಅಷ್ಟೆ. violence ಸರಿಯಾದ ವಿಚಾರವೇನಲ್ಲ. ಯಾವುದೇ ಒಂದು ಹೋರಾಟದ ಡೈನಾಮಿಕ್ಸ್ ಸರ್ಕಾರದ ಧೋರಣೆ ಪ್ರತಿಕ್ರಿಯೆಗೆ ತಕ್ಕಂತೆ ತಿರುವು ಪಡೆಯುತ್ತಾ ಸಾಗುತ್ತದೆ. ಆದರೆ violence ಎನ್ನುವುದನ್ನು ನಮ್ಮ ಮನೋಬಯಕೆಯಾಗಿ ಪ್ರಾರಂಭಿಸಬಾರದು ಅಷ್ಟೆ.

ಪ್ರಶ್ನೆ : ಕರ್ನಾಟಕದ ಪರಿಸ್ಥಿತಿಯ ಬಗ್ಗೆ....!

ಉತ್ತರ : ಕರ್ನಾಟಕದ ಸಮಾಜ ಈಗೊಂದು ವಿಶಾಲ, ಬಹಿರಂಗ ಪ್ರಜಾಸತ್ತಾತ್ಮಕ ಚಳವಳಿಯನ್ನು ಕೇಳುತ್ತಿದೆ. ನಾವದರ ಭಾಗವಾಗಲು ಬಯಸುತ್ತಿದ್ದೇವೆ. ಇನ್ನೂ ನೇರವಾಗಿ ಹೇಳಬೇಕೆಂದರೆ ಸಶಸ್ತ್ರ ಹೋರಾಟ ಇಂದಿನ ಅಗತ್ಯವಲ್ಲ.

ಪ್ರಶ್ನೆ : ನಿಮ್ಮ ಪ್ರಕಾರ ಕರ್ನಾಟಕದ ಇವತ್ತಿನ ಪ್ರಮುಖ ಸಮಸ್ಯೆಗಳೇನು?

ಉತ್ತರ : ಇವತ್ತಿನ ಪರಿಸ್ಥಿತಿ ದಾರುಣವಾಗಿದೆ. ಕೃಷಿ collapse ಆಗುವ ಹಂತಕ್ಕೆ ಬಂದು ನಿಂತಿದೆ. ಕೃಷಿರಂಗದ input ಹಾಗೂ output ಈ ಎರಡೂ ತುದಿಗಳಲ್ಲೂ ಕಾರ್ಪೊರೇಟ್ ಲೂಟಿ ನಡೆಯುತ್ತಿದೆ. ಆ ಮೂಲಕ ರೈತರ ಚೈತನ್ಯ ಹೀರಲಾಗುತ್ತಿದೆ. ಕೃಷಿ ತನ್ನದೇ ಡೈನಾಮಿಕ್ಸ್ ಅನ್ನು ಆಧರಿಸಿ ನಡೆಯುತ್ತಿಲ್ಲ. ಅದೀಗ global marketನ ಹತೋಟಿಗೆ ಜಾರುತ್ತಿದೆ.

ಇನ್ನು ಜಾತಿ ವಿಚಾರಕ್ಕೆ ಬಂದರೆ ಅಂಬೇಡ್ಕರ್‌ರವರ ಹೋರಾಟದ ಮೂಲಕ ಪಡೆದಿದ್ದ ಕೆಲವು ಸವಲತ್ತುಗಳೂ ಈಗಿನ ಖಾಸಗೀಕರಣದಿಂದಾಗಿ ಕರಗಿ ಹೋಗುತ್ತಿದೆ. ಜಾತಿ ಇವತ್ತು ಚುನಾವಣಾ ರಾಜಕೀಯದ ದಾಳವಾಗಿದೆ.

ಮಹಿಳೆಯರನ್ನು ಸನಾತನ ಚೌಕಟ್ಟಿನ ಹಾಗೂ ಕಾರ್ಪೊರೇಟ್ ಮಾರುಕಟ್ಟೆಯ sex object ಆಗಿ ಎರಡೂ ರೀತಿಯಲ್ಲಿ ಶೋಷಿಸಲಾಗುತ್ತಿದೆ. ನಮ್ಮಲ್ಲಿ ಜನಪರ ಸಮಾನತೆಯ ಆಶಯಗಳ ದನಿ ಕುಗ್ಗುತ್ತಾ ಬಲಪಂಥೀಯ ಜನವಿರೋಧಿ ಮೌಲ್ಯಗಳೇ ಈಗ ಬಲಗೊಳ್ಳುತ್ತಿರುವುದು ಕಾಣುತ್ತಿದೆ.

ಪ್ರಶ್ನೆ : ನಿಮ್ಮ ಮುಂದಿನ ನಡೆ ಏನು?

ಉತ್ತರ : ನಾವು ಮುಖ್ಯವಾಹಿನಿಗೆ ಬಂದು ಪ್ರಜಾಸತ್ತಾತ್ಮಕ ವಿಧಾನದಲ್ಲಿ ಸಾಮಾಜಿಕ ಚಟುವಟಿಕೆ ನಡೆಸಲು ಬಯಸಿದ್ದೇವೆ. ಮುಂದಿನ ತೀರ್ಮಾನ ಸರ್ಕಾರಕ್ಕೆ ಬಿಟ್ಟದ್ದು. ●

ನಕ್ಸಲ್ ನಾಯಕರೊಂದಿಗೆ ಒಂದು ಪತ್ರಿಕಾಗೋಷ್ಠಿ

05 ◄◄

ಆಯಾ ಪ್ರದೇಶದ ಮನಸ್ಥಿತಿ-ಪರಿಸ್ಥಿತಿಗಳಿಗೆ ಅನುಗುಣವಾದ ನೂತನ ಮಾರ್ಗವನ್ನು ಅನುಸರಿಸಬೇಕೆನ್ನುವ ಗುಂಪು ಒಂದಾದರೆ ತಮ್ಮ ಸಿದ್ಧ ಸಶಸ್ತ್ರ ಹೋರಾಟವನ್ನೇ ಕ್ರಾಂತಿಕಾರಿಯಾಗಿ ಕ್ಷಿಪ್ರವಾಗಿ ಅನುಷ್ಠಾನಕ್ಕೆ ತರ[illegible]ಕೆನ್ನುವುದು ರಾಜ್ಯ ನಾಯಕತ್ವದ ವಾದವಾಗಿತ್ತು. ಅಲ್ಲದೆ ಹೈದ್ರಾಬಾದ್-ಕರ್ನಾಟಕದಲ್ಲಿ ತಮ್ಮ ಚಳವಳಿ ಗಣನೀಯವಾಗಿ ಗೆಲ್ಲದಿರಲು ಕಾರಣವೇನೆಂದು ಆತ್ಮಾವಲೋಕನಕ್ಕೆ ಇಳಿದಾಗಲೂ ಈ ಭಿನ್ನಾಭಿಪ್ರಾಯ ಮುಂದುವರಿದೇ ಇತ್ತು. ಒಂದು ತಂಡ ತಮ್ಮ ಹೋರಾಟದ ಸೀಮಿತ ಸಂಕುಚಿತ ದೃಷ್ಟಿಕೋನದಿಂದಾಗಿ ಜನರನ್ನು ಆಧರಿಸುವುದರಲ್ಲಿ ಮತ್ತು ಬುದ್ಧಿಜೀವಿ, ವಿದ್ಯಾರ್ಥಿ ಸಮೂಹ, ಮಾಧ್ಯಮಗಳನ್ನು ದೂರ ಇಟ್ಟು ಜನರನ್ನು ಒಗ್ಗೂಡಿಸುವಿಕೆಯಲ್ಲಿ ಸೋತದ್ದೇ ಇದಕ್ಕೆ ಕಾರಣವೆನ್ನುವ ಆತ್ಮವಿಮರ್ಶೆ ಮಾಡಿಕೊಂಡರೆ ನಾಯಕತ್ವದ ಕಡೆಯಿಂದ 'ತಾವು ಹೋರಾಟದ ನಾಂದಿಗೆ ಹೈ-ಕ ಭಾಗವನ್ನು ಆಯ್ದುಕೊಂಡದ್ದೇ ತಪ್ಪೆನ್ನುವ' ವಾದ ಮಂಡನೆಯಾಗಿತ್ತು, 2003ರ ವೇಳೆಗಾಗಲೇ ಈ ತರಹದ ವೈರುಧ್ಯಗಳು ಕರ್ನಾಟಕ ನಕ್ಸಲ್ ತಂಡದಲ್ಲಿ ದಟ್ಟವಾಗಿದ್ದವು.

ತಮ್ಮ ಸಶಸ್ತ್ರ ಹೋರಾಟದ ಕುರಿತೇ ಇಂತಹ ಗೊಂದಲಗಳು ಉಂಟಾದ ಮೇಲೆ ಹೊಂದಾಣಿಕೆ ವಿಕೋಪಕ್ಕೆ ಹೋಗದಿರಲೆಂದು ಸಶಸ್ತ್ರ ಹೋರಾಟವನ್ನು ಕೇವಲ ಆತ್ಮರಕ್ಷಣೆಗೆ, ದಮನಕಾರಿ ಕ್ರಿಯೆಗಳಿಗೆ ತಿರುಗೇಟು ನೀಡಲು ಮಾತ್ರವೇ ಉಪಯೋಗಿಸಬೇಕೆಂಬ ಪ್ರಯಾಸದ ಒಮ್ಮತಕ್ಕೂ ಬರಲಾಗಿತ್ತು, ಅದೇ ವೇಳೆಗೆ ರಾಜ್ಯ ಸರ್ಕಾರ ಎಸ್.ಟಿ.ಎಫ್, ಕೂಂಬಿಂಗ್, ಪೊಲೀಸ್ ಮಾಹಿತಿದಾರರಂತಹ ದಮನಕಾರಿ ಆಕ್ರಮಣಕ್ಕಿಳಿದಿದ್ದರಿಂದ ತಿರುಗೇಟು ನೀಡಲು ಮಾತ್ರ ಎಂದುಕೊಂಡಿದ್ದ ಸಶಸ್ತ್ರ ಹೋರಾಟವನ್ನು ಮತ್ತೊಮ್ಮೆ ತಮ್ಮ ಮೂಲ ಮಾರ್ಗವನ್ನಾಗಿ ಮಾಡಿಕೊಳ್ಳಲು ನಕ್ಸಲರು ನಿರ್ಧರಿಸಿದ್ದರು. ಕೆಲಕಾಲ ತಣ್ಣಗಾಗಿದ್ದ ಆಂತರಿಕ ಸೈದ್ಧಾಂತಿಕ ಭಿನ್ನಾಭಿಪ್ರಾಯ ಇದರಿಂದಾಗಿ ಮತ್ತೊಮ್ಮೆ ಪುಟದೆದ್ದಿತ್ತು, 2005ರ ಫೆಬ್ರವರಿಯಲ್ಲಿ ರಾಜ್ಯ ನಕ್ಸಲ್ ನಾಯಕ ಸಾಕೇತ್ ರಾಜನ್ ಹತ್ಯೆಯಾದದ್ದು ಪರಿಸ್ಥಿತಿಯನ್ನು ಮತ್ತಷ್ಟು ವಿಷಮವಾಗಿಸಿತ್ತು, ಅಷ್ಟೆಲ್ಲಾ ಭಿನ್ನಾಭಿಪ್ರಾಯಗಳಿದ್ದಾಗ್ಯೂ ನಾಯಕತ್ವದ್ದು ಮತ್ತೊಂದು ಸಮಸ್ಯೆಯಾಗಿತ್ತು, ಆಗ ನೂರ್ ಶ್ರೀಧರ್‌ಗೆ ನಾಯಕತ್ವ ವಹಿಸಿಕೊಳ್ಳುವ ಒತ್ತಾಯ ಬಂದಿತ್ತಾದರು ಸಶಸ್ತ್ರ ಹೋರಾಟದ ಬಗ್ಗೆಯೇ ಅವರಿಗೆ ಭಿನ್ನಾಭಿಪ್ರಾಯ ಇದ್ದುದರಿಂದ ಅವರದನ್ನು ನಿರಾಕರಿಸಿದ್ದಾಗಿ ಹೇಳಿಕೊಂಡರು.

ಸಾಕೇತ್ ರಾಜನ್ ನಂತರ ಕರ್ನಾಟಕ ನಕ್ಸಲ್ ನಾಯಕತ್ವವನ್ನು ಆಂಧ್ರದ ನವೀನ್ ಎಂಬುವವರು ವಹಿಸಿಕೊಂಡರೂ ಹೋರಾಟ ಮಾರ್ಗ ಮತ್ತು ಅದರ ಕುರಿತು ಇದ್ದ ಭಿನ್ನಾಭಿಪ್ರಾಯಗಳೇನೂ ಶಮನವಾಗಲಿಲ್ಲ, ಅದೇ ವೇಳೆಗೆ ಆಂಧ್ರ ನಕ್ಸಲರು ಪಾವಗಡದಲ್ಲಿ ನಡೆಸಿದ ಪೊಲೀಸ್ ಹತ್ಯಾಕಾಂಡವನ್ನು ರಾಜ್ಯ ನಕ್ಸಲ್ ತಂಡ 'ಸಾಕೇತ್ ರಾಜನ್ ಎನ್‌ಕೌಂಟರ್‌ಗೆ ಪ್ರತೀಕಾರ' ಎಂಬ ಹೇಳಿಕೆ ನೀಡುವಾಗ ಆಂತರಿಕ ತೊಳಲಾಟ ಉತ್ತುಂಗಕ್ಕೇರಿತ್ತು, ಆದಾಗಲೇ ಸಶಸ್ತ್ರ ಹೋರಾಟ ಮಾರ್ಗವನ್ನು ಅಲ್ಲಗಳೆಯುತ್ತಿದ್ದ ತಂಡ ತಮಗೆ ಸಂಬಂಧವೇ ಇಲ್ಲದ ಘಟನೆಯನ್ನು ತಮ್ಮ ಮೇಲೆ ಹೇರಿಕೊಳ್ಳುವುದು ಬೇಡ, ಇದರಿಂದ ಸಾರ್ವಜನಿಕರಲ್ಲಿ ತಮ್ಮ ಬಗ್ಗೆ ಸಲ್ಲದ ಅಭಿಪ್ರಾಯ ಮೂಡುಸುತ್ತದೆಂಬ ವಾದ ಮುಂದಿಟ್ಟಾಗಲೂ ಅಂತಹದ್ದೊಂದು ಹೇಳಿಕೆ ನಕ್ಸಲ್ ಪಾಳಯದಿಂದ ಹೊರಬಿದ್ದಿತ್ತು.

ಕಡೆಗೂ ಈ ತಾಕಲಾಟಗಳೆಲ್ಲ ಕರ್ನಾಟಕ ನಕ್ಸಲ್ ತಂಡವನ್ನು ಇಬ್ಭಾಗ ಮಾಡುವ ಹಂತಕ್ಕೆ ಬಂದು ತಲುಪಿಯಾಗಿತ್ತು, 2006ರಲ್ಲಿ ನೂರ್ ಶ್ರೀಧರ್, ಸಿರಿಮನೆ ನಾಗರಾಜ್ ಮತ್ತು ಕೆಲವರು ಸಶಸ್ತ್ರ ಹೋರಾಟದ ನಕ್ಸಲ್ ತಂಡದಿಂದ ಹೊರಬಂದು ಕೆಲಕಾಲ ಅಧ್ಯಯನ ನಿರತನಾಗಿ 2007ರಲ್ಲಿ ಕ್ರಾಂತಿಕಾರಿ ಕಮ್ಯುನಿಸ್ಟ್ ಪಾರ್ಟಿಯನ್ನು ಕಟ್ಟಿ ತಮ್ಮದೇ ಮಾರ್ಗ, ಸಿದ್ಧಾಂತ, ನಂಬಿಕೆಗಳ ಹಾದಿಯಲ್ಲಿ ಹೋರಾಟಕ್ಕಿಳಿದಿದ್ದಾರೆ. ಇದಿಷ್ಟೂ ನಕ್ಸಲ್ ಕಥಾನಕವನ್ನು ಶ್ರೀಧರ್ ನಮ್ಮ ಮುಂದೆ ಹೇಳಿಕೊಂಡರು.

'ಸಶಸ್ತ್ರ ಹೋರಾಟದಲ್ಲೇ ಮುಂದುವರೆಯುತ್ತಿರುವ ಅವರು ನಮ್ಮನ್ನು right revisionist (ಬಲಪಂಥೀಯ ಪರಿಷ್ಕರಣಾವಾದಿಗಳು), ವರ್ಗ ಹೋರಾಟ ಕೈಬಿಟ್ಟು ರಾಜಿ ಹೋರಾಟಕ್ಕೆ ಮುಂದಾದವರು ಎಂದು ದೂರಿದರು. ವೈಯಕ್ತಿಕವಾಗಿ ಅಥವಾ ಗುರಿಯಲ್ಲಿ ನಮ್ಮ ನಡುವೆ ಯಾವುದೇ ಬೇಧ್ಯತೆಗಳು ಇರದೇ ಹೋದರು ಆಯ್ದುಕೊಂಡ ಮಾರ್ಗ ಮತ್ತು ಆ ಮಾರ್ಗವನ್ನು ಕಾಲ, ಸಂದರ್ಭಕ್ಕೆ ತಕ್ಕಂತೆ Rethinking ನಾಯಕತ್ವದಲ್ಲಿ ಆಗದಿದ್ದನ್ನು ಮನಗಂಡು ಹಾಗೂ ನಾವು ಬಯಸುತ್ತಿರುವಂತಹ ಬದಲಾವಣೆ ಆಗಬೇಕಾದರೆ ಸಶಸ್ತ್ರ ಹೋರಾಟಕ್ಕೆ ಇರುವ ತೊಡಕುಗಳನ್ನೂ ಅರಿತು We are Emotionally Seperated' ಅಂತ ಹೇಳುವಲ್ಲಿ ಶ್ರೀಧರ್‌ಗೆ ಬೇಸರವಿದ್ದಂತಿತ್ತು, ಮಾತಿನ ನಡುವೆ 'ನಮ್ಮ ತಪ್ಪು ನಿರ್ಧಾರಗಳಿಂದ ನಾವು ಆರೇಳು ಸಂಗಾತಿಗಳನ್ನು ಕಳೆದುಕೊಳ್ಳಬೇಕಾಯ್ತು' ಎಂದು ಹೇಳುವಾಗಲೂ ಅವರ ಮುಖದಲ್ಲಿ ಇಂತದ್ದೇ ಬೇಸರ ಹಾದುಹೋದದ್ದನ್ನು ನಾವು ಗಮನಿಸಿದ್ದೆವು. ಸಶಸ್ತ್ರ ಹೋರಾಟದಿಂದ ಅವರೆಷ್ಟು ದೂರ ಬಂದಿದ್ದಾರೆನ್ನುವುದು ನಮಗಾಗ ಮನದಟ್ಟಾಗಿತ್ತು, ಪತ್ರಕರ್ತ ಮಿತ್ರರೊಬ್ಬರು 'ನೀವ್ಯೆ ಮತ್ತೆ ಸಶಸ್ತ್ರ ಹೋರಾಟಕ್ಕೆ ಮರಳುವುದಿಲ್ಲವೇ?' ಎಂಬ ಪ್ರಶ್ನೆಯನ್ನು ಮುಂದಿಟ್ಟಾಗ ನೂರ್ ಶ್ರೀಧರ್ 'ಕರ್ನಾಟಕದ ಇಂದಿನ ಸಂದರ್ಭ ವಿಶಾಲ, ಬಹಿರಂಗ, ಪ್ರಜಾತಾಂತ್ರಿಕ ಚಳುವಳಿ ಕೇಳುತ್ತಿದೆ. ಅಂತಹ ಚಳವಳಿಯ ಭಾಗವಾಗಲು ನಾವು ಬದ್ಧರಾಗಿದ್ದೇವೆ. ಸಶಸ್ತ್ರ ಹೋರಾಟ ಇಂದಿಗೆ ಅನಗತ್ಯ ಎನ್ನುವುದೇ ನಮ್ಮ ನಿಲುವು' ಎಂದರು. ನಮ್ಮ ಅಭಿಪ್ರಾಯ ಆಗ ಮತ್ತಷ್ಟು ಗಟ್ಟಿಯಾಗಿತ್ತು.

ಕಡೆಯಲ್ಲಿ ಗೋಷ್ಠಿಯ ಮುಖ್ಯ ವಿಚಾರಕ್ಕೆ ಬಂದ ಶ್ರೀಧರ್ 'ಕರ್ನಾಟಕದ ಸದ್ಯದ ಪರಿಸ್ಥಿತಿಯಲ್ಲಿ ಎಲ್ಲಾ ವರ್ಗದಲ್ಲೂ ಪ್ರಜಾತಾಂತ್ರಿಕ ಚಳವಳಿಗಳು ಘಟಿಸಲೇಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ಸಮಾಜ ಎಷ್ಟೇ ಕೆಟ್ಟು ಹೋಗಿದ್ದರೂ ಅದರೊಳಗೂ ಸಮಾಜ ಸರಿಪಡಿಸಬೇಕೆಂದು ತುಡಿಯುವ ಜನ ಇದ್ದಾರೆ. ಅವರನ್ನೆಲ್ಲಾ ಒಗ್ಗೂಡಿಸುವ ಕೆಲಸ ಆಗಬೇಕು. ಕೆಲ ಸಮಾನ ಮನಸ್ಕರು, ಹಿರಿಯರು, ಸಾಹಿತಿಗಳು, ಬುದ್ಧಿಜೀವಿಗಳು ಇಂತಹದ್ದೊಂದು ಸಂದರ್ಭದಲ್ಲಿ ನಕ್ಸಲರು ಸಶಸ್ತ್ರ ಹೋರಾಟ ಬಿಟ್ಟು ಮುಖ್ಯವಾಹಿನಿಗೆ ಬರಬೇಕೆನ್ನುವ ಮನವಿ ಮಾಡಿದ್ದು ನಮಗೆ ಅನಿರೀಕ್ಷಿತವಾಗಿತ್ತು, ಬದಲಾವಣೆ ಎನ್ನುವುದು ಪ್ರಜಾತಂತ್ರದ ಹೋರಾಟದ ಫಲವೆನ್ನುವುದು ಇತಿಹಾಸ ಕಲಿಸಿರುವ ಪಾಠವಾದ್ದರಿಂದ ಕರ್ನಾಟಕದ ಸದ್ಯದ ಪರಿಸ್ಥಿತಿಗೆ ಅಗತ್ಯವಿರುವ ಜನಾಂದೋಲನಗಳ ಒಂದು ಭಾಗವಾಗಲು ನಾವೂ ಬಯಸುತ್ತೇವೆ. ಜನಾಂದೋಲನ ಮತ್ತು ಪ್ರಜಾತಾಂತ್ರಿಕ ಚಳುವಳಿಗಳು ನಿರಂತರವಾಗಿ ಅಧಿಕಾರ ವರ್ಗಕ್ಕೆ ಪ್ರತಿರೋಧವಾದಾಗ ಮಾತ್ರ ಆಡಳಿತ, ಅಭಿವೃದ್ಧಿ ಜನಪರ ದಿಕ್ಕಿನಲ್ಲಿ ಸಾಗಲು ಸಾಧ್ಯ. ಆ ನಿಟ್ಟಿನಲ್ಲಿ ಕಾನೂನಿನ ಚೌಕಟ್ಟಿನೊಳಗೆ ಜನರೊಟ್ಟಿಗೆ ಹೋರಾಡಲು ನಾವು ಸಮಾಜದ ಮುಖ್ಯವಾಹಿನಿಗೆ ಬರಲು ಇಚ್ಛಿಸುತ್ತಿದ್ದೇವೆಯೇ ಹೊರತು ಬೇರಾವು ಉದ್ದೇಶದಿಂದಲೂ ಅಲ್ಲ. ನಾವು ಮುಖ್ಯವಾಹಿನಿಗೆ ಬಂದು ಪ್ರಜಾತಾಂತ್ರಿಕ ನೆಲೆಗಟ್ಟಿನಲ್ಲಿ ನಮ್ಮ ಚಳವಳಿಗಳನ್ನು ಮುಂದುವರೆಸಬೇಕೆಂದರೆ ನಮಗೆ ಕೆಲವೊಂದು ಅಗತ್ಯತೆಗಳಿವೆ. ಅವುಗಳನ್ನೇ ನಾವು ಬೇಡಿಕೆಯನ್ನಾಗಿ ಸರ್ಕಾರದ ಮುಂದಿಡುತ್ತಿದ್ದೇವೆಯೇ ಹೊರತು ಮತ್ತಾವ ಒತ್ತಾಯಗಳೂ ಇಲ್ಲ. ಮೊದಲನೆಯದಾಗಿ, ನಮ್ಮ ಮೇಲೆ ಹೇರಿರುವ ಸುಳ್ಳು ಕೇಸ್‌ಗಳನ್ನು ವಾಪಾಸ್ ತೆಗೆದುಕೊಳ್ಳಬೇಕು. ನಮ್ಮ ಮೇಲಿರುವವೆಲ್ಲಾ ಸುಳ್ಳು ಕೇಸ್ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಇನ್ನು ಎರಡನೆಯದು, ಮುಂದಿನ ದಿನಗಳಲ್ಲಿ ಪ್ರಜಾ ಹೋರಾಟ ಮುನ್ನಡೆಸುವಂತ ವಾತಾವರಣ ನಿರ್ಮಿಸಬೇಕು. ಇವುಗಳ ಹೊರತಾಗಿ ಶರಣಾಗತಿ ಪ್ಯಾಕೇಜ್ ಒಪ್ಪಿಕೊಂಡು ನಾವು ಬರಲು ಸಿದ್ದರಿಲ್ಲ. ಈ ನಮ್ಮ ಬೇಡಿಕೆಗಳಿಗೆ ಸರ್ಕಾರ ಯಾವ ರೀತಿ ಸ್ಪಂದಿಸಲಿದೆ ಎನ್ನುವುದನ್ನಾಧರಿಸಿ ನಾವು ಮುಂದಿನ ನಿರ್ಧಾರಕ್ಕೆ ಬರುತ್ತೇವೆ' ಎಂದು ತಮ್ಮ ಬೇಡಿಕೆಗಳನ್ನು ಸ್ಪಷ್ಟವಾಗಿಸಿದ್ದರು.

ಪತ್ರಿಕಾಗೋಷ್ಠಿ ಮುಗಿಸಿ ಮರಳುವಾಗ 'ಇಷ್ಟು ದಿನ ಮುಖ್ಯವಾಹಿನಿಗೆ ಬರಲು ಮೈಕೊಡವುತ್ತಿದ್ದ ಕ್ರಾಂತಿಕಾರಿಗಳು ಅದೇ ಕಾರಣದಿಂದ ದೂಷಣೆಗೆ ಒಳಗಾಗುತ್ತಿದ್ದರು. ಈಗ ಮುಖ್ಯವಾಹಿನಿಯತ್ತ ಮುಖ ಮಾಡಲು ಅವರು ತಯಾರಾಗಿದ್ದಾರೆ. ಇಂತಹ ಸಮಯದಲ್ಲಿ ಸರ್ಕಾರ ಮತ್ತು ಆಡಳಿತ ಯಂತ್ರಗಳು ಹೇಗೆ ವರ್ತಿಸಬಹುದು? ಮೊದಲು ಮಾತುಕತೆಗೆ ಬರಲಿ ಆಮೇಲೆ ನೋಡೋಣ ಎನ್ನುತ್ತಿದ್ದ ಸರ್ಕಾರದ ಹೇಳಿಕೆಗಳು ನಿಜಕ್ಕೂ ನಿರೀಕ್ಷೆಭರಿತವಾಗಿದ್ದವೆ ಅಥವಾ ನಕ್ಸಲ್ ಇಶ್ಯೂವನ್ನು ಚರ್ಚೆಯಿಂದ ದೂರವಿಡಲು ಬಳಕೆಯಾಗುತ್ತಿದ್ದ ಅಸ್ತ್ರಗಳೆ? ಒಂದೊಮ್ಮೆ ಸರ್ಕಾರ ಅವರ ಬೇಡಿಕೆಗಳಿಗೆ ನೂರಕ್ಕೆ ನೂರರಷ್ಟು ಸ್ಪಂದಿಸದೆ ಭಾಗಶಃ ಒಪ್ಪುವುದಾಗಿ ಭರವಸೆ ಇತ್ತರೆ ಕ್ರಾಂತಿಕಾರಿಗಳು ಎಂತಹ ನಿರ್ಧಾರ ತೆಗೆದುಕೊಳ್ಳಬಲ್ಲರು?' ಎಂಬೆಲ್ಲಾ ಪ್ರಶ್ನೆಗಳು ನಮ್ಮೊಳಗೆ ಗಿರಕಿ ಹೊಡೆಯುತ್ತಿದ್ದವು.

● ಲಂಕೇಶ್ ತಂಡ

ಪತ್ರಿಕಾ ಹೇಳಿಕೆ...

ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷ (RCP)

ಸರ್ಕಾರದ ಧೋರಣೆ ಪ್ರಜಾತಾಂತ್ರಿಕವಾಗಿದ್ದಲ್ಲಿ ಪ್ರಜಾತಾಂತ್ರಿಕ ಚೌಕಟ್ಟಿನಲ್ಲಿ ಹೋರಾಟ ಮುಂದುವರೆಸಲು ನಾವು ಬದ್ಧ

ಆತ್ಮೀಯ ಪತ್ರಕರ್ತ ಮಿತ್ರರೆ,

ಕೆಲವು ತಿಂಗಳಿನಿಂದೀಚೆಗೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಹೆಚ್. ಎಸ್. ದೊರೆಸ್ವಾಮಿಯವರ ನೇತೃತ್ವದಲ್ಲಿ ಕರ್ನಾಟಕದ ಪ್ರಮುಖ ಗಣ್ಯರು 'ಸರ್ಕಾರ ನಕ್ಸಲೀಯರ ಜೊತೆ ಮಾತುಕತೆಗೆ ಮುಂದಾಗಬೇಕೆಂದೂ, ನಕ್ಸಲೀಯರು ಸಶಸ್ತ್ರ ಹೋರಾಟವನ್ನು ತೊರೆದು ಮುಖ್ಯವಾಹಿನಿಗೆ ಬರಬೇಕೆಂದೂ' ಮನವಿ ಮಾಡುತ್ತಿದ್ದಾರೆ. ಸರ್ಕಾರ ನಿಖರವಾಗಿ ತನ್ನ ನಿಲುವನ್ನು ಸ್ಪಷ್ಟಪಡಿಸದಿದ್ದರೂ 'ನಕ್ಸಲೀಯರ ಜೊತೆ ಮಾತುಕತೆಗೆ ಸಿದ್ಧ'ವೆಂದು ಮುಖ್ಯಮಂತ್ರಿ ಹಾಗೂ ಗೃಹಮಂತ್ರಿಯವರು ಆಗಾಗ್ಗೆ ಹೇಳಿಕೆ ನೀಡಿದ್ದಾರೆ. ನಮ್ಮ ನಿಲುವನ್ನು ಸಹ ಮುಕ್ತವಾಗಿ ಮುಂದಿಡಬೇಕೆಂದು ಹಿರಿಯ ನಾಗರಿಕರು ಸಂದೇಶ ಕಳುಹಿಸಿರುವ ಹಿನ್ನೆಲೆಯಲ್ಲಿ ಅವರ ಮನವಿಗೆ ಸ್ಪಂದಿಸಿ ಈ ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ಸರ್ಕಾರ ಹಾಗೂ ನಕ್ಸಲೀಯರ ಮುಂದೆ ಒತ್ತಾಯಪೂರ್ವಕ ಮನವಿಯನ್ನು ಮುಂದಿಟ್ಟಿರುವ ಎಲ್ಲಾ ಹಿರಿಯರ ಬಗ್ಗೆ ನಾವು ಅಪಾರ ಗೌರವವನ್ನು ಹೊಂದಿದ್ದೇವೆ. ಸಾಮಾಜಿಕ ಕಾಳಜಿಯಿಂದ ಕೂಡಿದ ಅವರ ಮನವಿಗೆ ಸಂಪೂರ್ಣ ಪ್ರಾಮಾಣಿಕತೆಯೊಂದಿಗೆ ಪ್ರತಿಕ್ರಿಯಿಸಲು ಬಯಸುತ್ತೇವೆ.

2006ರಲ್ಲಿ ಕರ್ನಾಟಕದ ಸಿಪಿಐ (ಮಾವೋವಾದಿ) ಪಕ್ಷ ವಿಭಜನೆಗೊಂಡು ನಮ್ಮ ಪಕ್ಷ ಜನ್ಮ ತಾಳಿದೆ. 2001ರಲ್ಲಿ ಮಲೆನಾಡಿನಲ್ಲಿ ಚಟುವಟಿಕೆಗಳು ಪ್ರಾರಂಭವಾದಾಗಿನಿಂದಲೂ ಮಾವೋವಾದಿ ಪಕ್ಷದೊಳಗೆ ಗಹನವಾದ ರಾಜಕೀಯ ಸಂಘರ್ಷ ನಡೆಯುತ್ತಾ ಬಂದಿದೆ. ಕರ್ನಾಟಕಕ್ಕೆ ಇಂದು ಅಗತ್ಯವಿರುವುದು ದಿಟ್ಟ, ಬಲಿಷ್ಠ ಹಾಗೂ ಬಹಿರಂಗ ಪ್ರಜಾ ಚಳವಳಿಯೇ ಹೊರತು ಸಶಸ್ತ್ರ ಹೋರಾಟವಲ್ಲ ಎಂಬುದು ಆರಂಭದಿಂದಲೂ ನಮ್ಮ ಸ್ಪಷ್ಟ ನಿಲುವಾಗಿತ್ತು. ಸಮ ಸಮಾಜದ ನಿರ್ಮಾಣದ ಲಕ್ಷ್ಯದೊಂದಿಗೆ ಪ್ರಬಲ ಕ್ರಾಂತಿಕಾರಿ ಚಳವಳಿಯನ್ನು ಕಟ್ಟಬೇಕೆಂಬುದೇ ಈ ಎರಡೂ ನಿಲುವಿನವರ ಗುರಿಯಾಗಿದ್ದರೂ ಅದಕ್ಕಾಗಿ ಅಳವಡಿಸಲು ಬಯಸಿದ ಹಾದಿ ಮಾತ್ರ ಭಿನ್ನವಾಗಿತ್ತು. ಮಾವೋವಾದಿ ಪಕ್ಷದ ಬದ್ಧತೆ ಬಗ್ಗೆ, ರಾಜಿರಹಿತ ನಿಲುವಿನ ಬಗ್ಗೆ ನಮಗೆ ಅಪಾರ ಗೌರವ, ಅಭಿಮಾನಗಳಿದ್ದರೂ ಅದು ಅಳವಡಿಸುತ್ತಿರುವ ಮಾರ್ಗ ವಾಸ್ತವಕ್ಕೆ ತಕ್ಕನಾಗಿಲ್ಲ, ಪ್ರಜಾ ಚಳವಳಿಯ ನಿರ್ಮಾಣಕ್ಕೆ ಪೂರಕವಾಗಿಲ್ಲ ಎಂಬುದು ನಮ್ಮ ನಿಲುವಾಗಿತ್ತು. ಭಿನ್ನ ರಾಜಕೀಯ ದೃಷ್ಟಿಕೋನಗಳು ಒಂದಾಗುವ ಸಾಧ್ಯತೆ ಗೋಚರಿಸದೇ ಹೋದದ್ದರಿಂದ ಮಾವೋವಾದಿ ಪಕ್ಷದಿಂದ ಹೊರಬಂದು ನಮ್ಮನ್ನು ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷವಾಗಿ ಗುರುತಿಸಿಕೊಂಡಿದ್ದೇವೆ.

ಹೊಸ ಕ್ರಾಂತಿಕಾರಿ ಕೇಂದ್ರವಾಗಿ ಪುನರ್ರಚನೆಗೊಂಡ ಆರ್‌ಸಿಪಿ. ಪಕ್ಷವು ಕಳೆದ 7 ವರ್ಷಗಳಿಂದಲೂ ವೈಚಾರಿಕವಾಗಿ ಹಾಗೂ ಸಂಘಟನಾತ್ಮಕವಾಗಿ ತನ್ನನ್ನು ಸುಸಜ್ಜಿತಗೊಳಿಸಿಕೊಳ್ಳುವ ಕೆಲಸದಲ್ಲಿ ತೊಡಗಿಸಿಕೊಂಡಿದೆ. ಭಾರತದ ಕ್ರಾಂತಿಯ ಪಥವನ್ನು ಪುನರಾವಲೋಕನಕ್ಕೆ ಒಳಪಡಿಸುತ್ತಾ ಆಳವಾದ ಅಧ್ಯಯನವನ್ನು ಕೈಗೆತ್ತಿಕೊಂಡಿದೆ. ಅದೇ ಸಂದರ್ಭದಲ್ಲಿ ಸೈದ್ಧಾಂತಿಕ ತೀವ್ರತೆಯನ್ನೂ, ಆಚರಣಾತ್ಮಕ ಬದ್ಧತೆಯನ್ನೂ ಒಳಗೊಂಡಿರುವ ಕಾರ್ಯಕರ್ತರ ಪಡೆಯನ್ನು ಕಟ್ಟಿಕೊಳ್ಳುವ ವಿಚಾರಕ್ಕೆ ತನ್ನೆಲ್ಲಾ ಗಮನವನ್ನು ಕೇಂದ್ರೀಕರಿಸಿದೆ. ಕರ್ನಾಟಕದ ಸಮಾನ ಮನಸ್ಕ ಹೋರಾಟಗಾರರೆಲ್ಲರ ಜೊತೆಗೂಡಿ ಬಲಿಷ್ಠ ಪ್ರಜಾ ಚಳವಳಿಯನ್ನು ಕಟ್ಟಿ ಬೆಳೆಸುವುದು ನಮ್ಮ ಗುರಿಯಾಗಿದೆ. ಇದನ್ನು ಖಂಡಿತ ಸಾಧಿಸುತ್ತೇವೆ ಎಂಬ ಸಂಪೂರ್ಣ ವಿಶ್ವಾಸವನ್ನೂ ಹೊಂದಿದ್ದೇವೆ.

ನಾವು 'ಮುಖ್ಯವಾಹಿನಿಗೆ' ಬರಬೇಕೆಂದು ಹಿರಿಯರು ಮಾಡಿರುವ ಮನವಿ ಸರಿಯಾಗಿದೆ ಹಾಗೂ ಸಮಯೋಚಿತವಾಗಿದೆ. ಇದರ ಕುರಿತು ಮಾವೋವಾದಿ ಪಕ್ಷದ ನಿಲುವು ಏನೆಂಬುದು ನಮಗೆ ತಿಳಿಯದು, ಆದರೆ ಈ ಬಗ್ಗೆ ನಮ್ಮಲ್ಲಿ ಯಾವುದೇ ದ್ವಂದ್ವವಾಗಲೀ, ಗೊಂದಲವಾಗಲೀ ಇಲ್ಲ. ನಾವಿಂದು ಭೂಗತವಾಗಿ ಹಾಗೂ ರಹಸ್ಯವಾಗಿ ನಮ್ಮ ಚಟುವಟಿಕೆಗಳನ್ನು ನಡೆಸುತ್ತಿದ್ದರೂ ಇದು ನಮ್ಮ ಆಯ್ಕೆಯಾಗಿರದೆ ಸರ್ಕಾರ ಹೇರಿರುವ ಅನಿವಾರ್ಯತೆಯೇ ಆಗಿದೆ. ನಾವು ಯಾವುದೇ ರೀತಿಯ ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗವಹಿಸದೇ ಇದ್ದಾಗ್ಯೂ ಸರ್ಕಾರ ನಮ್ಮ ಮೇಲೆ ಸುಳ್ಳು ಕೇಸುಗಳನ್ನು ಹಾಕುತ್ತಾ ಬಂದಿರುವುದು ಇದಕ್ಕೆ ಕಾರಣವಾಗಿದೆ. ಕರ್ನಾಟಕದಲ್ಲಿ ಸಮಗ್ರ ಪ್ರಜಾ ಚಳವಳಿ ಬಲಗೊಳ್ಳಬೇಕಿದೆ ಎಂಬುದೇ ನಮ್ಮ ನಿಲುವಾಗಿರುವುದರಿಂದ, ಸರ್ಕಾರ ಪ್ರಜಾತಾಂತ್ರಿಕವಾಗಿ ವ್ಯವಹರಿಸಿದರೆ ಕಾನೂನಾತ್ಮಕ ಚೌಕಟ್ಟಿನಲ್ಲಿ ಹೋರಾಟವನ್ನು ಮುಂದುವರೆಸಲು ನಾವು ಬದ್ಧರಿದ್ದೇವೆ.

ಪಕ್ಷದ ಗುರಿಯಾದ ಸಮಾಜದಲ್ಲಿನ ಎಲ್ಲಾ ರೀತಿಯ ಅಸಮಾನತೆಯನ್ನು ತೊಲಗಿಸುವ ಸವಾಲು ಸದ್ಯಕ್ಕೆ ಸರ್ಕಾರದ ಜೊತೆಗಿನ ಮಾತುಕತೆಯಿಂದ ಬಗೆಹರಿಯುವಂಥದ್ದಲ್ಲ. ಇಂದಿನ ಪರಿಸ್ಥಿತಿಯಲ್ಲಿ ಯಾವುದೇ ಸರ್ಕಾರವೂ ಈ ಅಸಮಾನತೆಗಳನ್ನು ಹೋಗಲಾಡಿಸುವುದಿರಲಿ, ನಿಯಂತ್ರಿಸುವ ನಿಟ್ಟಿನಲ್ಲೂ ಕ್ರಮ ಕೈಗೊಳ್ಳುವುದಿಲ್ಲ. ಶೋಷಕ ವ್ಯವಸ್ಥೆಯ ವಿರುದ್ಧ ವಿಶಾಲ ಪ್ರಜಾ ಹೋರಾಟವನ್ನು ಬಲಪಡಿಸುವುದರಿಂದ ಮಾತ್ರ ಅದನ್ನು ಸಾಧಿಸಲು ಸಾಧ್ಯ. ಹಾಗಾಗಿ ತಕ್ಷಣಕ್ಕೆ ನಾವು ಸರ್ಕಾರದ ಮುಂದೆ ಬೇರೆ ಯಾವ ಪೂರ್ವಶರತ್ತುಗಳನ್ನೂ ಮುಂದಿಡುತ್ತಿಲ್ಲ. ಅದರ ಬದಲಿಗೆ ಪಾಲಿಸಲು ಸಾಧ್ಯವಿರುವ ಎರಡು ಸರಳ ಹಕ್ಕೊತ್ತಾಯಗಳನ್ನು ಮಾತ್ರ ಸರ್ಕಾರದ ಮುಂದಿಡಲು ಬಯಸುತ್ತೇವೆ. 1. ಸರ್ಕಾರ ನಮ್ಮ ಮೇಲೆ ಹಾಕಿರುವ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು ಮತ್ತು 2. ಮುಂದಿನ ದಿನಗಳಲ್ಲಿ ಪ್ರಜಾ ಹೋರಾಟವನ್ನು ಮುನ್ನಡೆಸಲು ಅವಕಾಶವಿರುವ ಪ್ರಜಾತಾಂತ್ರಿಕ ವಾತಾವರಣವನ್ನು ನಿರ್ಮಿಸಬೇಕು. ಹೋರಾಟ ಮಾಡುವುದು ಅಪರಾಧವಲ್ಲ, ಮಾಡದ ತಪ್ಪಿಗೆ ಹೋರಾಟಗಾರರು ತಲೆಬಾಗುವುದಿಲ್ಲ. ಹಾಗಾಗಿ ಸರ್ಕಾರದ ಶರಣಾಗತಿ ನೀತಿಯ ಯಾವುದೇ ಪ್ಯಾಕೇಜಿಗೆ ನಾವು ಸಿದ್ಧರಿಲ್ಲ ಎಂಬುದನ್ನು ಸ್ಪಷ್ಟಪಡಿಸಲು ಬಯಸುತ್ತೇವೆ. ಹಾಕಿರುವ ಕೇಸುಗಳನ್ನು ಹಿಂತೆಗೆದುಕೊಂಡು ಪ್ರಜಾತಾಂತ್ರಿಕ ಹೋರಾಟವನ್ನು ಮುಂದುವರೆಸಲು ಸರ್ಕಾರ ಅನುವು ಮಾಡಿಕೊಡಬೇಕೆಂದಷ್ಟೇ ನಾವು ಆಗ್ರಹಿಸುತ್ತೇವೆ.

ಕ್ರಾಂತಿಕಾರಿಗಳಾದ ನಮಗೆ ಜನರ ಹಿತಾಸಕ್ತಿಯೇ ಸರ್ವಸ್ವವಾಗಿದೆ. ಕರ್ನಾಟಕವಿಂದು ಅತ್ಯಂತ ಕೆಟ್ಟ ಪರಿಸ್ಥಿತಿಯ ಮೂಲಕ ಹಾದುಹೋಗುತ್ತಿದೆ. ಒಂದೆಡೆ ಜಾಗತೀಕರಣ ಹಾಗೂ ಕೋಮುವಾದೀಕರಣದ ಪರಿಣಾಮವಾಗಿ ಸಮಾಜದಲ್ಲಿ ಸಂಕ್ಷೋಭೆ ಹೆಚ್ಚುತ್ತಿದೆ. ಮತ್ತೊಂದೆಡೆ ಎಲ್ಲಾ ಸೈದ್ಧಾಂತಿಕ ಹಿನ್ನೆಲೆಗಳ ಜನ ಚಳವಳಿಗಳೂ ಹಿನ್ನಡೆ ಅನುಭವಿಸಿವೆ. ಎಲ್ಲಾ ಜನಪರ ಸಂಘಟನೆಗಳು ಹಾಗೂ ವ್ಯಕ್ತಿಗಳು ತಮ್ಮನ್ನು ಆತ್ಮಾವಲೋಕನಕ್ಕೆ ಒಡ್ಡಿಕೊಳ್ಳುವ, ಆತ್ಮಸಾಕ್ಷಿಯನ್ನು ಮಾರಿಕೊಂಡಿಲ್ಲದ ಪ್ರಾಮಾಣಿಕ ಶಕ್ತಿಗಳೆಲ್ಲಾ ಜನರ ಹಕ್ಕುಗಳಿಗಾಗಿ ದನಿ ಎತ್ತಲು ಒಗ್ಗೂಡಬೇಕಿರುವ ಕಾಲ ಇದಾಗಿದೆ. ದಿಟ್ಟ, ಪ್ರಾಮಾಣಿಕ ಹಾಗೂ ಬಲಿಷ್ಠ ಪ್ರಜಾ ಚಳವಳಿಯನ್ನು ಕಟ್ಟಿ ಬೆಳೆಸುವುದು ಇಂದಿನ ಕಾಲದ ಕೂಗಾಗಿದೆ. ಈ ನಿಟ್ಟಿನಲ್ಲಿ ಹಿರಿಯ ನಾಗರಿಕರ ಕರೆಯನ್ನು ನಾವು ಗೌರವಿಸುತ್ತೇವೆ. ಸರ್ಕಾರ ನಮ್ಮ ಮೇಲೆ ಹಾಕಿರುವ ಸುಳ್ಳು ಕೇಸುಗಳನ್ನು ಹಿಂತೆಗೆದುಕೊಂಡಲ್ಲಿ ಮುಕ್ತವಾಗಿ ಹಾಗೂ ಬಹಿರಂಗವಾಗಿ ಪ್ರಾಮಾಣಿಕ ಪ್ರಜಾ ಚಳವಳಿಯ ನಿರ್ಮಾಣದಲ್ಲಿ ನಮ್ಮನ್ನು ತೊಡಗಿಸಿಕೊಳ್ಳಲು ಬಯಸುತ್ತೇವೆ.


ಹೋರಾಟದ ವಂದನೆಗಳೊಂದಿಗೆ


ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್.

17-12-2013. ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷ (RCP)ದ ಪರವಾಗಿ

ಮಂಡ್ಯ ಪೊಲಿಟಿಕ್ಸ್

ಅಂಬಿ 'ದರ್ಶನ'ಕ್ಕೆ ರಮ್ಯ 'ಕೃಷ್ಣ'





ಮುಂಬರುವ ಎಂಪಿ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣಗೆ ಕೈ ಟಿಕೆಟ್ ನೀಡಬೇಕೆಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್. ಆತ್ಮಾನಂದ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್‌ಗೆ ಪತ್ರ ಬರೆದು ಸಚಿವ ಅಂಬರೀಶ್‌ಗೆ ಸರಿಯಾದ ಟಾಂಗ್ ನೀಡಿದ್ದಾರೆ. ಅದಕ್ಕೆ ಅಂಬಿ ಪಾಳಯವೇನು ಸುಮ್ಮನೇ ಕೂತಿಲ್ಲ. ಪಕ್ಷದ ವಿರುದ್ಧವೇ ಕೆಲಸ ಮಾಡುವ ಆತ್ಮಾನಂದ ಬರೆದ ಪತ್ರಕ್ಕೆ ನಯಾಪೈಸೆಯ ಕಿಮ್ಮತ್ತಿಲ್ಲ ಎಂದು ಕೃಷ್ಣ ಬಣಕ್ಕೆ ಅಂಬಿ ತಿರುಗೇಟು ನೀಡಿದ್ದಾರೆ. ಅಂತೂ ಈ ಬಣ ರಾಜಕೀಯ ಮಂಡ್ಯದಲ್ಲಿ ಕಾಂಗ್ರೆಸ್ ಮಾನವನ್ನು ಮೂರು ಕಾಸಿಗೆ ಹರಾಜಾಕುತ್ತಿರುವುದಂತು ಸತ್ಯ.

ಅಂಬರೀಶ್ ಹಾಗೂ ಆತ್ಮಾನಂದರ ನಡುವಿನ ಮುಸುಕಿನ ಗುದ್ದಾಟ ಇಂದು ನಿನ್ನೆಯದಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರ ಟಿಕೆಟ್ ವಿಚಾರವಾಗಿ ಶುರುವಾದ ಈ ಜಟಾಪಟಿ ಕೊನೆಗೆ ಜಿಲ್ಲಾಧ್ಯಕ್ಷ ಸ್ಥಾನದಿಂದ ಆತ್ಮಾನಂದರ ಎತ್ತಂಗಡಿಗೆ ಒತ್ತಾಯಿಸುವ ಹಂತಕ್ಕೂ ಬಂದು ತಲುಪಿತ್ತು. ಆತ್ಮಾನಂದರನ್ನು ಕಿತ್ತೆಸೆದು ಕೃಷ್ಣ ಬಣದ ಬಿ.ಸಿ.ಶಿವಾನಂದರನ್ನು ಜಿಲ್ಲಾಧ್ಯಕ್ಷ ಮಾಡಬೇಕೆಂದು ಸಚಿವ ಅಂಬಿ ಒತ್ತಾಯಿಸಿದರೂ ರಾಜ್ಯ ಕಾಂಗ್ರೆಸ್ ನಾಯಕರು ಮಣೆಹಾಕದೆ ಆತ್ಮಾನಂದರನ್ನೇ ಮುಂದುವರಿಸುತ್ತಿರುವುದರ ಹಿಂದೆ ಕೃಷ್ಣ ಕರಾಮತ್ತು ಕೆಲಸ ಮಾಡುತ್ತಿದೆ.

ಅಂಬಿಗೆ ರಮ್ಯಾ ಸೆಡ್ಡು

ಜಿಲ್ಲಾ ಉಸ್ತುವಾರಿ ಮಂತ್ರಿ, ಅಂಬರೀಶ್ ತಲೆ ಎತ್ತಿದಾಗಲೆ ಕೃಷ್ಣ ಬೆಂಬಲಿಗರು ಅಂಬಿ ವಿರುದ್ಧ ಸಂಸದೆ ರಮ್ಯಾರನ್ನು ಎತ್ತಿಕಟ್ಟಿ 'ನಾನೊಂದು ತೀರ, ನೀನೊಂದು ತೀರ' ಎನ್ನುವಂತೆ ಮಾಡಿಟ್ಟಿದ್ದಾರೆ. ಸದ್ಯಕ್ಕೆ ಚಿತ್ರಬದುಕಿಗೆ ವಿರಾಮ ಹೇಳಿರುವ ರಮ್ಯಾ ಕೃತಜ್ಞತೆ ಸಲ್ಲಿಸುವ ನೆಪದಲ್ಲಿ ಇಡೀ ಕ್ಷೇತ್ರ ಸುತ್ತಿದ್ದಾರೆ. ಶಾಲಾ-ಕಾಲೇಜುಗಳಲ್ಲಿ ಸಂವಾದ ನಡೆಸುವ ಮೂಲಕ ಯುವಜನರ ಮನಸ್ಸು ಗೆಲ್ಲಲು ಹೊರಟಿದ್ದಾರೆ. ಜಿಲ್ಲೆಯ ಅಭಿವೃದ್ಧಿ ಅದು-ಇದು ಅಂತೆಲ್ಲಾ ಭಾಷಣ ಬಿಗಿಯುತ್ತಾ ಅಧಿಕಾರಿಗಳ ಸಭೆ ನಡೆಸುತ್ತಿರುವ ರಮ್ಯಾ ವರಸೆಯ ಹಿಂದೆ ಮುಂದಿನ ಲೋಕಸಭಾ ಚುನಾವಣೆಯನ್ನು ಗೆಲ್ಲುವ ತಯಾರಿಯೂ ಇದೆ.

ರಮ್ಯಾ ಗೆದ್ದಾಗ ಅಂಬಿ ಬಣಕ್ಕೆ ಸಖತ್ ಖುಷಿಯಾಗಿತ್ತು. ಅಂಬಿ ಬೆಂಬಲಿಗರು ರಮ್ಯಾರ ಸುತ್ತಮುತ್ತ ಠಳಾಯಿಸುತ್ತಿದ್ದರು. ದಿನಕಳೆದಂತೆ ರಮ್ಯಾ ಎಸ್.ಎಂ.ಕೃಷ್ಣ ಬಣಕ್ಕೆ ಹತ್ತಿರವಾದದ್ದು ಅಂಬಿ ಟೀಮಿಗೆ ಸರಿ ಎನಿಸಿಲ್ಲ. ಆತ್ಮಾನಂದರನ್ನು ಬದಲಾಯಿಸಿ ಎಂದು ಅಂಬಿ ಬಣ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಬಳಿ ಹೋದಾಗಲೂ ರಮ್ಯಾ ಅತ್ತ ತಲೆ ಹಾಕಲಿಲ್ಲ.

ಸಿಎಂ ಸಿದ್ದರಾಮಯ್ಯ, ಸಕ್ಕರೆ ಸಚಿವ ಪ್ರಕಾಶ್ ಹುಕ್ಕೇರಿ ಮೊದಲಾದವರನ್ನು ಭೇಟಿ ಮಾಡಿ ಮೈಷುಗರ್ ಕಾರ್ಖಾನೆಗೆ 15ಕೋಟಿ ಸಾಲವನ್ನು ಕೊಡಿಸಿದ್ದು ನಾನೇ ಎಂದು ರಮ್ಯಾ ಹೇಳಿಕೊಂಡದ್ದು, ಕಬ್ಬು ಸರಬರಾಜು ಮಾಡಿದ ರೈತರ ಬಾಕಿ ಹಣವನ್ನು ತಾವೇ ಮುಂದೆ ನಿಂತು ಕೊಡಿಸಿದ್ದು ಅಂತಲೂ ಬಿಂಬಿಸಿಕೊಂಡದ್ದು, ಸ್ಲಂಗೆ ತೆರಳಿ ಅಲ್ಲಿನ ಸಮಸ್ಯೆ ವಿಚಾರಿಸಿದ ರಮ್ಯಾ ಭೇಟಿಯನ್ನು ಮಾಧ್ಯಮಗಳು ವೈಭವೀಕರಿಸಿದ್ದು ಆಕೆಗೆ ಜನರಲ್ಲಿ ಸಾಕಷ್ಟು ಹೆಸರು ತಂದುಕೊಟ್ಟಿವೆ.

ಇತ್ತ ಅಂಬಿ ಮಂಡ್ಯದಲ್ಲಿ ಮನೆ ಮಾಡಿದ್ದರೂ ಒಂದು ದಿನವೂ ಅಲ್ಲಿ ಉಳಿಯಲಿಲ್ಲ. ಆದರೆ ರಮ್ಯಾ ಮಂಡ್ಯದಲ್ಲೇ ಮನೆ ಮಾಡಿ, ಜಿಲ್ಲೆಯಾದ್ಯಂತ ಸುತ್ತಿ ಜನರ ಮನಸ್ಸಿನಲ್ಲಿ ಉಳಿಯುವ ಪ್ರಯತ್ನ ಮಾಡುತ್ತಿದ್ದಾರೆ. ದಿನೇದಿನೇ ಜಿಲ್ಲೆಯಲ್ಲಿ ಸಂಸದೆ ರಮ್ಯಾ ಹೆಸರು ದಟ್ಟವಾಗುತ್ತಿದ್ದು ಅಂಬಿ ಕೂಡ ಕೊಂಚ ವಿಚಲಿತರಾದಂತೆ ಕಾಣುತ್ತಿದೆ.

ವಾರದ ಹಿಂದೆ ಮಂಡ್ಯ ತಾಲ್ಲೂಕಿನ ಕೀಲಾರದಲ್ಲಿ ನಡೆದ ಯುವಜನೋತ್ಸವ ಸಂಪೂರ್ಣವಾಗಿ ಅಂಬಿ ಉತ್ಸವವಾಗಿತ್ತು. ಈ ಹಿನ್ನೆಲೆಯಲ್ಲಿ ಅಂದು ಮಂಡ್ಯದಲ್ಲೇ ಇದ್ದ ರಮ್ಯಾ ಕೆಪಿಸಿಸಿ ಕಚೇರಿಯಲ್ಲಿ ಸಭೆಯಿದೆ ಎಂದು ನೆಪಹೇಳಿ ಬೆಂಗಳೂರಿಗೆ ದೌಡಾಯಿಸಿದ್ದರು. ತಾನು ಮಾತ್ರವಲ್ಲದೆ ಸಚಿವ ಅಭಯಚಂದ್ರಜೈನ್, ಮಹದೇವಪ್ಪ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೂ ರಮ್ಯಾ ಬರದಂತೆ ತಡೆದಿದ್ದು ಎಸ್.ಎಂ.ಕೃಷ್ಣ ಬಣ ಎಂಬ ಮಾತು ಅಂಬಿ ಕಿವಿಗೂ ಬಿದ್ದು ಅಂಬಿ-ರಮ್ಯಾ ನಡುವಿನ ಅಂತರವನ್ನು ಮತ್ತಷ್ಟು ಹಿಗ್ಗಿಸಿದೆ.

ಮಂಡ್ಯಕ್ಕೆ 'ಕೃಷ್ಣ ದರ್ಶನ

ರಮ್ಯಾ ನಿಧಾನಕ್ಕೆ ಕೃಷ್ಣ ಬಣದ ಕಡೆ ವಾಲುತ್ತಿದ್ದಂತೆ ಅಂಬಿ ಬೆಂಬಲಿಗರು ಮುಂದಿನ ಲೋಕಸಭಾ ಚುನಾವಣೆಗೆ ಮಂಡ್ಯ ಕ್ಷೇತ್ರದಿಂದ ಚಾಲೆಂಜಿಂಗ್ ಸ್ಟಾರ್ ದರ್ಶನ್ ಹೆಸರನ್ನು ತೇಲಿಬಿಟ್ಟಿದ್ದಾರೆ. ಆ ಮೂಲಕ ಮುಂದಿನ ಚುನಾವಣೆಯಲ್ಲಿ ರಮ್ಯಾ ಸ್ಪರ್ಧಿಸಿದರೆ ನಾವ್ಯಾರೂ ಕೆಲಸ ಮಾಡೋಲ್ಲ ಅನ್ನೋದನ್ನು ಪರೋಕ್ಷವಾಗಿ ರಾಜ್ಯ ನಾಯಕರಿಗೆ ರವಾನಿಸಿದ್ದಾರೆ. ಯಾವಾಗ ದರ್ಶನ್ ಹೆಸರು ಎಂಟ್ರಿಯಾಯಿತೋ ಆಗಲೆ ಅಲರ್ಟ್ ಆದ ಕೃಷ್ಣ ಬಣದ ಆತ್ಮಾನಂದ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್‌ಗೆ ಈ ಪತ್ರ ಬರೆದದ್ದು.


ಅಸಲಿಗೆ ಆ ಪತ್ರದಲ್ಲಿ ರಮ್ಯಾಗೆ ಟಿಕೆಟ್ ಕೊಡಬೇಡಿ ಎಂದೇನು ಹೇಳಿಲ್ಲ. ಆದರೆ ಎಸ್.ಎಂ.ಕೃಷ್ಣರಿಗೆ ಕೊಡಿ ಎಂದು ಒತ್ತಾಯಿಸಲಾಗಿದೆ. ದರ್ಶನ್ ಹೆಸರನ್ನು ಚುನಾವಣಾ ಕಣದಿಂದ ಈಗಿನಿಂದಲೇ ಮಾಯವಾಗಿಸುವುದು ಅದರ ಹಿಂದಿರುವ ಉದ್ದೇಶ. ಈಗಾಗಲೇ ಕೃಷ್ಣರಿಗೆ 83 ವರ್ಷ. ಅವರ ರಾಜ್ಯಸಭಾ ಅವಧಿಯೇ ಇನ್ನೂ ಎರಡು ವರ್ಷ ಬಾಕಿ ಇದೆ. ಸ್ಪರ್ಧಿಸುವ ಮನಸ್ಸಿದ್ದರೂ ಸ್ಪರ್ಧಿಸುವ ವಯಸ್ಸು ಅವರದಲ್ಲ. ಒಟ್ಟಿನಲ್ಲಿ ದರ್ಶನ್ ಹೆಸರಿಗೆ ಕೌಂಟರ್ ಆಗಿ ಕೃಷ್ಣ ಹೆಸರನ್ನು ಚಾಲ್ತಿಗೆ ತರಲಾಗಿದೆಯಷ್ಟೇ. ಅಷ್ಟಕ್ಕೂ ಎಸ್.ಎಂ.ಕೆ ಗರಡಿಯ ರಮ್ಯಾ ಹೆಸರನ್ನು ಫೈನಲ್ ಮಾಡಿರುವ ಪರಮೇಶ್ವರ್ ಹೈಕಮಾಂಡ್‌ಗೂ ತಲುಪಿಸಿಯಾಗಿದೆ.

ರಮ್ಯಾ ಹಾದಿ ಸುಲಭವಿಲ್ಲ

ಕಳೆದ ಲೋಕಸಭಾ ಉಪಚುನಾವಣೆಯಲ್ಲಿ ಜೆಡಿಎಸ್ ಭದ್ರಕೋಟೆಯನ್ನು ಭೇದಿಸಿ ರಮ್ಯಾ ಗೆಲ್ಲಲು ಜಿಲ್ಲಾ ಕಾಂಗ್ರೆಸ್‌ನ ನಾಯಕರೆಲ್ಲಾ ಭಿನ್ನಮತ ಮರೆತು ಒಂದಾಗಿದ್ದು ಕಾರಣವಾಗಿತ್ತು. ಅಲ್ಲದೆ ಆಗ ತಾನೇ ಸರ್ಕಾರ ರಚಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಆ ಉಪಚುನಾವಣೆ ಬಹುದೊಡ್ಡ ಸವಾಲಾಗಿತ್ತು. ಹಾಗಾಗಿ ಜಿಲ್ಲೆಯ ಜೆಡಿಎಸ್ ಶಾಸಕರೊಂದಿಗೆ ಮ್ಯಾಚ್‌ಫಿಕ್ಸಿಂಗ್ ಮಾಡಿಕೊಂಡ ಸಿದ್ದರಾಮಯ್ಯ, ರಮ್ಯಾ ಗೆಲ್ಲಿಸುವ ಜವಾಬ್ದಾರಿಯನ್ನು ಅಂಬಿ ಹೆಗಲಿಗೇರಿಸಿದ್ದರು. ತನ್ನ ಸಚಿವ ಸ್ಥಾನಕ್ಕೂ ಕುತ್ತು ತರಬಲ್ಲದಾಗಿದ್ದ ಚುನಾವಣೆಯನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿದ ಅಂಬಿ ಕ್ಷೇತ್ರದಲ್ಲೇ ಠಿಕಾಣಿ ಹೂಡಿ ರಮ್ಯಾ ಗೆಲುವಿಗೆ ದುಡಿದಿದ್ದರು. ಜೊತೆಗೆ ಸಿಎಂ ಸಿದ್ದು ಭಂಟ ಮಳವಳ್ಳಿ ಶಾಸಕ ನರೇಂದ್ರಸ್ವಾಮಿಯ ಮಳವಳ್ಳಿಯಿಂದಲೇ ಬರೋಬ್ಬರಿ 23 ಸಾವಿರ ಲೀಡ್ ಲಭಿಸಿದ್ದು ರಮ್ಯಾ ಗೆಲುವಿನಲ್ಲಿ ಪ್ರಮುಖ ಪಾತ್ರ ನಿಭಾಯಿಸಿತ್ತು.

ಆದರೆ ಮುಂಬರುವ ಚುನಾವಣೆ ರಮ್ಯಾ ಪಾಲಿಗೆ ಅಷ್ಟು ಸಲೀಸಾಗಿಲ್ಲ. ರಮ್ಯಾ ವಿರುದ್ಧ ಅಂಬಿ ಬಣವೇ ಅಸಮಾಧಾನದಲ್ಲಿ ಕುದಿಯುತ್ತಿದೆ. ಅಂಬಿ ಮತ್ತು ಎಸ್.ಎಂ.ಕೃಷ್ಣ ಬಣಗಳ ನಡುವೆ ನಡೆಯುತ್ತಿರುವ ಜಟಾಪಟಿಯಲ್ಲಿ ರಮ್ಯಾ ಸ್ಥಿತಿ ಏನಾಗುವುದೋ ಎಂಬುದು ಜಿಲ್ಲೆಯ ಜನರಲ್ಲಿ ಕುತೂಹಲ ಮೂಡಿಸಿರುವುದಂತೂ ಸುಳ್ಳಲ್ಲ. ●

‘ಹಿಂದೂ ಎಡಪಂಥ’ ಹಾಗು ಅನಂತಮೂರ್ತಿ



‘ತಮ್ಮ ಮಾತು-ಕೃತಿಗಳಿಂದ ಹಲವು ಸಾರಿ ವಿವಾದ ಕ್ಕೊಳಗಾಗಿರುವ...’ - ಇದು ಪ್ರತಿ ‘ವಾಗ್ವಾದ ವಿದ್ಯಮಾನ’ ಸಂದರ್ಭಗಳಲ್ಲಿ ಅನಂತಮೂರ್ತಿಯವರನ್ನು ಬಣ್ಣಿಸಲು ನಮ್ಮ ಮಾಧ್ಯಮಗಳು ಸಹಜಗೊಳಿಸಿರುವ ನುಡಿಗಟ್ಟು. ‘ವಿವಾದ’ ಮತ್ತು ‘ವಾಗ್ವಾದ’ಗಳಿಗಿರುವ ಅರ್ಥವ್ಯತ್ಯಾಸವೇ ಮಸುಕಾಗಿರುವ ಕಾಲದಲ್ಲಿ, ಅನಂತಮೂರ್ತಿಯವರು ‘ವಾಗ್ವಾದ’ನಿರತರಾಗಿ ತಮ್ಮ ಬದುಕಿನ 81 ವರ್ಷ ಪೂರೈಸುತ್ತಿದ್ದಾರೆ. ನಾವಾಡುವ ಮಾತಿನಲ್ಲಿ ಈ ಬಗೆಯ ‘ಅರ್ಥವಿರೂಪ’ ಮೈದಳೆದಿರುವುದರ ಫಲಶ್ರುತಿಯಾಗಿ ಮತ್ತೊಂದು ‘ವಿಚಾರ ವಿರೂಪ’ವೂ ರೂಢಿಯಾಗಿದೆ: ಪ್ರತಿ ‘ವಾಗ್ವಾದ’ ಸಂದರ್ಭದಲ್ಲೂ, ಅನಂತಮೂರ್ತಿ ಯಾವ ವೈಚಾರಿಕತೆಯ ತಳಹದಿಯ ಮೇಲೆ ತಮ್ಮ ವಾಗ್ವಾದವನ್ನು ಕಟ್ಟುತ್ತಿದ್ದಾರೆ? ಆ ವೈಚಾರಿಕತೆಯ ಪ್ರಸ್ತುತತೆ ಏನು? ಎಂದು ವಿವೇಚಿಸುವುದಕ್ಕೆ ಬದಲಾಗಿ, ‘ಈ ರೀತಿ ವಿವಾದ ಎಬ್ಬಿಸುವ ಮಾತುಗಳನ್ನಾಡಿ ಅನಂತಮೂರ್ತಿ ಯಾವ (ವೈಯಕ್ತಿಕ) ಹಿತಾಸಕ್ತಿಯನ್ನು ಸಾಧಿಸಿಕೊಳ್ಳಲು ಹೊರಟಿದ್ದಾರೆ’ ಎಂದು ಕೆದಕುವ ವಕ್ರರೋಚಕತೆ ಸಾರ್ವಜನಿಕ ವಾಗ್ವಾದವನ್ನು ನಿಯಂತ್ರಿಸುತ್ತಿದೆ. 60 ವರ್ಷಗಳ ಕಾಲ, ಕನ್ನಡದ ನುಡಿಗಟ್ಟು, ಕನ್ನಡಿಗರ ಬದುಕಿನ ಕ್ರಮ ಹಾಗು ಕನ್ನಡ ವಿಚಾರ ವಾಙ್ಮಯಗಳ ಜೊತೆ, ಅತ್ಯುತ್ಸಾಹದಲ್ಲಿ ‘ವಾಗ್ವಾದ’ ನಿರತವಾಗಿರುವವರ ಬದುಕಿನ ಸಾರಗ್ರಹಣೆಗೆ ನಮ್ಮ ಕಾಲದ ‘ಅರ್ಥ-ವಿಚಾರ ವಿರೂಪ’ಗಳು ಅಡ್ಡಗಾಲು ಹಾಕುತ್ತಿವೆ. ಮೊದಲು ಈ ಅಡ್ಡಗಾಲಿಗೆ ಸಿಲುಕದ ವಿವೇಕವನ್ನು ಮನಸಾರೆ ಜಾಗೃತಗೊಳಿಸಿಕೊಳ್ಳಬೇಕು. ಎರಡನೆಯದಾಗಿ, ಅನಂತ ಮೂರ್ತಿಯವರ ಜೊತೆಗಿನ ನಿತ್ಯದ ಸಹಮತ-ಭಿನ್ನಮತಗಳು ನಮ್ಮ ವಿಚಾರಗಳ ಮೇಲೆ ಉಂಟುಮಾಡಿರುವ ಪ್ರಭಾವ ದಿಂದ ಕೊಂಚ ಬಿಡಿಸಿಕೊಂಡು, ಅವರ ಮಾತು-ಕೃತಿಗಳ ಎಳೆಗಳನ್ನು ಹಿಡಿದು, ಅವರ ವೈಚಾರಿಕತೆಯ ಸಾಮಾಜಿಕ ಚಿತ್ರವೊಂದನ್ನು ಹೆಣೆದುಕೊಳ್ಳಬೇಕು. ಈ ದಿಕ್ಕಿನಲ್ಲಿ ಇದು ಒಂದು ಹೆಜ್ಜೆ.

ಮೊದಲ ಉದಾಹರಣೆಯಾಗಿ, ಅನಂತಮೂರ್ತಿ ‘ಮೋದಿಯ ನಾಡಿನಲ್ಲಿ ನಾನು ಬದುಕಲು ಇಷ್ಟಪಡು ವುದಿಲ್ಲ...’ ಎಂದ ವಾಗ್ವಾದವನ್ನು ನೋಡೋಣ. ತಮ್ಮ ಮಾತುಗಳ ಹಿಂದಿರುವ ವಿಚಾರಗಳೇನು ಎನ್ನುವುದಕ್ಕೆ ಅನಂತಮೂರ್ತಿ ನೀಡಿರುವ ಕೆಲವು ಮುಖ್ಯ ವಿವರಗಳು:


- ಹಿಂಸೆಗೆ ನೀವು ತಕ್ಷಣ ಪ್ರತಿಕ್ರಿಯಿಸದಿದ್ದರೆ, ಮುಂದೆ ನೀವು ಯಾವತ್ತೂ ಪ್ರತಿಕ್ರಿಯಿಸೋದಿಲ್ಲ, ದೇಶವಿಭಜನೆಯ ಹಿಂಸೆ, (1984ರಲ್ಲಿ) ಸಿಖ್ಖರ ಮೇಲೆ ನಡೆದ ಹಿಂಸೆ ಮತ್ತು ಗುಜರಾತ್ ಹತ್ಯಾಕಾಂಡ-ಎಲ್ಲವೂ ಒಂದೇ ಬಗೆಯವು; ಹಿಂಸೆ ನಡೆಸಿದ ಜನ ಯೋಜಿತವಾಗಿ ಸಾಮೂಹಿಕ ಹಿಂಸೆ ನಡೆಸಿ, ಅದನ್ನು ತಕ್ಷಣದ ಪ್ರಚೋದನೆಗೆ ಪ್ರತಿಕ್ರಿಯೆ ಎನ್ನುವ ಹಾಗೆ ಬಿಂಬಿಸಿದರು; ಅದರಲ್ಲಿ ಯಾರಿಗೂ ಶಿಕ್ಷೆಯಾಗು ವುದಿಲ್ಲ... ಯಾರು ನಡೆಸಿದರು ಎನ್ನುವುದಕ್ಕಿಂತ ನಮ್ಮ ಬುದ್ಧಿಭಾವಗಳಲ್ಲಿ ಹಿಂಸೆಗೆ ಪ್ರತಿರೋಧಿಸುವುದು ಮುಖ್ಯ. (ಈ ಬಗೆಯಲ್ಲಿ) ಮೋದಿ ಒಬ್ಬ ಫ್ಯಾಸಿಸ್ಟ್-ಆತ ನನಗೆ ಮುಸ್ಸೋಲಿನಿ ಹಾಗು ಹಿಟ್ಲರರ ಹಾಗೆ ಕಾಣುತ್ತಾನೆ.

- ಮೋದಿಗೆ ಅಂತರಂಗದ ಬದುಕಿಲ್ಲ, ಅಂತರಾತ್ಮವಿಲ್ಲ ಎನ್ನುವುದು ನನಗೆ ಸ್ಪಷ್ಟವಾಗಿದೆ. ಆತ, ನೆಹರುವನ್ನು ಬಿಡಿ, ವಾಜಪೇಯಿಯಂಥ ನಾಯಕನೂ ಅಲ್ಲ. ಭಾರತಕ್ಕೆ ಬೇಕಾಗಿರುವುದು ಬಹುಸಂಸ್ಕೃತಿಗೆ ಮುಕ್ತವಾಗಿ ತೆರೆದುಕೊಂಡಂತಹ ಮನುಷ್ಯರು-ಮೋದಿಗೆ ಆ ಗುಣವಿಲ್ಲ.

- ಮೋದಿಗಿಂತ ಅಡ್ವಾನಿಯೇ ವಾಸಿ. ಅಡ್ವಾನಿ ವೋಟು ಗಳನ್ನು ಸೆಳೆದರೂ, ವಾಜಪೇಯಿ ಪ್ರಧಾನಿಯಾಗುವುದಕ್ಕೆ ಅವಕಾಶ ಕಲ್ಪಿಸಿಕೊಡಬಲ್ಲವರು. ಈ ಮೋದಿಗೆ ಆ ಗುಣವೂ ಇಲ್ಲ.

- ನಮ್ಮಲ್ಲಿಂದು ಪಟೇಲ್, ನೆಹರು ಅಥವಾ ಅಂಬೇಡ್ಕರ ರಂಥ ನಾಯಕರು ಇಲ್ಲ. ಭಾರತದ ರಾಜಕೀಯಕ್ಕೆ, ಭೀಷ್ಮನ ಬುದ್ಧಿಮತ್ತೆ ಹಾಗು ಮುತ್ಸದ್ದಿತನಗಳಿರುವ ನಾಯಕರ ಅವಶ್ಯಕತೆ ಇದೆ.

- ಮೋದಿಯ ಅಭಿವೃದ್ಧಿ ಮಾದರಿ ಬರಿ ಟಾಟ, ಬಿರ್ಲಾಗಳಂಥ ದೊಡ್ಡ ಕುಳಗಳನ್ನು ಬೆಳೆಸುತ್ತದೆ. ನಮಗೆ ಇಂದು ಬೇಕಾಗಿರುವುದು ‘ಸರ್ವೋದಯ’ದ ಮಾದರಿ. ‘ಅಭಿವೃದ್ಧಿ’ ಎಂಬ ಕಲ್ಪನೆ ದೇಶವನ್ನೂ, ಜನರ ಬದುಕನ್ನೂ ನಾಶಗೊಳಿಸುತ್ತದೆ. ಸರಕಾರಗಳು ಜನ ‘ನೆಮ್ಮದಿ’ಯಿಂದ ಬದುಕುವುದಕ್ಕೆ ಶ್ರಮಿಸಬೇಕೆ ವಿನಃ ‘ಸುಖ’ಲೋಲುಪತೆ ರೂಢಿಸುವುದಕ್ಕಲ್ಲ. ‘ಸುಖ’ದ ಬೆಂಬತ್ತಿದರೆ, ಅದು ಕೊನೆಯೇ ಇರದ ಆಸೆಗಳನ್ನು ಹುಟ್ಟಿಸುತ್ತಲೇ ಹೋಗುತ್ತದೆ. ‘ಅಭಿವೃದ್ಧಿ’ಗೆ ಜೋತುಬಿದ್ದಿರುವ ಸಮಾಜ ಭ್ರಷ್ಟಾಚಾರವನ್ನು ಹುಲುಸಾಗಿ ಬೆಳೆಸುತ್ತದೆ. ಹೀಗಾಗಿ ನಮಗೆ ಇಂದು ಅವಶ್ಯಕವಾಗಿರೋದು ನೆಮ್ಮದಿ ನೀಡಬಲ್ಲ ಸೃಜನಶೀಲ ರಾಜಕೀಯವೇ ಹೊರತಾಗಿ, ಮೋದಿಯ ವಿಧ್ವಂಸಕ ರಾಜಕೀಯವಲ್ಲ. ಮೋದಿಯ ಅಭಿವೃದ್ಧಿ ಮಾದರಿ ಉಳ್ಳವರನ್ನು ಮಾತ್ರ ಗಮನಿಸುತ್ತದೆ; ತಾವು ನಿರ್ಲಕ್ಷಿತರಾಗಿಬಿಡಬಹುದು ಎಂಬ ಆತಂಕ ಬಾಕಿ ಜನರಲ್ಲಿದೆ: ಈ ಆತಂಕದಲ್ಲಿ ಜನ ಮೋದಿಯ ಮಾದರಿಯನ್ನು ಬೆಂಬಲಿಸತೊಡಗಿದ್ದಾರೆ- ಇದು ಬೆದರಿಸಿ ಬೆಂಬಲ ಗಿಟ್ಟಿಸಿಕೊಳ್ಳುವ, ಜನರನ್ನು ಹೇಡಿಗಳನ್ನಾಗಿಸುವ



ಬಗೆ. ಮೋದಿ ಧಮಕಿ ಹಾಕಿ ಆಳುವ ಪುಂಡ.

- ಇಂದು ನಮಗೆ ಬೇಕಾಗಿರುವುದು ಗಾಂಧಿಯ ಸ್ವಾವಲಂಬಿ ಬದುಕಿನ ಆದರ್ಶ.

(ಅನಂತಮೂರ್ತಿಯವರು ದಿನಪತ್ರಿಕೆಗಳಿಗೆ ನೀಡಿದ ಸಂದರ್ಶನಗಳಿಂದ ಆಯ್ದ ವಿವರಗಳು)

ಎರಡನೆಯದು, ದೇವನೂರು ಮಹದೇವ ಅವರಿಗೆ ಹೇಳಿರುವ ಖಾಸಗಿ ಉದಾಹರಣೆ. ಅನಂತಮೂರ್ತಿ ಒಮ್ಮೆ ದೆಹಲಿಯಲ್ಲಿ ಜ್ವರದ ತಾಪದಿಂದ ಬಳಲಿ ಅರೆನಿದ್ರೆಯಲ್ಲಿದ್ದಾಗ ಮಹದೇವರ ಕಿವಿಯಲ್ಲಿ ಗಾಯತ್ರಿಮಂತ್ರ ಬೋಧಿಸಿದ ಕನಸು ಕಂಡರಂತೆ. ಅದನ್ನು ಮರುದಿನ ಮಹದೇವರಿಗೆ ಫೋನು ಮಾಡಿ ತಿಳಿಸಿದರಂತೆ. ಅದಕ್ಕೆ ಮಹದೇವ ‘ನಾನು ನಿಮಗೆ ಗಾಯತ್ರಿಮಂತ್ರ ಬೋಧಿಸಿದ ಕನಸು ಕಂಡಿದ್ದರೆ ಚೆನ್ನಾಗಿತ್ತು’ ಎಂದರಂತೆ.


ಮೊದಲನೆಯದು ಬಹಿರಂಗದ ವಿವೇಕ, ಎರಡನೆಯದು ಆಳಅಂತರಂಗದ ವಿವೇಚನೆ. ಎರಡರ ನಡುವೆ ಬಿರುಕಿಲ್ಲ- ‘ಅಂತರಂಗ ಬಹಿರಂಗ’ಗಳ ಭೇದವಿಲ್ಲ. ವಾಜಪೇಯಿ, ಅಡ್ವಾನಿ, ಮೋದಿ ಅನಂತಮೂರ್ತಿಯವರಿಗೆ ಒಂದು ಪಕ್ಷದ ಭಾಗವಾಗಿ ಕಾಣೋದಿಲ್ಲ. ಯಾವುದೇ ಪಕ್ಷ ಅಥವಾ ಬಣಗಳಲ್ಲಿದ್ದರೂ, ವ್ಯಕ್ತಿಗೆ ಅಂತರಾತ್ಮದ ಗುಣ ಅನ್ನೋದು ತುಂಬಾ ಮುಖ್ಯವಾಗಿರಬೇಕು ಮತ್ತೂ ಆ ಅಂತರಾತ್ಮದ ಗುಣವೇ ನಮ್ಮ ಬಹಿರಂಗದ ಗುಂಪು ವರ್ತನೆಗಳನ್ನು ನಿಯಂತ್ರಿಸುವುದು ಎಂಬ ಅಚಲವಾದ ನಂಬಿಕೆ ಇದೆ. ಸಾಮೂಹಿಕ ಹಿಂಸೆಯಲ್ಲಿ ತೊಡಗಿಕೊಂಡಿರುವ ಜನರೂ, ಅನಂತಮೂರ್ತಿಯವರಿಗೆ ಹಿಂಸೆಯನ್ನು ಅಂತರಂಗದಲ್ಲಿ ಒಪ್ಪಿಕೊಂಡು, ಆ ಪ್ರೇರಣೆಯನ್ನು ಬಹಿರಂಗದಲ್ಲಿ ಕಾರ್ಯ ರೂಪಕ್ಕಿಳಿಸಿ, ನಂತರ ಅದನ್ನು ಅಂತರಂಗದ ತತ್‌ಕ್ಷಣದ ಭಾವೋದ್ರೇಕ ಎಂದು ಸಮಜಾಯಿಷಿಕೊಡುವ ಕಪಟ ಭಾವಕ್ಕೆ ಮನಸ್ಸು ಕೊಟ್ಟ ಬಿಡಿ ವ್ಯಕ್ತಿಗಳು-ಮೋದಿ ಆ ಬಗೆಯ ಕಪಟತನಕ್ಕೆ ಮಾದರಿ ವ್ಯಕ್ತಿಯಾಗಿ ತೋರುತ್ತಾನೆ. ಅನಂತಮೂರ್ತಿ, ಮತವಿಚಾರಗಳು (ಐಡಿಯಾಲಜಿ) ವ್ಯಕ್ತಿಗಳನ್ನು ತಮ್ಮ ಅಂತರಂಗಕ್ಕೆ ಕುರುಡರನ್ನಾಗಿಸಿ, ಬಹಿರಂಗದ ಹುಸಿ ಐಕ್ಯತೆಗೆ ಕರೆದೊಯ್ಯುವ ಸಾಧನಗಳು ಎಂಬ ನಿಲುವಿನವರು. ಜಾತಿಯೂ ಸೇರಿದ ಹಾಗೆ ವ್ಯಕ್ತಿಯ ವ್ಯಕ್ತಿತ್ವವನ್ನು ಅವನ ಅಂತರಂಗದಿಂದ ಬೇರೆ ಮಾಡಿ, ಸಾರ್ವತ್ರಿಕ ಬಹಿರಂಗಕ್ಕೆ ಒಗ್ಗಿಸುವ (ಹಿಂದೂ, ಇಸ್ಲಾಂ, ಕ್ರೈಸ್ತ ಮತಗಳು, ಪಕ್ಷಾಧಾರಿತ ರಾಜಕೀಯ ಮತವಿಚಾರಗಳು, ‘ರಾಷ್ಟ್ರೀಯತೆ’ಯ ವೈಚಾರಿಕತೆ) ಎಲ್ಲಾ ಸಾಮೂಹಿಕ ಕೆಲಸಗಳನ್ನೂ ಅವರು ಅನುಮಾನಿಸುತ್ತಾರೆ. ಹಾಗು ಆ ಬಗೆಯ ಸಾಮೂಹಿಕ ಮನೋಸ್ಥಿತಿ ಕೇಡನ್ನೇ ಉಂಟುಮಾಡುತ್ತದೆ ಎಂಬ ಸಂದೇಹವನ್ನು ಪ್ರತಿ ವ್ಯಕ್ತಿಯೂ ಜಾಗೃತವಾಗಿಟ್ಟು ಕೊಂಡಿರಬೇಕು ಎಂಬ ಆದರ್ಶ ಅನಂತಮೂರ್ತಿಯವರ ವೈಚಾರಿಕ ಹೆಣಿಗೆಯ ಬಂಧವಾಗಿದೆ. ಹೀಗಾಗಿ, ಒಬ್ಬ ಮೇಲ್ಜಾತಿಯ ವ್ಯಕ್ತಿ ಜಾತಿಯ ಆಚರಣೆಗಳಲ್ಲಿ ಯಾವುದು ಕೆಳಜಾತಿಯವರಿಗೆ ಕೇಡುಂಟು ಮಾಡುವಂತಹುದು, ಯಾವುದು ಸಾಮು ದಾಯಿಕ ಬದುಕಿನ ಅವಶ್ಯಕತೆಯಾಗಿ ರೂಢಿಯಲ್ಲಿರುವುದು ಎನ್ನುವ ವಿಮರ್ಶಾ ವಿವೇಕವನ್ನು ಕಾಪಾಡಿಕೊಂಡಿದ್ದರೆ, ಅಂತಹ ವ್ಯಕ್ತಿ ಜಾತಿಹಿಂಸೆಗೆ ಮುಂದಾಗಲಾರ ಮಾತ್ರವಲ್ಲ, ತನ್ನ ಜಾತಿಯವರು ಆ ಬಗೆಯ ಹಿಂಸೆಯನ್ನು ನಡೆಸುವವರೇ ಆಗಿದ್ದರೆ, ಆ ಹಿಂಸೆಯನ್ನು ವಿರೋಧಿಸುವ ಧೀಮಂತಿಕೆಯನ್ನು ಪಡೆದುಕೊಂಡಿರುತ್ತಾನೆ ಎನ್ನುವ ನಂಬಿಕೆ ಅವರ ಕಥೆ ಕಾದಂಬರಿಗಳ ಪ್ರಾತಿನಿಧಿಕ ಪಾತ್ರಗಳಲ್ಲಿ ಅಚ್ಚೊತ್ತಿದೆ. ಅನಂತಮೂರ್ತಿಯವರ ಪ್ರಕಾರ, ಒಬ್ಬ ವ್ಯಕ್ತಿ ಜಾತಿ ಮೀರುವುದು ಎಂದರೆ, ತನ್ನ ಮೇಲ್ಜಾತಿಯ ಸಾಮಾಜಿಕ ಅಧಿಕಾರದ ಅಹಂಕಾರವನ್ನು ಕಳೆದುಕೊಳ್ಳುವ ಮಾರ್ಗವನ್ನೂ ಅಥವಾ ಕೆಳಜಾತಿಯ ವ್ಯಕ್ತಿ ತನ್ನ ಕೀಳುಸ್ಥಾನವನ್ನು ನಿರಾಕರಿಸುವ ಸ್ವಾಭಿಮಾನದ ಮಾರ್ಗವನ್ನೂ ಪಡೆದುಕೊಳ್ಳುವುದೇ ಆಗಿದೆ. ಈ ಅಹಂಕಾರ ವರ್ಜನೆ, ಸ್ವಾಭಿಮಾನ ಆರ್ಜನೆಯ ಕ್ರಿಯೆ ಮುಖ್ಯವೇ ಹೊರತು, ಅವುಗಳಿಗೆ ಪ್ರೇರಣೆ, ಪ್ರಚೋದನೆ ಒದಗಿಸುವ ಮೂಲಗಳ ಬಗ್ಗೆ ಅನಂತಮೂರ್ತಿಯವರಿಗೆ ಯಾವ ಮಡಿವಂತಿಕೆಯೂ ಇಲ್ಲ. ಅಹಂಕಾರ ವರ್ಜನೆ, ಸ್ವಾಭಿಮಾನ ಆರ್ಜನೆಗೆ ಪಾಶ್ಚಿಮಾತ್ಯ ಆಧುನಿಕತೆಯಿಂದ ಸಾಧನ ಸಲಕರಣೆಗಳು ದೊರಕಿದರೆ, ಅಷ್ಟರಮಟ್ಟಿಗೆ ಆ ಜ್ಞಾನವನ್ನು ನಾವು ಒಗ್ಗಿಸಿಕೊಳ್ಳಬೇಕು. ಅಂತೆಯೇ ಜಾತಿ, ಮತ ಸಮುದಾಯಗಳ ಕೂಡು ಬದುಕಿನ ಅನುಭವಗಳಿಂದ ಪ್ರೇರಣೆಗಳು ಒದಗಿ ಬರುವುದಾದರೆ, ಆಧುನಿಕತೆಯ ನೆಪದಲ್ಲಿ ಅವುಗಳನ್ನು ಕಡೆಗಣಿಸಬಾರದು ಎನ್ನುವುದು ಅನಂತಮೂರ್ತಿಯವರ ಆಚರಣೆಯ ತತ್ವ. ಆದರೆ ಈ ಎರಡೂ ಮಾರ್ಗಗಳೂ ಸಾಮಾಜಿಕ ಅಧಿಕಾರ ಆರ್ಜನೆ, ಸ್ವಾಭಿಮಾನ ವರ್ಜನೆಗೆ ವ್ಯಕ್ತಿಯನ್ನು ಕೊಂಡೊಯ್ಯುವ ಸಂದರ್ಭದಲ್ಲಿ ಎರಡೂ ಅನಂತಮೂರ್ತಿಯವರ ಟೀಕೆಗೆ ಒಳಪಟ್ಟಿವೆ. ಮೇಲ್ನೋಟಕ್ಕೆ ಇದು ಅವರ ವೈಚಾರಿಕತೆಯಲ್ಲಿರುವ ದ್ವಂದ್ವವಾಗಿ ಕಂಡರೂ, ಬಹಿರಂಗದ ಆಚರಣೆ, ವ್ಯಕ್ತಿಯ ಅಂತರಂಗದ ವಿಮರ್ಶಾತ್ಮಕ ಶೋಧ ಅಥವಾ ಅದು ಇಲ್ಲದೇ ಹೋಗುವುದರ ಫಲವೆಂಬ ಮೂಲ ತತ್ವ ವಿಚಾರಕ್ಕೆ ಸರಿಹೊಂದುವ ತತ್ವಾಚರಣೆಯಾಗಿದೆ.

ಈ ತತ್ವವನ್ನು ಅನುಸರಿಸಿ ಜಾತಿಯನ್ನು ಪೂರ್ಣ ತ್ಯಜಿಸದೆ, ಜಾತಿಯತೆಯನ್ನು ಪ್ರತಿರೋಧಿಸುವುದು ಸಾಧ್ಯ ಎಂಬ ವಾಗ್ವಾದವನ್ನು ಅನಂತಮೂರ್ತಿ ನಡೆಸುತ್ತಿದ್ದಾರೋ, ಅದನ್ನೇ ಅನುಸರಿಸಿ ‘ಹಿಂದೂ ಮತ’ದ ವೈವಿಧ್ಯಮಯ ತತ್ವ ಹಾಗು ಆಚರಣೆಗಳನ್ನು ನಿರಾಕರಿಸದೇ, ಸಂಘಪರಿವಾರದ ‘ಹಿಂದೂತ್ವವಾದ’ವನ್ನು ರಾಜಿ ಇಲ್ಲದೆ ಪ್ರತಿರೋಧಿಸುವುದಕ್ಕೆ ಸಾಧ್ಯವಿದೆ ಮಾತ್ರವಲ್ಲ ‘ಹಿಂದೂತ್ವವಾದ’ವನ್ನು ಪ್ರತಿರೋಧಿಸಲಿಕ್ಕೆ ಅದೇ ಋಜುಮಾರ್ಗ ಎನ್ನುವುದೂ ಅವರ ನಿಲುವು. ಅವರ ಪ್ರಕಾರ, ‘ಹಿಂದೂ ಮತ’ ಎನ್ನುವುದು ‘ಒಂದಿಲ್ಲ’. ಹಲವು ಬಗೆಯ ವೈವಿಧ್ಯಮಯ ತತ್ವ ಸಿದ್ಧಾಂತಗಳು, ಆಚರಣೆಗಳೂ ಈ ದೇಶದಲ್ಲಿವೆ. ಅವುಗಳನ್ನು ಸಾಮೂಹಿಕವಾಗಿ ಒಗ್ಗೂಡಿಸಿ ‘ಹಿಂದೂ ಮತ’ ಎನ್ನುವುದೇ ವೈರುಧ್ಯಮಯ ತತ್ವಗಳಿಗೆ ಬಗೆಯುವ ಅಪಚಾರ. ಮೊದಲಾಗಿ ನಾವು ಈ ಬಗೆಯ ಪರಿಕಲ್ಪನೆಗಳನ್ನು ನಿರಾಕರಿಸಬೇಕು. ಎರಡನೆಯದಾಗಿ, ಈ ನಾಡಿನಲ್ಲಿ ಹಲವು ನಮೂನೆಯ ಮತ ತತ್ವಗಳ ಸಂಕರ ನಡೆದು, ಅಂತರಂಗದ ಪರಿಶೋಧನೆಯ ಮೂಲಕ ಬಹಿರಂಗದ ವರ್ತನೆಗಳನ್ನು ರೂಪಿಸಿಕೊಳ್ಳಬಲ್ಲಂಥ ಹಲವು ಬಗೆಯ ಮತ ತತ್ವ ಪ್ರಯೋಗಗಳೂ, ಅವುಗಳನ್ನೂ ಆಚರಿಸುವ ಸಾಮಾನ್ಯ ಜನಸಮುದಾಯವೂ ಇವೆ. ಈ ಅರ್ಥದಲ್ಲಿ ಮತಾಚರಣೆ ಯು, ವ್ಯಕ್ತಿಗತ ನಂಬಿಕೆ ಆಗಿದ್ದುಕೊಂಡೇ ಸಾಮುದಾಯಿಕ ಗುಣವಿಶೇಷವೂ ಆದದ್ದು ಇದೆ. ಆದರೆ ‘ಹಿಂದೂತ್ವವಾದ’ವು ಈ ಗುಣವಿಶೇಷಗಳನ್ನು ಒರೆಸಿ ಹಾಕುವ ಕಾರ್ಯಕ್ರಮ ಹಾಕಿಕೊಂಡು, ವ್ಯಕ್ತಿಯ ಅಂತರಂಗ ಶೋಧದ ಮೂಲಕ ಬಹಿರಂಗದ ಸದ್ವರ್ತನೆಯನ್ನು ಪಡೆದುಕೊಳ್ಳುವ ಮಾರ್ಗವನ್ನು ನಾಶಮಾಡುತ್ತಿದೆ. ಈ ವಿನಾಶಮಾರ್ಗ, ವೈವಿಧ್ಯಮಯ ಸಮುದಾಯ ನಾಗರಿಕತೆಯನ್ನು ನಾಶಮಾಡುವುದನ್ನು ಒಬ್ಬ ‘ಹಿಂದೂ’ವಾಗಿಯೇ ಭಾರತದ ಪ್ರಜೆ ಪ್ರತಿರೋಧಿ ಸಬೇಕು-ತನ್ನ ಪ್ರತಿರೋಧ ಈ ನೆಲೆಯದ್ದು ಎನ್ನುವುದು ಅನಂತಮೂರ್ತಿಯವರ ಕಳೆದ 20 ವರ್ಷಗಳ ವಾಗ್ವಾದ ವಾಗಿದೆ. ಈ ಬಗೆಯ ವೈಚಾರಿಕತೆ, ಅನಂತಮೂರ್ತಿಯವರ ಸಂಶೋಧನೆಯಲ್ಲ.


‘ಹಿಂದೂ ಮತ’ ದ ವೈವಿಧ್ಯಮಯ ತತ್ವ ಹಾಗು ಆಚರಣೆಗಳನ್ನು ನಿರಾಕರಿಸದೇ, ಸಂಘ ಪರಿವಾರದ ‘ಹಿಂದೂತ್ವವಾದ’ವನ್ನು ರಾಜಿ ಇಲ್ಲದೆ ಪ್ರತಿರೋಧಿಸುವುದಕ್ಕೆ ಸಾಧ್ಯವಿದೆ ಮಾತ್ರವಲ್ಲ ‘ಹಿಂದೂತ್ವವಾದ’ ವನ್ನು ಪ್ರತಿರೋಧಿಸಲಿಕ್ಕೆ ಅದೇ ಋಜು ಮಾರ್ಗ ಎನ್ನುವುದೂ ಅವರ ನಿಲುವು. ಅವರ ಪ್ರಕಾರ, ‘ಹಿಂದೂ ಮತ’ ಎನ್ನುವುದು ‘ಒಂದಿಲ್ಲ’. ಹಲವು ಬಗೆಯ ವೈವಿಧ್ಯಮಯ ತತ್ವ ಸಿದ್ಧಾಂತಗಳು, ಆಚರಣೆಗಳೂ ಈ ದೇಶದಲ್ಲಿವೆ. ಅವುಗಳನ್ನು ಸಾಮೂಹಿಕವಾಗಿ ಒಗ್ಗೂಡಿಸಿ ‘ಹಿಂದೂ ಮತ’ ಎನ್ನುವುದೇ ವೈರುಧ್ಯಮಯ ತತ್ವಗಳಿಗೆ ಬಗೆಯುವ ಅಪಚಾರ.

ಈ ದೇಶದಲ್ಲಿ ‘ಹಿಂದೂತ್ವವಾದ’ 20ನೇ ಶತಮಾನದ ಆದಿಯಿಂದಲೇ ಕಾರ್ಯಾಚರಿಸುತ್ತಿದೆ. ಅದಕ್ಕೆ ಒಂದು ಪ್ರತಿರೋಧ ಮಾರ್ಗವಾಗಿ ಈ ವೈಚಾರಿಕತೆಯೂ ರೂಪ ಪಡೆದಿದೆ. ಎಂ.ಕೆ.ಗಾಂಧಿ ಈ ಬಗೆಯ ‘ಹಿಂದೂ ವೈಚಾರಿಕತೆ’ಯ ಪ್ರತಿಪಾದಕರಾಗಿದ್ದರು. ಗಾಂಧಿ ಮಾರ್ಗವನ್ನು ಒಂದಲ್ಲ ಒಂದು ಬಗೆಯಲ್ಲಿ ತಮ್ಮ ಸಾಮಾಜಿಕ ಕಾರ್ಯದಲ್ಲಿ ಅಳವಡಿಸಿಕೊಂಡ ಸಮಾಜ ಸುಧಾರಕರು ಈ ವಿಚಾರ ಪರಂಪರೆಯನ್ನು ತಮ್ಮದಾಗಿಸಿಕೊಂಡರು. ಲೋಹಿಯಾ ಕೂಡ ತಮ್ಮ ಸಮಾಜ-ಸಂಸ್ಕೃತಿ ವಿಶ್ಲೇಷಣೆಯಲ್ಲಿ ಈ ವೈಚಾರಿಕತೆಯನ್ನು ಮತ್ತಷ್ಟೂ ಹರಿತಗೊಳಿಸಿದರು. ‘ಹಿಂದೂ ಮಹಾಸಭಾ’ ಹಾಗು ರಾಷ್ಟ್ರೀಯ ಸ್ವಯಂ ಸೇವಕ ಸಂಘಗಳ ‘ಹಿಂದೂ ಬಲಪಂಥ’ದ ವೈಚಾರಿಕತೆಗೆ ಪ್ರತಿರೋಧಿಯಾಗಿ ನಿರೂಪಿತವಾದ ಈ ವೈಚಾರಿಕತೆಯನ್ನು ‘ಹಿಂದೂ ಎಡಪಂಥ’ವೆಂದು ಗುರುತಿಸಬಹುದು.

ಕನ್ನಡ ಸಾಹಿತ್ಯದಲ್ಲಿ ಪು.ತಿ.ನರಸಿಂಹಾಚಾರ್, ಗೊರೂರು ರಾಮಸ್ವಾಮಿ ಅಯ್ಯಂಗಾರರಂಥ ಗಾಂಧಿವಾದಿಗಳೂ, ಬಿ.ವಿ.ಕಾರಂತ, ಕೆ.ವಿ.ಸುಬ್ಬಣ್ಣರಂತಹ ಕಲಾವಿದರೂ ‘ಹಿಂದೂ ಎಡಪಂಥ’ದ ವಿಚಾರಸಾರವನ್ನು ಅರಗಿಸಿಕೊಂಡವರಾಗಿದ್ದರು. ಬಾಬ್ರಿ ಮಸೀದಿ ಧ್ವಂಸವಾದಾಗ, ಲಂಕೇಶರು ಬೆಂಗಳೂರಿನಲ್ಲಿ ಆಯೋಜಿಸಿದ್ದ ಪ್ರತಿಭಟನಾ ಸತ್ಯಾಗ್ರಹಕ್ಕೆ ಪು.ತಿ.ನ. ಅವರನ್ನು ಆಹ್ವಾನಿಸಿದ್ದೂ, ಅವರು ಸ್ವಇಚ್ಛೆಯಿಂದ ಬಂದು ಅಲ್ಲಿ ಮಾತನಾಡಿದ್ದೂ, ದೊರೆಸ್ವಾಮಿಯವರು ಇಂದಿಗೂ ‘ಹಿಂದೂತ್ವವಾದ’ದ ವಿರುದ್ಧದ ಹೋರಾಟದಲ್ಲಿ ದಣಿವಿಲ್ಲದೆ ಭಾಗವಹಿಸುತ್ತಿರುವುದೂ ಆಕಸ್ಮಿಕವಲ್ಲ. ‘ಹಿಂದೂ ಎಡಪಂಥ’ ಇವತ್ತು ಕಳಾಹೀನವಾಗಿದೆ ನಿಜ; ಆದರೆ, ಅನಂತಮೂರ್ತಿ ಯವರ ವೈಚಾರಿಕತೆ ಅಂತಹ ‘ಹಿಂದೂ ಎಡಪಂಥ’ದ ಪರಂಪರೆಗೆ ಸೇರಿದ್ದು, ಅವರ ಬದುಕು ಹಾಗು ಕೃತಿಗಳನ್ನು ಈ ಆವರಣದಲ್ಲಿಟ್ಟು ಓದಿಕೊಳ್ಳುವುದು, ಅವರ ವಾಗ್ವಾದಗಳನ್ನು ಅರ್ಥೈಸಿ ಕೊಳ್ಳಲಿಕ್ಕೂ, ಮುಂದು ವರೆಸಲಿಕ್ಕೂ, ನೆರವಾದೀತು.



● ಕೆ.ಫಣಿರಾಜ್




ಪ್ರಜ್ಞೆ ಮತ್ತು ಪರಿಸರದ ಅನಾವರಣ

ಜದಲ್ಲಿ ಅನಂತಮೂರ್ತಿಯವರದು ಸಂಯೋಜಿತ ಅವರ ಬದುಕು-ವ್ಯಕ್ತಿತ್ವ-ಬರವಣಿಗೆಗೆ ಇವುಗಳನ್ನು ಬೇರೆ ಮಾಡಿ ನೋಡುವುದು ಸಾಧ್ಯವಿಲ್ಲ. ರವಿಗೆ ತಾನು ಬದುಕುತ್ತಿರುವ ಪರಿಸರದೊಂದಿಗೆ ದರೂ ಬಿಡದ ಸಂಬಂಧವಿರಬೇಕು ಎನ್ನುವುದನ್ನು ಗಿ ನಂಬಿರುವವರು ಅನಂತಮೂರ್ತಿ. ಬರವಣಿಗೆ ಲೇಖಕರ ಅಭಿವ್ಯಕ್ತಿ ಮಾರ್ಗವಲ್ಲ, ಸುತ್ತಮುತ್ತಲಿನ ಳೂ, ಅವುಗಳಿಗೆ ಕಲಾವಿದರ ಸ್ಪಂದನೆ ಮತ್ತು ಮಗಳೂ ಕಲಾಭಿವ್ಯಕ್ತಿಯ ಒಂದು ಪೂರಕ ದಾರಿ ದರಲ್ಲಿ ಇವರಿಗೆ ಅನುಮಾನಗಳಿಲ್ಲ. ಮುಂದುವರಿಸಿ ವುದಾದರೆ ಲೇಖಕ ಅಥವಾ ಲೇಖಕಿ ಪ್ರಾತಿನಿಧಿಕ ವನ್ನು ಅನಂತಮೂರ್ತಿಯವರು ಒಪ್ಪುವುದಿಲ್ಲ ಎಂದೇ ತ್ತದೆ. ನವ್ಯ ಸಾಹಿತ್ಯ ವ್ಯಕ್ತಿ ಕೇಂದ್ರಿತ ಎನ್ನುವ ೀನದ ಅಸಂಬದ್ಧತೆಯನ್ನು ಬಹು ಶಕ್ತವಾಗಿ ಇವರು ತ್ತಾರೆ. ಸಾರ್ವಜನಿಕ ಬದುಕಿನ ಎಲ್ಲ ಮುಖ್ಯ ಖಕ ಸಂಗತಿಗಳಿಗೂ ಅನಂತಮೂರ್ತಿಯವರು ಗಿ ಸ್ಪಂದಿಸುತ್ತಾರೆ ಮತ್ತು ಅದಕ್ಕಾಗಿ ಹೋರಾಡಲೂ ಸುತ್ತಾರೆ. ಆದರೆ ಮೂಲತಃ ಇವರದು ಸಂಗದ ೀನ. ಮನುಷ್ಯ ಸಂಗವಿಲ್ಲದೆ ಇವರು ಅರೆಗಳಿಗೆಯೂ ರರು. ಸದಾ ಉಲ್ಲಸಿತ ವಾತಾವರಣಕ್ಕಾಗಿ ರೆಯುವ ಮತ್ತು ಅದನ್ನು ನಿರ್ಮಿಸಿಕೊಳ್ಳುವಲ್ಲಿ ರುವ ಅಸಾಧಾರಣ ಶಕ್ತಿಯಿಂದಲೇ ತಮ್ಮ ಸುತ್ತ ೇಹಕ ವಾತಾವರಣವೊಂದನ್ನು ಅವರು ಕೊಳ್ಳಬಲ್ಲರು. ಅರ್ಥಪೂರ್ಣ ಚರ್ಚೆಗಳು ುವಂತೆ ಅವರು ಒಂದು ತಂಡವನ್ನು ದಿಸಬಲ್ಲರು.

ನಂತಮೂರ್ತಿಯವರ ಕೇಂದ್ರ ದೃಷ್ಟಿಕೋನ ಎಂದು ದನ್ನಾದರೂ ಗುರುತಿಸಲು ಸಾಧ್ಯವಿದೆಯೆ? ಈ ಕಷ್ಟು ಚರ್ಚೆಗಳು ಕನ್ನಡದಲ್ಲಿ ಮಾತ್ರವಲ್ಲ ಇಂಗ್ಲಿಷ್ ಜಗತ್ತಿನ ಇತರ ಭಾಷೆಗಳಲ್ಲೂ ನಡೆದಿವೆ, ನಡೆಯುತ್ತಿವೆ. ರ'ದಿಂದ ಆರಂಭವಾದ ಇವರ ಶೋಧ ಪಚ್ಚೆ ರ್ನತನಕ ಮುಂದುವರಿದಿದೆ. ಇನ್ನೆಲ್ಲೋ ನಾನು ದಂತೆ, 'ಮನುಷ್ಯನ ಮನಸ್ಸಿನಿಗಿರುವ ದ್ರೋಹದ ಅಗಾಧವಾದುದು' ಎನ್ನುವ ಇವರ ಹೇಳಿಕೆಯೇ ಬರವಣಿಗೆಯ ಮುಖ್ಯ ಕೇಂದ್ರಗಳಲ್ಲಿ ಒಂದಾಗುವುದು ಾ ಸಾಧ್ಯವಿದೆ. ವ್ಯಕ್ತಿ ಮತ್ತು ಸಂಬಂಧಗಳಲ್ಲಿನ ಳಿಗಳು ವ್ಯಕ್ತಿಗತ ಸಂಬಂಧದ ಆಚೆಗೆ ಹಬ್ಬಿ ಕುಟುಂಬ ಪರಿಸರವನ್ನು ಒಳಗೊಳ್ಳುವ, ಆ ಮೂಲಕ ಇಡೀ ಶ ಸಂಕೀರ್ಣವಾಗುವ ಹಲವು ಮಜಲುಗಳನ್ನು ಮೂರ್ತಿಯವರು ಸೂಕ್ಷ್ಮಾತಿಸೂಕ್ಷ್ಮ ವಿವರಗಳಲ್ಲಿ ಸುತ್ತಾರೆ.

ೊನೆಗೂ ತನ್ನನ್ನು ತಾನು ಮುಖಾಮುಖಿಯಾಗುವುದೇ ಷ್ಯನ ಎದುರಿಗಿರುವ ಮೂಲಭೂತ ಸವಾಲು ದೊಂದು ಆಧ್ಯಾತ್ಮಿಕ ಪ್ರಶ್ನೆಯಷ್ಟು ಗಾಢವಾಗಿ, ರವಾಗಿ ಇವರ ಪಾತ್ರಗಳನ್ನು ಕಾಡುತ್ತದೆ. ಕ್ಷಿಯನ್ನೂ ಪಳಗಿಸಬಲ್ಲ, ಯಾಮಾರಿಸಬಲ್ಲ ಮನುಷ್ಯನ ನ ದ್ರೋಹದ ಸಾಧ್ಯತೆಗಳನ್ನು ಕಂಡುಕೊಳ್ಳುವ, ಳ್ಳುವ ಸ್ಥಿತಿಯೊಂದನ್ನು ಮನುಷ್ಯ ತಲುಪಬಹುದಾದ ಯನ್ನೇ ಬೇರೆಬೇರೆ ಸನ್ನಿವೇಶಗಳಲ್ಲಿಟ್ಟು ನೋಡುತ್ತಾ ಗುತ್ತಾರೆ. ತಾನು ಖಚಿತವಾಗಿ ನಂಬಿರುವ ಗಳಿಗೂ, ತನ್ನ ಬದುಕು ವ್ಯಕ್ತಿತ್ವದ ಅವಿಭಾಜ್ಯ ವೆಂದು, ತಿಳಿದಿರುವ ಸಂಬಂಧಗಳಿಗೂ ತನ್ನ ಯನ್ನು ಕೊನೆಯವರೆಗೂ ಕಾಪಾಡಿಕೊಂಡು ದು ಎಷ್ಟು ಕಷ್ಟಸಾಧ್ಯ ಎನ್ನುವ ಪ್ರಶ್ನೆಯನ್ನು ಇವರ ಗಳು ನಿರಂತರವಾಗಿ ಎದುರಿಸುತ್ತವೆ. ಹೀಗೆ ಸುವುದಕ್ಕೆ ಬೇಕಾದ ಮನಸ್ಥಿತಿಯನ್ನು ಕಟ್ಟಿಕೊಳ್ಳುವುದೇ ಷ ಎನ್ನುವ ಅರಿವೇ ಮನುಷ್ಯನ ಸವಾಲು ತಲ್ಲಣಗಳ ಪ ದರ್ಶನವನ್ನು ಮಾಡಿಸುತ್ತವೆ. ಪ್ರಾಣೇಶಾಚಾರ್ಯ, ಷ್ಣಂದ ಹಿಡಿದು 'ಅವಸ್ಥೆ'ಯ ಕೃಷ್ಣಪ್ಪನನ್ನು, ಹಾದು ಟಿವ ತನಕ ಇವರ ಬರವಣಿಗೆಯ ಯಾವ ಮುಖ್ಯ ನ್ನೂ ಇದಕ್ಕೆ ಉದಾಹರಣೆಯಾಗಿ ನೋಡಬಹುದು. ಇಡೀ ಪ್ರಕ್ರಿಯೆಯನ್ನು ಇನ್ನೊಂದು ರೀತಿಯಲ್ಲೂ

ನೋಡಲು ಸಾಧ್ಯವಿದೆ. ಮನುಷ್ಯ ಚೈತನ್ಯದ ವಿಕಾಸವಾಗಿಯೂ ಇವರ ಬರವಣಿಗೆಯನ್ನು ಪರಿಭಾವಿಸಲು ಸಾಧ್ಯವಿದೆ. ಅಸಾಧ್ಯ ಒಳತೋಟಿಯಿಂದ ಒದ್ದಾಡುತ್ತಲೇ ಅದರಿಂದ ಹೊರಬರುವ ದಾರಿಯೂ ಕಾಣದೇ ಸಂಕಟವೇ ಇದಕ್ಕೆ ಮುಕ್ತಿಯೋ ಎಂದು ಚಿಂತಿಸುವ ಪ್ರಾಣೇಶ ಚಾರ್ಯನಿಗೂ; ತಾನು ಕಟ್ಟಲು, ಕಾಣಲು ಬಯಸುವ ಸಾಮಾಜಿಕ ರಚನೆಗೂ, ಅದರ ಹೊರಗಿರುವವರೂ ಇದನ್ನೇ ಬಯಸುತ್ತಾರೆ, ತಾನು ಅವರ ವಾಹಕ, ಪ್ರತಿನಿಧಿ ಎಂದು ನಂಬಿ ಕಾರ್ಯೋನ್ಮುಖನಾಗುವ ಎಲ್ಲ ಹೊತ್ತಿನಲ್ಲೂ ತಾನು ಏಕಾಂಗಿ ಎನ್ನುವ ಅನುಭವದಲ್ಲಿ ತತ್ತರಿಸಿಹೋಗುವ 'ಭಾರತಿಪುರ'ದ ಜಗನ್ನಾಥನಿಗೂ, ತಾನು



ಬದಲಾವಣೆಯೊಂದರ ಅಧ್ವರ್ಯುವಾಗಬಲ್ಲೆನೆಂದು ತಿಳಿಯುವುದೇ ಮನುಷ್ಯನ ಅಹಂಕಾರದ ಪರಾಕಾಷ್ಠೆ ಎನ್ನುವ ಅರಿವಿನಿಂದ ಆರಂಭದಲ್ಲಿ ಕಸಿವಿಸಿಗೊಂಡರೂ ಕೊನೆಯಲ್ಲಿ ನಿರಾಳನಾಗುವ 'ಅವಸ್ಥೆ'ಯ ಕೃಷ್ಣಪ್ಪನಿಗೂ ಮೇಲ್ನೋಟಕ್ಕೆ ಸಂಬಂಧಗಳಿಲ್ಲದಂತೆ ಕಂಡರೂ ನಿಜದಲ್ಲಿ ಅವರು ಒಂದೇ ವ್ಯಕ್ತಿತ್ವದ ಹಲವು ಅವಸ್ಥೆಗಳನ್ನು ಪ್ರತಿನಿಧಿಸುತ್ತಿದ್ದಾರೆ. ಅಥವಾ ಈ ಅವಸ್ಥೆಗಳನ್ನು ಸ್ವಾತಂತ್ರ್ಯೋತ್ತರ ಭಾರತದ ಮೂರು ತಲೆಮಾರುಗಳ ಅವಸ್ಥೆ ಎಂದು ತಿಳಿಯುವುದೇ ಅನಂತಮೂರ್ತಿಯವರ ಬರವಣಿಗೆಯ ಮಹತ್ವ ಮತ್ತು ಪ್ರಸ್ತುತತೆಯನ್ನು ಗ್ರಹಿಸುವ ಸರಿಯಾದ ಮಾರ್ಗ.

ಇದನ್ನೆಲ್ಲ ಗುರುತಿಸುತ್ತಿರುವಾಗಲೇ ಇವರ ಬರವಣಿಗೆಯ ಜೊತೆ ನನಗಿರುವ ತಕರಾರೊಂದನ್ನೂ ಇಲ್ಲಿ ಪ್ರಸ್ತಾಪಿಸಬೇಕು. ಅದು ಹೆಣ್ಣನ್ನು ಕುರಿತ ಇವರ ದೃಷ್ಟಿಕೋನದ ಬಗ್ಗೆ. ಚಂದ್ರಿಯಿಂದ ಹಿಡಿದು ಗೌರಿಯತನಕ ಇವರ ಸ್ತ್ರೀ ಪಾತ್ರಗಳೆಲ್ಲ ಜೀವಕಾಮದ ಪ್ರತಿಮೆಗಳಾಗಿ ಮಾತ್ರ ಕಾಣಿಸುತ್ತಾರೆ ಎನ್ನುವುದು. ಚಂದ್ರಿಯಾಗಲಿ, ಯಮುನಕ್ಕಳಾಗಲೀ, ಗೌರಿಯಾಗಲೀ ತಮ್ಮ ಉತ್ಕಟಜೀವ ಜೀವನ ಪ್ರೀತಿಯ ಕಾರಣಕ್ಕಾಗಿ ನಮಗೆ ಆಸಕ್ತಿ ಹುಟ್ಟಿಸುತ್ತಾರೆ ಎನ್ನುವುದು ನಿಜ. ಆದರೆ ಈ ಎಲ್ಲಾ ಪಾತ್ರಗಳಲ್ಲೂ ಹೆಣ್ಣುಮಕ್ಕಳು ದೇಹಸರ್ವಸ್ವದ ನೆಲೆಯಲ್ಲಿ ಮಾತ್ರ ಚಿತ್ರಿತರಾಗುತ್ತಾರೆ ಎನ್ನುವ ಅಂಶ ನಮ್ಮಲ್ಲಿ ಅಷ್ಟೇ ನಿರಾಸೆಯನ್ನೂ ವ್ಯಗ್ರತೆಯನ್ನೂ ತರುತ್ತದೆ. ಮಾತ್ರವಲ್ಲ ಈ ಎಲ್ಲ ಸ್ತ್ರೀ ಪಾತ್ರಗಳೂ ಗಂಡಿನಲ್ಲಿ ಒಂದು ಹೊಸ ಅರಿವನ್ನು ಮೂಡಿಸುವ, ದಟ್ಟ ಅನುಭವದಿಂದ ಅವರಲ್ಲಿ ಜೀವನ ಪ್ರೀತಿಯನ್ನು ಚಿಗುರಿಸುವ... ಹೀಗೆ ಸಂಜೀವಿನಿಯರ ಹಾಗೆ ಅವರು ಕಾಣಿಸುತ್ತಾರೆ. ಆದರೆ ಈ ಇಡೀ ಸನ್ನಿವೇಶದಲ್ಲಿ, ಅನುಭವದಲ್ಲಿ ಅವರು ಪಡೆಯುವುದೇನು? ಇದರ ವಿವರಗಳು ಎಲ್ಲೂ ದಾಖಲಾಗುವುದಿಲ್ಲ. ಗಂಡಿನ ಬೌದ್ಧಿಕತೆಗೆ ಇವಳು ಒದಗಿಬರುವಂತೆ, ಅವಳ ಸಂಕಷ್ಟದ ಗಳಿಗೆಗಳಲ್ಲಿ ಅವನು ಒದಗಿಬರುವುದಿಲ್ಲ ಎನ್ನುವುದಕ್ಕಿಂತ ಹೆಚ್ಚಾಗಿ ಹೆಣ್ಣಿನ ಬದುಕು ಮತ್ತು ವ್ಯಕ್ತಿತ್ವದ ಆ ಆಯಾಮವೇ ಇವರಿಗೆ ಮುಖ್ಯವಾಗುವುದಿಲ್ಲ ಎನ್ನುವ ಅಂಶ ನಮ್ಮಲ್ಲಿ ತೀವ್ರ ಕಸಿವಿಸಿಯನ್ನು ಹುಟ್ಟಿಸುತ್ತದೆ.

ಅನಂತಮೂರ್ತಿಯವರ ಬರವಣಿಗೆಯ ಆತ್ಯಂತಿಕ ಮಹತ್ವವಿರುವುದು ನನ್ನ ಮಟ್ಟಿಗೆ ಆಧುನಿಕತೆಯನ್ನು ಕುರಿತ ಅವರ ಅನುಸಂಧಾನದ ಹಲವು ಮಾದರಿಗಳಲ್ಲಿ ಮತ್ತು ಪ್ರಯೋಗಗಳಲ್ಲಿ. ಈ ದೃಷ್ಟಿಯಿಂದ ಅವರು ಅಪ್ಪಟ ಭಾರತೀಯ ಲೇಖಕರು. ಕನ್ನಡದ ಸನ್ನಿವೇಶದಿಂದ ಪ್ರವೇಶಿಸುತ್ತಲೇ ಅದಕ್ಕೊಂದು ಭಾರತೀಯ ಸಾಧಾರಣೀಕರಣದ ಆಯಾಮವನ್ನು ಇವರ ಬರವಣಿಗೆ ಮತ್ತು ಚಿಂತನೆಗಳು ಕೊಡುತ್ತವೆ. ತಮ್ಮ ಅನನ್ಯತೆಯನ್ನು ಉಳಿಸಿಕೊಂಡೂ ಭಾರತೀಯವಾಗಬೇಕಾದ ಅಗತ್ಯವನ್ನು ಮತ್ತು ಸಾಧ್ಯತೆಯನ್ನು ಇವರು ಪ್ರತಿಪಾದಿಸುತ್ತಾರೆ. ಹೀಗೆ ಭಾರತೀಯ ಅಸ್ಮಿತೆಯೊಂದನ್ನು ಕಟ್ಟಿಕೊಳ್ಳುವ ಕ್ರಮವನ್ನು ಇವರು ಆಧುನಿಕತೆಯನ್ನು ಎದುರಿಸುವ ದಾರಿಯಾಗಿಯೂ ಶೋಧಿಸುತ್ತಾರೆ ಎನ್ನುವುದು ಮುಖ್ಯ. ಪ್ರಾದೇಶಿಕ ಅಥವಾ ಸ್ಥಳೀಯ ನೆಲೆಗಳನ್ನು ಮುಖ್ಯವಾಗಿ ನಮ್ಮ ಶಿಕ್ಷಣ ಮಾಧ್ಯಮದ ಮೂಲಕ ಉಳಿಸಿಕೊಳ್ಳಬಹುದಾದ ದಾರಿ ಇವರಿಗೆ ತೀರ ಮುಖ್ಯ. ಯಾಕೆಂದರೆ ಆಧುನಿಕತೆಯ ವಿಕಾರಗಳನ್ನು, ಅದು ಒಡ್ಡಿರುವ ದುರ್ಭರ ಸವಾಲುಗಳನ್ನು ಎದುರಿಸಲು ಕಾಮನ್ ಶಾಲೆಗಳು ಒಂದು ಪರಿಣಾಮಕಾರಿ ಪರಿಹಾರ ಎಂದು ಅವರು ಎಂದಿನಿಂದಲೂ ಪ್ರತಿಪಾದಿಸುತ್ತಾ ಬಂದಿದ್ದಾರೆ. ಜಾತಿಪದ್ಧತಿಗಿಂತ ವಿನಾಶಕಾರಿಯೂ ಅಮಾನವೀಯವೂ ಆದ ಆರ್ಥಿಕ ಭೇದವನ್ನು, ಶ್ರೇಣೀಕರಣವನ್ನು ಕಾಮನ್ ಶಾಲೆಗಳ ಅನುಷ್ಠಾನದಿಂದ ಎದುರಿಸಲು ಸಾಧ್ಯವಾಗುತ್ತದೆ ಎನ್ನುವ ಇವರ ಪ್ರತಿಪಾದನೆಗೆ ಇನ್ನೊಂದು ಆಯಾಮವೂ ಇದೆ. ಸ್ಥಳೀಯ ಭಾಷೆ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಾಪಾಡಿಕೊಳ್ಳುವುದೂ ಇದರಿಂದ ಸಾಧ್ಯವಾಗುತ್ತದೆ ಎಂದು ಅನಂತಮೂರ್ತಿಯವರು ನಂಬಿದ್ದಾರೆ.

ತಾವು ನಂಬಿ ಆರಂಭಿಸಿದ ತಾತ್ವಿಕ ನಿಲುವುಗಳ ಬಗ್ಗೆ ಸದಾ ತೆರೆದ ಮನಸ್ಸಿನ ಮುಕ್ತತೆಯನ್ನು ಉಳಿಸಿಕೊಳ್ಳುತ್ತಲೇ ಹೊಸದಕ್ಕೆ ಹಾತೊರೆಯುವ ಅನಂತಮೂರ್ತಿಯವರಲ್ಲಿ ಎಲ್ಲರೂ ಒಪ್ಪಿ ಆರಾಧಿಸುವ ಅಪೂರ್ವ ಗುಣವೊಂದಿದೆ. ಅದು ಅವರ ಕಾವ್ಯಪ್ರೀತಿ. ಅಪ್ಪಟ ಕಾವ್ಯವನ್ನು ಕುರಿತಂತೆ ಅವರದು ದಣಿವರಿಯದ ನಿತ್ಯನೂತನ ಉತ್ಸಾಹ. ಅದು ಅಡಿಗರ ಕಾವ್ಯವಿರಬಹುದು, ಎಲಿಯೆಟ್‌ನ ಕಾವ್ಯವಿರಬಹುದು, ಷೇಕ್ಸ್‌ಪಿಯರ್, ಯೇಟ್ಸ್, ವರ್ಡ್ಸ್‌ವರ್ತ್, ಕುಮಾರವ್ಯಾಸ ಇತ್ಯಾದಿ ಸ್ಥಾಪಿತ ಕವಿಗಳ ಕಾವ್ಯದ ಬಗ್ಗೆ ಮಾತ್ರವಲ್ಲ, ಇದೀಗ ತಾನೆ ಬರೆಯಲು ಆರಂಭಿಸಿರುವ ಕವಿಗಳ ಮಟ್ಟಿಗೂ ಅದೇ ಉತ್ಸಾಹ ಮತ್ತು ಪ್ರೀತಿ. ಕಾವ್ಯವನ್ನು ಇವರಷ್ಟು ಸೂಕ್ಷ್ಮವಾಗಿ ಹಿಡಿಯಬಲ್ಲವರು, ಅಷ್ಟೇ ಖಚಿತವಾಗಿ ಉತ್ಕಟವಾಗಿ ಅದರ ಬಗ್ಗೆ ಮಾತನಾಡಬಲ್ಲವರು ಬಲು ಅಪರೂಪ.





● ಡಾ.ಎಂ.ಎಸ್.ಆಶಾದೇವಿ

ನಿಯಮಗಳನ್ನು ಗಾಳಿಗೆ ತೂರಿರುವ ಸರ್ದಾರ್ ಪಟೇಲ್ ಟ್ರಸ್ಟ್

ಸರ್ದಾರ್ ಸರೋವರ ಅಣೆಕಟ್ಟು ಪ್ರದೇಶದಲ್ಲಿ ಸರ್ದಾರ್ ಪಟೇಲರ ಬೃಹತ್ತಾದ ಉಕ್ಕಿನ ಪ್ರತಿಮೆಯನ್ನು ಸ್ಥಾಪಿಸಲು ಹೊರಟಿರುವ ಮೋದಿ ಸರ್ಕಾರ ಯೋಜನೆಯ ಉಸ್ತುವಾರಿಗಾಗಿ ಪ್ರತ್ಯೇಕ ಟ್ರಸ್ಟ್ ಒಂದನ್ನು ಹುಟ್ಟುಹಾಕಿ ಅದಕ್ಕೆ ಸರ್ದಾರ್ ವಲ್ಲಭಭಾಯಿ ಪಟೇಲ್ ಏಕತಾ ಟ್ರಸ್ಟ್ ಎಂಬ ಹೆಸರಿಟ್ಟಿದೆ. ಈ ಟ್ರಸ್ಟ್ ಈಗ ಎಲ್ಲಾ ನೀತಿನಿಯಮಗಳನ್ನು ಗಾಳಿಗೆ ತೂರಿ ಅಗತ್ಯ ಪರವಾನಗಿಗಳಿಲ್ಲದೆ ಕೆಲಸ ಪ್ರಾರಂಭ ಮಾಡಿದೆ! ಅಣೆಕಟ್ಟಿನ ಕೆಳಭಾಗದಲ್ಲಿ ಪ್ರವಾಸೋದ್ಯಮಕ್ಕಾಗಿ ದೊಡ್ಡ ಕೊಳವೊಂದನ್ನು ನಿರ್ಮಿಸುವ ಯೋಜನೆಯ ಭಾಗವಾಗಿ ಸುಮಾರು 12 ಕಿಮೀ ದೂರದಲ್ಲಿ ನದಿಗಡ್ಡವಾಗಿ ಕಟ್ಟಲಾಗುತ್ತಿರುವ ಗರುಡೇಶ್ವರ್ ಒಡ್ಡಿನ ಮೊದಲ ಹಂತದ ಕಾಮಗಾರಿ ಈಗಾಗಲೆ ಆರಂಭವಾಗಿರುವ ವಿಚಾರ ಬಯಲಾಗಿದೆ. ಮೋದಿಯ ಸರ್ವಾಧಿಕಾರಿ ಆಡಳಿತದಲ್ಲಿ ಆದಿವಾಸಿಗಳು, ಬಡವರು, ಪರಿಸರ, ನೆಲದ ಕಾನೂನು, ಸಂವಿಧಾನ ಮುಂತಾದುವನ್ನು ಕೇಳುವವರಿಲ್ಲ ಎಂಬ ವಾಸ್ತವಾಂಶ ಮತ್ತೊಮ್ಮೆ ಸಾಬೀತಾಗುತ್ತಿದೆ.


ಪ್ರಜಾತಾಂತ್ರಿಕ ವಿಧಾನಗಳಿಗೆ ತಿಲಾಂಜಲಿ ನೀಡಿರುವ ಟ್ರಸ್ಟ್ ಈ ಯೋಜನೆಯಿಂದಾಗಿ ಪರಿಸರದ ಮೇಲೆ ಮತ್ತು ಸ್ಥಳೀಯ ಸಮಾಜದ ಮೇಲಾಗುವ ಪರಿಣಾಮಗಳ ಬಗ್ಗೆ ಯಾವುದೇ ಅಧ್ಯಯನ ಕೈಗೊಂಡಿಲ್ಲ, ಪ್ರತಿಮೆಯ ಸ್ಥಳದಿಂದ ಕೇವಲ 3.2 ಕಿಮೀ ದೂರದಲ್ಲಿರುವ ಶೂಲಪಾಣೇಶ್ವರ್ ವನ್ಯಜೀವಿಧಾಮದ ಮೇಲೆ ಸರ್ಕಾರದ ಈ ಉದ್ದೇಶಿತ ಪ್ರವಾಸೋದ್ಯಮ ಬೀರಬಹುದಾದ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿಲ್ಲ, ಯೋಜನೆಯ ಪ್ರಾರಂಭಕ್ಕೆ ಮುನ್ನ ಕಡ್ಡಾಯವಾಗಿರುವ ಪರಿಸರ ಖಾತೆಯ ಅನುಮತಿಯನ್ನು ಪಡೆಯಲಾಗಿಲ್ಲ, ನರ್ಮದಾ ನಿಯಂತ್ರಣ ಪ್ರಾಧಿಕಾರದ ಪರವಾನಗಿಯನ್ನು ಪಡೆಯಲಾಗಿಲ್ಲ, ಜನಾಭಿಪ್ರಾಯವನ್ನು ತಿಳಿಯುವ ಪ್ರಯತ್ನವೂ ಆಗಿಲ್ಲ. ಇವೆಲ್ಲವೂ 1986ರ ಪರಿಸರ ಸಂರಕ್ಷಣಾ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿದೆ. ಜೊತೆಗೆ ಈಗಾಗಲೆ ಇಂತಹ ದೊಡ್ಡ ಯೋಜನೆಗಳ ಬಗ್ಗೆ





ನ್ಯಾಯಾಲಯಗಳು ನೀಡಿರುವ ತೀರ್ಪುಗಳನ್ನೂ ಪೂರ್ತಿ ಕಡೆಗಣಿಸಲಾಗಿದೆ. ಪರಿಸರ ಹೋರಾಟಗಾರರು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಪತ್ರ ಬರೆದು ಈ ವಿಚಾರಗಳನ್ನು ಅವುಗಳ ಗಮನಕ್ಕೆ ತಂದಿದ್ದಾರೆ. ಆದರೆ ಕೆಲವು ಪ್ರಾಧಿಕಾರಗಳು ಉತ್ತರ ನೀಡುವ ಗೋಜಿಗೆ ಕೂಡಾ ಹೋಗಿಲ್ಲ. ಅತ್ತ ಮುಖ್ಯಮಂತ್ರಿ ಕಚೇರಿ ಒಂದು ಅಸ್ಪಷ್ಟ ಉತ್ತರ ಕೊಟ್ಟು ಕೈತೊಳೆದುಕೊಂಡಿದೆ.

ಮೊನ್ನೆ ಡಿಸೆಂಬರ್ 15ರಂದು ಪಟೇಲ್ ಮೂರ್ತಿಯ ಹೆಸರಲ್ಲಿ ದೇಶಾದ್ಯಂತ ಓಟದ ನಾಟಕವೊಂದನ್ನು ನಡೆಸಲಾಯಿತಷ್ಟೇ. ಅದರಲ್ಲಿ ಶಾಲಾಕಾಲೇಜುಗಳ ಪ್ರಾಂಶುಪಾಲರು, ಶಿಕ್ಷಕರು, ವಿದ್ಯಾರ್ಥಿಗಳು ಮುಂತಾದವರೂ ಪಾಲ್ಗೊಂಡಿದ್ದರು. ಆದರೆ ದುರದೃಷ್ಟದ ಸಂಗತಿ ಏನೆಂದರೆ ಯಾರೊಬ್ಬನಿಗೂ ಪಟೇಲರ ಹೆಸರಿನಲ್ಲಿ ನಡೆಸಲಾಗುತ್ತಿರುವ ಈ ಕೀಳು ರಾಜಕಾರಣದ, ಈ ಯೋಜನೆಯ ಹಸಿರು ಸಂಬಂಧಿ ಮತ್ತು ಸ್ಥಳೀಯ ಆದಿವಾಸಿ ರೈತರ ಸಮಸ್ಯೆಗಳ ಅರಿವಿಲ್ಲದಿರುವುದು. ಸ್ವಲ್ಪವಾದರೂ ಅರಿಯುವ ಪ್ರಯತ್ನ ಮಾಡಿದ್ದಿದ್ದರೆ ಖಂಡಿತಾ ಅವರಾರೂ ಇಂತಹ ರಾಜಕೀಯ ಪ್ರೇರಿತ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಇದನ್ನು ಸುಶಿಕ್ಷಿತರೆನಿಸಿಕೊಳ್ಳುವವರೇ ಮೋದಿ ಕೂಟದ ಪ್ರಾಯೋಜಿತ ಅಪಪ್ರಚಾರಗಳನ್ನು ನಂಬಿ ಗುಜರಾತ್‌ನಲ್ಲಿ ಎಲ್ಲವೂ ಸರಿಯಾಗಿದೆ, ಎಲ್ಲರೂ ಸುಖವಾಗಿದ್ದಾರೆ ಎಂಬ ಭ್ರಾಂತಿಯಲ್ಲಿ ಮುಳುಗಿರುವುದು ನಿಜಕ್ಕೂ ಖೇದಕರ.



ಸಂದರ್ಶನ

ಅಭಿವೃದ್ಧಿಯ ಜಾಗದಲ್ಲಿ ಸರ್ವೋದಯ ಅಂತ ಹಾಕಿ ನೋಡಿ

–ಅನಂತಮೂರ್ತಿ

ಸಂದರ್ಶಕ: ವಾಸು

ಈಗಂತೂ ಬರೀ ಕಳೆದುಕೊಳ್ತಾನೇ ಇದ್ದೇವೆ. ನೋಡಿ ಒಂದು ಯೂನಿವರ್ಸಿಟಿ ಮಾಡಕ್ಕಾಗಲ್ಲ. ಯಾಕಂದ್ರೆ ಕಾರ್ಪೋರೇಟ್‌ಗಳ ಕೈಗೇ ಎಲ್ಲವನ್ನೂ ಕೊಡ್ತಾ ಇದ್ದಾರೆ. ಅವ್ರಿಗೆ ಸಾಹಿತ್ಯ ಬಿಡಿ, ಮ್ಯಾಥಮೆಟಿಕ್ಸ್ ಸಹಾ ಮುಖ್ಯವಾಗಲ್ಲ. ಬಿಸಿನೆಸ್ ಬೇಕಾಗುತ್ತೆ. ಅಂದ್ರೆ ಇವತ್ತಿನ ಯುಗ ಹೀಗೆ ಆಗಿಬಿಟ್ಟಿದೆ. ವಿವೇಕಾನಂದರು ಒಂದು ಮಾತು ಹೇಳಿದ್ರು. ಮುಂದಿನದು ಶೂದ್ರರ ಯುಗ ಅಂತ. ಮಾರ್ಕ್ಸ್ ಸಹಾ ಅದನ್ನು ಹೇಳಿದ್ದ. ಶೂದ್ರರ ಯುಗ ಬರುತ್ತೆ ಅಂತ. ಪ್ರೊಲಿಟರಿಯೇಟ್....... ಅದು ಬರಲಿಲ್ಲ ಅನ್ನೋದು ಬೇರೆ ಮಾತು. ಬಂದಿದ್ದು ವೈಶ್ಯ ಯುಗ.

ಸಾರ್, ಒಂದು ವಿಚಾರವನ್ನು ನೀವು ನಿರಂತರವಾಗಿ ಮಾತಾಡುತ್ತಲೇ ಬಂದಿದ್ದೀರಿ. ಅದು ಕಾಮನ್ ಸ್ಕೂಲ್, ಸಮಾನ ಶಾಲೆ ವಿಚಾರ. ಯೂರೋಪ್, ಅಮೆರಿಕಾಗಳಲ್ಲಿ ಯಾವುದು ಅತ್ಯಂತ ಸಹಜ ಅನ್ನೋ ರೀತಿ ಜಾರಿಗೆ ಬಂತೋ, ಆ ರೀತಿಯ ಸಮಾನ ಶಾಲೆ ನಮ್ಮಲ್ಲಿ ದಿನೇ ದಿನೇ ದೂರವಾಗ್ತಿದೆ. ದೇವನೂರು ಮಹಾದೇವ ಅವರು ಈಗ ಸಾಧ್ಯವಿರುವ ಕಡೆಯಲ್ಲೆಲ್ಲಾ ಪ್ರಸ್ತಾಪಿಸುತ್ತಿದ್ದಾರೆ. ಆದರೆ ನಮ್ಮಲ್ಲಿ ಈ ವಿಚಾರದ ಚರ್ಚೆ ಬಹಳ ಕಡಿಮೆ ಇದೆ..........

ನಮ್ಮ ಸಮಾಜದಲ್ಲಿನ ಅಂತರಗಳನ್ನು ಏನಾದರೂ ಮಾಡಿ ಉಳಿಸಿಕೊಳ್ಳೋದಕ್ಕೆ ಹಲವು ಉಪಾಯಗಳನ್ನು ಈ ದೇಶ ಮಾಡ್ತಾ ಬಂದಿದೆ. ಮೊದಲನೇದು ಭಾಷೆಯಲ್ಲಿಯೇ ಅಂತರಗಳನ್ನು ಇಟ್ಟುಕೊಳ್ಳಲಾಗಿದೆ. ಶ, ಷಕಾರಗಳನ್ನು ಮಾಡಿಬಿಟ್ರು, ಯಾರಿಗೆ ಶ ಬರಲ್ಲ, ಸ ಬರುತ್ತೆ, ಷ ಬರಲ್ಲ ಅವರು ಯಾವ್ಯಾವ ಜಾತಿ ಇರಬಹುದು ಅನ್ನೋದನ್ನು ಯಾವ ಪರೀಕ್ಷೆಯೂ ಕೊಡದೇ ಗುರುತಿಸುವಂಥ ವ್ಯವಸ್ಥೆ ಅದು.

ಇದನ್ನು ಹೋಗಿಸಲಿಕ್ಕೂ ಕಾಮನ್ ಸ್ಕೂಲೇ ಬೇಕು. ಯಾಕಂದ್ರೆ ಒಬ್ಬ ಶೂದ್ರ ಹುಡುಗ, ಒಬ್ಬ ಬ್ರಾಹ್ಮಣ ಹುಡುಗ, ಒಬ್ಬ ದಲಿತ ಹುಡುಗ, ಒಬ್ಬ ಮುಸ್ಲಿಂ ಹುಡುಗ ಶಾಲೇಲಿ ಒಟ್ಟಿಗೆ ಕೂತು ಕಲಿತ್ರೆ, ನಾವು ಸಮಾಜದಲ್ಲಿ ಯಾವುದನ್ನು ಮಾಡಕ್ಕೆ ಆಗಲ್ವೋ ಅದನ್ನು ಮಾಡಕ್ಕಾಗತ್ತೆ.

ನಾನು, ಆರ್ತಾಡಾಕ್ಸ್ ಬ್ರಾಹ್ಮಣರ ಮನೇಲಿ ಹುಟ್ಟಿದವನು, ಬಹಳ ಮಡಿ ಮಾಡ್ತಿದ್ದೆ. ಬ್ರಾಹ್ಮಣರನ್ನು ಬಿಟ್ಟು ಬೇರೆ ಯಾರ ಜೊತೆನೂ ಊಟ ಮಾಡೋದು ಸಾಧ್ಯವಿರಲಿಲ್ಲ, ಆದರೆ ಅಂಗಿ ಹಾಕಿಕೊಂಡು ಕೂತ್ರೆ, ಮಡಿ ಮೈಲಿಗೆಗಳು ಹೋಗಿ ಬಿಡ್ತಿದ್ವು. ನಾನು ಅಂಗವಸ್ತ್ರದಿಂದ ಲೇಖಕನಾದವನಲ್ಲ, ಅಂಗಿಯಿಂದ ಆದವನು. ಸ್ಕೂಲ್‌ಗೆ ಅಂಗಿ ಹಾಕಿಕೊಂಡು ಹೋಗ್ತಿದ್ದೆ.

ಅಲ್ಲಿಗೆ ಹೋದ್ರೆ ಒಬ್ಬ ನನಗೆ ಏಡಿ ಹಿಡಿಯೋದು ಹೇಗೆ ಅಂತ ಹೇಳ್ತಿದ್ದ. ಅದು ಒಂದು ಬೇರೆಯದೇ ಜಗತ್ತು, ಬ್ರಾಹ್ಮಣ ಹುಡುಗ್ರಿಗೆ ಗೊತ್ತಿಲ್ದೇನೇ ಇರೋ ಜಗತ್ತು. ಹೀಗಾಗಿ ಜಾತಿ ಅಂತರಗಳನ್ನು ಮಾನಸಿಕವಾಗಿ ಮೀರಲಿಕ್ಕೆ ಸಾಧ್ಯವಾಯ್ತು. ಮಾನಸಿಕವಾಗಿ ಮೀರಿದ್ದನ್ನು ನಂತರ ದೈಹಿಕವಾಗಿಯೂ ಮೀರಿದೆ. ಬೇರೆ ಮದ್ವೆ ಆದೆ. ಬೇರೆಯವರ ಅನುಭವಗಳನ್ನು ಒಳಗೊಂಡು ಬರ್ದೆ............ ಆದ್ರೆ ಅದಕ್ಕೆ ತಯಾರಿಯಾದದ್ದಲ್ಲಿ ಸ್ಕೂಲ್‌ನಲ್ಲಿ. ಈಗಿನ ಮಕ್ಕಳಿಗೆ ಅಂತಹದ್ದೊಂದು ಅನುಭವ ಆಗಲಿಕ್ಕೆ ಸಾಧ್ಯವೇ ಇಲ್ಲ. ಅವೆಲ್ಲಾ ಅವರಿಗೆ ಗೊತ್ತಾಗಬೇಕೂಂದ್ರೆ, ಸೋಷಿಯಾಲಜಿ ಪುಸ್ತಕ ಓದಿ ತಿಳಿದ್ಕೋಬೇಕು. ನಮಗೆ ಹಾಗಿರಲಿಲ್ಲ.

ನಾನು ಬ್ರಾಹ್ಮಣನಾಗಿ ಹುಟ್ಟಿದ್ರೂ, ಬ್ರಾಹ್ಮಣನಾಗಿರೋದು ನನಗೆ ಒಂದು ಶಾಪ ಆಗಲಿಲ್ಲ ಯಾಕಂದ್ರೆ, ಎಲ್ಲರ ಜೊತೆ ಬೆರೀಬಲ್ಲಂಥ ಒಂದು ಕಾಮನ್ ಸ್ಕೂಲ್‌ನಲ್ಲಿ ನಾನು ಓದಿದೆ. ನಾನು ಕೃಷ್ಣ ಕುಚೇಲನ ಕಥೆನಾ ಯಾವಾಗ್ಲೂ ಹೇಳ್ತಿರ್ತೀನಿ..........

ಬ್ರಾಹ್ಮಣರಾಗಿರುವ ಎಲ್ಲಾ ಜಾತಿ ಜನರು. ಬ್ರಾಹ್ಮಣರಿಗಿಂತ ಹೆಚ್ಚಿನ ಬ್ರಾಹ್ಮಣಿಕೆ ಮಾಡ್ತಾರೆ. ಇದನ್ನು ಒಂದು ಜಾತಿ ಅಂತ ಮಾತ್ರ ನೋಡಬಾರದು. ಇದೊಂದು ಮನಸ್ಥಿತಿ. ಆ ಮನಸ್ಥಿತಿ ಇರುವವರಲ್ಲಿ ಎಲ್ಲಾ ಜಾತಿ ಜನರೂ ಇದ್ದಾರೆ.

ಕಳೆದ 30 ವರ್ಷದಿಂದ ನಾನು ಈ ಎರಡು ವಿಚಾರಗಳ ಕುರಿತು ಮಾತಾಡ್ತಾ ಬಂದಿದ್ದೇನೆ. ಒಂದು ಗಣಿಗಾರಿಕೆ ವಿರುದ್ಧ, ಇನ್ನೊಂದು ಕಾಮನ್‌ಸ್ಕೂಲ್. ನೀವೇನೇ ಹೇಳಿ ಸರ್ಕಾರದ ಅಧೀನದಲ್ಲಿ ಕಲಿಕೆ ಇರಬೇಕು. ಸರ್ಕಾರಕ್ಕೂ ನಾನು ಕೇಳೋದು ಇಷ್ಟೆ, ಹೆಲ್ತ್ ಮತ್ತು ಎಜುಕೇಷನ್ ಇವೆರಡನ್ನು ಮಾತ್ರ ಸರ್ಕಾರವೇ ನಡೆಸಬೇಕು. ಇವನ್ನು ಖಾಸಗಿಯವರಿಗೆ ಕೊಟ್ರೆ ಬಡವರಿಗೆ ಬಹಳ ಸಮಸ್ಯೆ ಆಗ್ತದೆ. ಸರ್ಕಾರ ಹೋಟೆಲ್ ನಡೆಸಬೇಕಿಲ್ಲ, ಅದನ್ನು ಬೇಕಾದ್ರೆ ಖಾಸಗಿಯವರಿಗೆ ಬಿಡಲಿ.

ಇದರ ಜೊತೆಗೇ ಶಿಕ್ಷಣದಲ್ಲಿನ ಭಾಷೆಯ ಕುರಿತೂ ಮಾತಾಡ್ತಾ ಬಂದಿದ್ದೀರಿ....

ಹೌದು, ನಮ್ಮಲ್ಲಿ ಭಾಷೆಯಿಂದ, ಅವರು ಉಪಯೋಗಿಸುವ ವ್ಯಾಕರಣದಿಂದ ಜನರನ್ನು ಆಳೆಯೋದು ನಡೆಯಿತು. ಆದರೆ ಯಾರು ಈ ರೀತಿಯ ಭಾಷಾ ಶುದ್ಧತೆಯಿಂದ ದೂರ ಇದ್ದರೋ ಅವರೇ ಬಹಳ ಒಳ್ಳೆಯ ಕವಿಗಳೂ ಆದರು. ಬೇಂದ್ರೆಯಂಥವರು ಅಂಥದೇ ಲೋಕದಿಂದ ಹುಟ್ಟಿ ಬಂದವರು. ಮಾದೇವರಂಥವರೂ ಅಂಥದೇ ಲೋಕದಿಂದ ಹುಟ್ಟಿ ಬಂದವರು. ಹಾಗಾಗಿ ಆ ಅಂತರವನ್ನು ಉಳಿಸಿಕೊಳ್ತಾ, ಅಂತರದ ಉಪಾಯಗಳನ್ನ ಮಾಡ್ತಾ ಬಂದವರಿಗೆ ಒಂದು ರೀತಿ ಡಿಫೀಟ್ ಆಯ್ತು. ಇದನ್ನು ಸಾಹಿತ್ಯ ಯಾವಾಗ್ಲೂ ಮಾಡ್ತಾ ಬಂದಿದೆ.

ಆಮೇಲಿಂದ ಇಂಗ್ಲಿಷ್ ಭಾಷೆ ಬಂತು. ಅದಕ್ಕಿಂತ ಮೊದ್ಲು ಸಂಸ್ಕೃತ ಬಂದಿತ್ತು, ಸಂಸ್ಕೃತವನ್ನೂ ಶೂದ್ರಾದಿ ಜನಾಂಗಗಳು ತಮಗೆ ಎಷ್ಟು ಬೇಕೋ ಅಷ್ಟು ಕಲಿತರು. ನನ್ನದೇ ಒಂದು ಅನುಭವ ಹೇಳ್ತೀನಿ. ನಮ್ಮೂರಲ್ಲಿ ಅಡಿಕೆ ಸುಲಿಯಕ್ಕೆ ಕೂಲಿ ಆಳುಗಳು ಬರ್ತಾರೆ. ಹೆಣ್ಣು ಮಕ್ಕಳೂ ಬಂದಿರ್ತಾರೆ. ಎಲ್ಲಾ ಜಾತಿಯವ್ರೂ ಇರ್ತಾರೆ, ರಾತ್ರಿಯೆಲ್ಲಾ ಅಡಿಕೆ ಸುಲಿಯುವಾಗ ಅವರು ಯಾವುದಾದರೂ ಒಂದು ಪ್ರಸಂಗವನ್ನು ತೆಗೆದುಕೊಂಡು ಹೇಳಕ್ಕೆ ಶುರು ಮಾಡ್ತಾರೆ. ಒಬ್ರು ಅರ್ಜುನ ಆಗ್ತಾರೆ. ಇನ್ನೊಬ್ರು ಕರ್ಣ ಆಗ್ತಾರೆ. ಅವಾಗ ಅವ್ರು ಬಳಸುವ ಭಾಷೆ ನೋಡಿದ್ರೆ ಆಶ್ಚರ್ಯವಾಗುತ್ತೆ. ಯಾವ ಭಾಷೆ ಅವ್ರಿಗೆ ಅತೀತ ಅಂತ ಭಾವಿಸ್ತೇವೋ, ಅದನ್ನು ಅವ್ರು ಯಕ್ಷಗಾನದ ಮುಖಾಂತರ ತಮ್ಮದನ್ನಾಗಿ ಮಾಡಿಕೊಳ್ತಾರೆ.

ಇದು ಜನರು ಟ್ರಯಂಫ್ ಮಾಡುವ ಕ್ರಮ. ಹಾಗಾಗಿ ಇದನ್ನು ನಾವು ದುಃಖದಿಂದ ಮಾತಾಡಬಾರದು.

ಆಮೇಲೆ ಇಂಗ್ಲಿಷ್ ಸಹಾ ಬಂತು. ಇಂಗ್ಲಿಷನ್ನೂ ಸಹ ಜನ ಬಗ್ಗಿಸಿದ್ದಾರೆ. ನಮ್ಮೂರಲ್ಲಿ ಒಬ್ಬಳು ದಲಿತ ಹೆಂಗ್ಸು, ನನ್ ಮಗ ಚಾಲೆಂಜ್ ಮಾಡದೇ ಬಿಡಲ್ಲ ಅಂದಳು. ಚಾಲೆಂಜ್ ಅನ್ನೋ ಶಬ್ದಾನಾ.... ಅಷ್ಟಷ್ಟಕ್ಕೇ ಕಲಿತಿರ್ತಾರೆ ನೋಡಿ ಅದನ್ನ. ದೊಡ್ಡ ದೊಡ್ಡ ವಿದ್ಯೆ ಬಂದಾಗ ಇಂಗ್ಲಿಷ್ ಭಾಷೆ ಗೊತ್ತಿರದೇ ಇರೋದು ದೊಡ್ಡ ಸಮಸ್ಯೆ ಆಗಿದೆ. ಹಾಗಾಗಿ ಇಂಗ್ಲಿಷ್ ಭಾಷೆಯನ್ನು ಎಲ್ಲರಿಗೂ ಸಮಾನ ಶಾಲೆಗಳಲ್ಲಿ ಕಲಿಸಬೇಕು. ಕನ್ನಡದ ಜೊತೆ ಕಲಿಸಬೇಕು. ಓದಕ್ಕೆ ಅಲ್ಲ, ಮೊದ್ಲು ಮಾತಾಡೋಕೆ ಕಲಿಸಬೇಕು. ಇದು ಮಾತಾಡೋಕೆ ಸುಲಭವಾದ ಭಾಷೆ ಅಂತ ಕಲಿಸಬೇಕು. ಯಾಕಂದ್ರೆ ಓದಕ್ಕೆ ಹಚ್ಚಿದರೆ ಈಗ್‌ಘ್ಲಾಸ್ ಆಗುತ್ತೆ, ಸಿಯುಟಿ ಕಟ್ ಆಗುತ್ತೆ ಪಿಯುಟಿ ಯಾಕೆ ಪುಟ್ ಆಗಲ್ಲ ಅಂತ. ಕನ್ನಡ ಎಷ್ಟು ವೈಜ್ಞಾನಿಕವ್ವೋ ಬರೆಯೋಕೆ ಇಂಗ್ಲಿಷ್ ಅಷ್ಟು ಅಲ್ಲ, ಅದನ್ನು ಅಕ್ಷರಗಳ ಮೂಲಕ ಗ್ರಹಿಸಲಿಕ್ಕಾಗಲ್ಲ, ಆಗ ಕನ್ನಡದ ಜೊತೆ ಅದನ್ನು ಕಲೀತಾರೆ. ಕನ್ನಡವೇ ಮುಂದಾಗಿರಬೇಕು. ಕನ್ನಡದ ಜೊತೆ ಪರ್ಯಾಯವಾಗಿ ಇನ್ನೊಂದು ಇದ್ದರೂ ಅದರಿಂದ ಹಿಮ್ಮೆಟ್ಟುವುದಿಲ್ಲ, ನಿಜವಾದ ಕಲಿಕೆ ಸಾಧ್ಯವಾಗುವುದು ಕನ್ನಡದಲ್ಲೇ. ಗ್ರಹಿಕೆಗೆ ಇಂಗ್ಲಿಷ್ ಬೇಕು. ಇಂಗ್ಲಿಷ್ ಜೊತೆ ಇನ್ನೂ ಅನೇಕ ಭಾಷೆಗಳೂ ಬೇಕಾಗಬಹುದು.

ಈ ಭಾಷಾ ಶುದ್ಧತೆ ವಿಚಾರ ಬಂದಾಗ ಶಂಕರ್‌ಬಟ್‌ರ ಆಲೋಚನೆಗಳನ್ನು ನೀವು ಗಮನಿಸಿಯೇ ಇರ್ತೀರಿ. ಅವರಿಗೆ ಕರ್ನಾಟಕ ಸರ್ಕಾರ ಪಂಪ ಪ್ರಶಸ್ತಿಯನ್ನು ಘೋಷಿಸಿರುವುದು ಇವತ್ತಿನ ಪೇಪರ್‌ನಲ್ಲಿ ಬಂದಿದೆ.

ಅವರನ್ನು ನಾನು ಬಹಳ ಗೌರವಿಸ್ತೇನೆ. ಆದ್ರೆ ನನಗೆ ಶ, ಷ ಬಿಡಕ್ಕಾಗಲ್ಲ, ಕಲಿತುಬಿಟ್ಟಿದ್ದೇನೆ. ಅವರು ಭಾಷೆ ವಿಚಾರದಲ್ಲಿ ಭಾಳ ದೊಡ್ಡ ವಿಜ್ಞಾನಿ. ಇಷ್ಟು ವರ್ಷ ಬೇಕಾಯ್ತೇ ಅವರಿಗೆ ಪಂಪ ಪ್ರಶಸ್ತಿ ಕೊಡೋಕೆ?

ಹೊಸ ಸರ್ಕಾರದ ಮುಂದೆ ಇಂತಹ ಕೆಲವು ಆಲೋಚನೆಗಳನ್ನು ಮುಂದಿಟ್ಟು ಕೆಲಸ ಮಾಡಿಸಬಹುದು ಅನ್ಸುತ್ತಾ?

ಸರ್ಕಾರದ ಆದ್ಯತೆಗಳ ಬಗ್ಗೆಯೇ ಕ್ಲಾರಿಟಿ ಇಲ್ಲ, ಸಿದ್ದರಾಮಯ್ಯನವರು ಯೋಚನೆ ಮಾಡೋಕೆ ಮುಂದಾಗಬೇಕು. ಅವರು ಸರ್ಕಾರದ ನಿರ್ವಹಣೆಯಲ್ಲೇ ಕಾಲ ಕಳೆಯುತ್ತಿದ್ದಾರೆ. ಅವರ ಬಗ್ಗೆ ತುಂಬಾ ಸಿಂಪಥಿ ಇದೆ. ಪ್ರೀತಿ ಮತ್ತು ವಿಶ್ವಾಸವೂ ಇದೆ. ಹಾಗಾಗಿಯೇ ತುಂಬಾ ಸಿಟ್ಟೂ ಬರುತ್ತೆ, ಮಾಡಬೇಕಾದ್ದನ್ನು ಮಾಡದೇ ಇದ್ದಾಗ, ಮಾಡೋಕೆ ಟೈಮ್ ಇಲ್ಲದಾಗ, ಸುಸ್ತಾದಾಗ, ಅವರೆಲ್ಲೋ ತಮ್ಮ ಟೈಮನ್ನು ಸರಿಯಾಗಿ ಕಳೀತಿಲ್ಲ ಅನ್ಸುತ್ತೆ.

ಇವತ್ತು ಮಿನಿಸ್ಟ್ರೀನಲ್ಲಿರುವವರಲ್ಲಿ ಸೋಷಿಯಲಿಸಂ ನಂಬುವವರು ಬಹಳ ಕಡಿಮೆ........ ಸಮಾನತೆಯನ್ನು ನಂಬುವವರು ಕಡಿಮೆ.... ಸಮಾನತೆ ಎಂದರೆ ಎಲ್ಲರೂ ಒಂದೇ ಅಂತ ಅಲ್ಲ, ನಮ್ಮ ಒಬ್ಬೊಬ್ಬರಲ್ಲೂ ಒಂದಲ್ಲಾ ಒಂದು ವಿಲಕ್ಷಣವಾದ ಗುಣ ಇರುತ್ತದೆ. ಹಾಗಾಗಿ ನಾವು ವಿಷಮಾನರು. ವಿಷಮಾನರಾಗಿ ಒಬ್ಬರಿಗೊಬ್ಬರು ಹತ್ತಿರವಾಗಿರ್ತೇವೆ. ಆದರೆ ಅಸಮಾನರಲ್ಲ.

ಈ ದೇಶವನ್ನು ಆಳುವವರಿಗೆ ಶಿಕ್ಷಣದ ಈ ಮೂಲಭೂತ ಆಶಯಗಳು ಯಾಕೆ ಕಾಣ್ತಿಲ್ಲ ಅನ್ಸುತ್ತೆ ಸಾರ್?

ನೆಹರೂ ಮತ್ತು ಇಂದಿರಾ ಗಾಂಧಿ ಕಾಲದಲ್ಲಿ ಇದ್ದ ಕೆಲವು ಆಶಯಗಳನ್ನು ನಾವು ಕಳೆದುಕೊಂಡಿದ್ದೇವೆ. ಕೆಲವನ್ನು ರಾಜೀವ್ ಗಾಂಧಿ ಕಾಲದಲ್ಲಿ, ಕೆಲವನ್ನು ನರಸಿಂಹರಾಯರ ಕಾಲದಲ್ಲಿ ಕಳೆದುಕೊಂಡೆವು. ಆಗಿನ ಆಧುನೀಕರಣದಿಂದ ಕೆಲವನ್ನು ಪಡೆದುಕೊಂಡಿದ್ದೀವಿ, ಮೊಬೈಲ್ ಫೋನ್ ಥರದ್ದು. ಆದರೆ ಕಳೆದುಕೊಂಡಿದ್ದೇ ಹೆಚ್ಚು.

ಈಗಂತೂ ಬರೀ ಕಳೆದುಕೊಳ್ತಾನೇ ಇದ್ದೇವೆ. ನೋಡಿ ಒಂದು ಯೂನಿವರ್ಸಿಟಿ ಮಾಡಕ್ಕಾಗಲ್ಲ. ಯಾಕಂದ್ರೆ ಕಾರ್ಪೋರೇಟ್‌ಗಳ ಕೈಗೇ ಎಲ್ಲವನ್ನೂ ಕೊಡ್ತಾ ಇದ್ದಾರೆ. ಅವ್ರಿಗೆ ಸಾಹಿತ್ಯ ಬಿಡಿ, ಮ್ಯಾಥಮೆಟಿಕ್ಸ್ ಸಹಾ ಮುಖ್ಯವಾಗಲ್ಲ, ಬಿಸಿನೆಸ್ ಬೇಕಾಗುತ್ತೆ. ಅಂದ್ರೆ ಇವತ್ತಿನ ಯುಗ ಹೀಗೆ ಆಗಿಬಿಟ್ಟಿದೆ. ವಿವೇಕಾನಂದರು ಒಂದು ಮಾತು ಹೇಳಿದ್ರು. ಮುಂದಿನದು ಶೂದ್ರರ ಯುಗ ಅಂತ. ಮಾರ್ಕ್ಸ್ ಸಹಾ ಅದನ್ನು ಹೇಳಿದ್ದ. ಶೂದ್ರರ ಯುಗ ಬರುತ್ತೆ ಅಂತ. ಪ್ರೊಲಿಟರಿಯೇಟ್....... ಅದು ಬರಲಿಲ್ಲ ಅನ್ನೋದು ಬೇರೆ ಮಾತು. ಬಂದಿದ್ದು ವೈಶ್ಯ ಯುಗ.

ಆದ್ರೆ ಇವತ್ತಿನ ಡೆವಲಪ್‌ಮೆಂಟ್ ಅನ್ನೋದು ಇವನ್ನೆಲ್ಲಾ ಮಾಡೋಕೆ ಬಿಡೋ ಅಭಿವೃದ್ಧಿ ಆಗಿಲ್ಲವಲ್ಲಾ ಸಾರ್.....?

ಡೆವಲಪ್‌ಮೆಂಟ್ ಅನ್ನೋದು ಒಂದು ಪಾಪದ ಶಬ್ದ. ನಮಗೆ ಬೇಕಿರುವುದು ಸರ್ವೋದಯ. ಸುಮ್ಮನೇ ಒಂದು ಶಿಫ್ಟ್ ಮಾಡಿ. ಡೆವೆಲಪ್‌ಮೆಂಟ್ ಅನ್ನೋದನ್ನು ತೆಗೆದು ಆ ಜಾಗದಲ್ಲಿ ಸರ್ವೋದಯ ಹಾಕಿ. ಹಾಗೇನೇ ಜಾತಿ ಅನ್ನೋದನ್ನು ತೆಗೆದು ಅಲ್ಲಿ ವರ್ಣ ಅಂತ ಹಾಕಿ. ಆಗ ನೋಡಿ, ಟಿಪ್ಪು ಒಬ್ಬ ಕ್ಷತ್ರಿಯನಾಗಿ ನಮಗೆ ಕಾಣ್ತಾನೆ. ಮಹಾಕ್ಷತ್ರಿಯ.... ಯಾಕಂದ್ರೆ ವರ್ಣ ಪದ್ಧತಿಯಲ್ಲಿ ಯಾರು ಏನನ್ನು ಬೇಕಾದ್ರೂ ಆಗಬಹುದಿತ್ತು, ಹಲವು ಜನ ಶೂದ್ರರು ಕ್ಷತ್ರಿಯರಾದರು. ಚಂದ್ರಗುಪ್ತ ಮೌರ್ಯ ಸಾಮ್ರಾಜ್ಯಾಧಿಪತಿ ಆದ.

ಈ ರೀತಿಯ ಒಂದು ಅಭಿಪ್ರಾಯವನ್ನು ನೀವು ಟಿಪ್ಪು ಸುಲ್ತಾನರಿಗೆ ಸಂಬಂಧಿಸಿದ ಒಂದು ಕಾರ್ಯಕ್ರಮದಲ್ಲಿ ಕಳೆದ ತಿಂಗಳು ಹೇಳಿದಿರಿ. ಇಂತಹ ಹಲವು ಹೇಳಿಕೆಗಳನ್ನು ನೀವು ಮಾಡ್ತಾ ಇರ್ತೀರಿ. ಅದನ್ನು ಸಾಂದರ್ಭಿಕವಾಗಿ ಹೇಳಿ ಅದು ಔಟ್ ಆಫ್ ಕಾಂಟೆಕ್ಸ್ಟ್ ಕ್ವೋಟ್ ಆಗುತ್ತೋ ಅಥವಾ ನಿಮ್ಮ ಅಭಿಪ್ರಾಯವೇ ಹಾಗಿರುತ್ತೋ, ಆದರೆ ಅದು ವಿವಾದಕ್ಕೆ ಕಾರಣವಾಗುತ್ತೆ, ಇಂತಹದು ಹಲವು

ಜಾತಿಯ ಕುರಿತಾದ ಚರ್ಚೆ

ಬಾಲಗಂಗಾಧರ, ಡಂಕಿನ್ [illegible] ಇವರುಗಳು ಜಾತಿ ವ್ಯವಸ್ಥೆಯ ಕುರಿತು ಬರೆದದ್ದರ ಸುತ್ತ ಈಚೆಗೆ ದೊಡ್ಡ ಚರ್ಚೆ ನಡೆಯಿತು. [illegible] ಸಾಕಷ್ಟು ವಿವಾದ ಆಯ್ತು. ಅದರ ಕುರಿತು ನಿಮ್ಮ ರೆಸ್ಪಾನ್ಸ್ ಏನು ಅಂತ ಒಂದು ನಿರೀಕ್ಷೆ ಇತ್ತು. ಆದರ [illegible] ಮೌನವಾಗಿದ್ದಿರಿ...

ಹೌದು. ನಾನ್ಯಾಕೆ ಮೌನವಾಗಿದ್ದೆ ಅಂದ್ರೆ, ಬಹಳ ಹಿಂದೆಯೇ ಸುಬ್ಬಣ್ಣ ಈ ಬಾಲಗಂಗಾಧರನನ್ನು ನೀನಾಸಂಗೆ ಕರೆದಾಗಲೇ ಒಂದು ಪ್ರಸಂಗ ನಡೆದಿತ್ತು. ಅವತ್ತು [illegible] ಕೆಟ್ಟದಾಗಿ ನಡೆಯಿತೆಂದರೆ ಅವರ ವಾದಗಳಿಗೆ ಪ್ರತಿಯಾಗಿ ನಾನು ಮಾತಾಡಿದಾಗ, ಅವರೆಲ್ಲಾ ಕೂಗಾಡಿದರು: ಶೇಮ್ ಶೇಮ್ ಅಂತೆಲ್ಲಾ ಆತನ ಹಿಂಬಾಲಕರು ಕೂಗಿದರು. ಆಗಲೇ ನಾನು ಸುಬ್ಬಣ್ಣನಿಗೆ ಹೇಳಿದೆ. 'ಏ ಸುಬ್ಬಣ್ಣ ನೀನು ಮತ್ತೆ ಬಾಲಗಂಗಾಧರನನ್ನು ನೀನಾಸಂಗೆ ಕರೆಸೋದಾದ್ರೆ, ನಾನು ಇಲ್ಲಿಗೆ ಯಾವತ್ತೂ ಬರಲ್ಲ' ಅಂತ. ಬಾಲಗಂಗಾಧರನನ್ನು ಇವತ್ತಿಗೂ ಕಾಡ್ತಿರೋದು ಅದೊಂದು ಮಾತು.

ಯಾಕಂದ್ರೆ ಅವರ್ದ್ ಒಂದು ಅಜೆಂಡಾ ಇದೆ. ಇರೋದನ್ನ ಇಲ್ಲ ಅನ್ನೋದು. ಅದರಲ್ಲಿ ಅವನು ಗೆಲ್ತಿರೋದು ಯಾಕಂದ್ರೆ, ಏನು ಇದೆ ಅದನ್ನು ಸರಿಯಾಗಿ ಹೇಳುವುದರಲ್ಲಿ ನಾವು ಸೋಲ್ತಿದ್ದೇವೆ. ಉದಾಹರಣೆಗೆ ಜಾತಿ ಒಂದು [illegible], ಅದು ಜಾತಿ ಜನರನ್ನು ಹೊರಗಿಡ ಕೂಡಾ ಅನ್ನೋದನ್ನು ಮರೆಯಬಾರದು. ಈ [illegible] ಇಲ್ಲದಾಗ ಆ [illegible] ಆಗಿದೆ.

ಇದರ ಜೊತೆಗೆ ಇನ್ನೊಂದು ಮಾತು ಹೇಳಬೇಕು. ಜಾತಿ ಎಲ್ಲರಿಗೂ ಒಂದೇ ರೀತಿ ಇರೋದಿಲ್ಲ. ಒಬ್ಬ ಬ್ರಾಹ್ಮಣನಿಗೆ ಸ್ವಾಭಾವಿಕವಾಗಿ ಇರೋದು ಎಷ್ಟು ಸುಲಭವೋ, ಅದು ಒಬ್ಬ ದಲಿತನಿಗೆ ಸುಲಭವಲ್ಲ. ವಿಶ್ವೇಶ್ವರಯ್ಯನವರಿಗೆ [illegible] ಮತ್ತು [illegible] ಇರೋದು ಸುಲಭವಾಗಬಹುದು. ಬೇರೆಯವರಿಗಲ್ಲ. ಅದು ಬೇರೆಯವರಿಗೂ ಸಾಧ್ಯವಾದಾಗ, ಆತ ಮಹಾನ್ ವ್ಯಕ್ತಿ ಆಗುತ್ತಾನೆ. ಗೋಪಾಲಗೌಡರ ಥರ, ಕರ್ಪೂರಿ ಠಾಕೂರ್ ಥರ.

ಜ್ಞಾನಪೀಠ

...ಅಂತ ನನಗನ್ನಿಸುತ್ತದೆ.

...ಬೀಳುತ್ತಾ, ಏಳುತ್ತಾ ಅರ್ಥವಾಗುತ್ತದೆ

...ಾರಿ ಆಗಿದೆ...... ಈಗ ನೋಡಿ, ನೀವು ಹೇಳಿದ್ರಿ ಮಾರ್ಕ್ಸ್ ಹೇಳಿದ ಹಾಗೆ ಶೂದ್ರಯುಗ ಬರಲಿಲ್ಲ, ವೈಶ್ಯ ಯುಗ ಬಂತು ಅಂತ......

ಹೌದು. ಹಾಗೆ ಆಗಿದೆ. ಈಗ ಈ ವಾಕ್ಯ ಕೇಳಿ ವೈಶ್ಯರು ನನ್ನ ಮೇಲೆ ಪ್ರತಿಭಟನೆ ಮಾಡಬಹುದು. ಇದಕ್ಕೆ ಏನೂ ಮಾಡೋಕಾಗಲ್ಲ, ನಿಮ್ಮ ವಿಚಾರಗಳನ್ನು ನೀವು ಹೇಳಬೇಕಾದ್ರೆ ನಿರ್ಭಯವಾಗಿ ಹೇಳಬೇಕು. ಇವತ್ತಲ್ಲಾ ನಾಳೆ ಅದು ಗೊತ್ತಾಗುತ್ತದೆ. ನನಗೆ ಇದರ ಬಗ್ಗೆ ಬಹಳ ನಂಬಿಕೆ ಇದೆ. ಹಲವರು, ಅರರೆ ಅನಂತಮೂರ್ತಿಯನ್ನು ಇಷ್ಟು ದಿನ ತಪ್ಪು ತಿಳಿದುಕೊಂಡಿದ್ದೆ ಅಂತ ಅಂದ್ಕೋತಾರೆ. ಉದಾಹರಣೆಗೆ ನನ್ನ ಬಾಲ್ಯದ ಅನುಭವಗಳನ್ನು ಬರೀತಾ, ನನಗೆ ಬಹಳ ಸುಂದರವಾದ ಬ್ರಾಹ್ಮಣ ಅನುಭವಗಳಿದ್ದಾವೆ, ಅವನ್ನು ಹೇಳಿದರೆ, ಇವನು ಬರೀ ಬ್ರಾಹ್ಮಣ ಅಂತ ಅಂತಾರೆ. ಹಾಗಂತ ನಾನು ಅವನ್ನು ತ್ಯಜಿಸೋಕೆ ತಯಾರಿಲ್ಲ.

ಲಂಕೇಶ್ ಬದುಕಿದ್ದಿದ್ದರೆ ಅವನಿಗೆ ಗೊತ್ತಾಗ್ತಿತ್ತು. ಬೈತಿದ್ದ ಏನೋ ಅಂತಿದ್ದ. ಆದರೆ ಕೊನೆಗೆ ಅವನಿಗೆ ಅರ್ಥವಾಗ್ತಿತ್ತು. ಅವನಿಗೆ 'ಪರ' ಗೊತ್ತಾಗ್ತಿತ್ತು. ಪರ ಅಂದರೆ ದಿ ಅದರ್. ನಾನು ಮತ್ತು ಅವನು ಇಬ್ಬರೂ ಈ ಅದರ್‌ಅನ್ನು ಮನದಲ್ಲಿಟ್ಟುಕೊಂಡು ಬರೆದವರು. ನೀವು ಯಾವುದನ್ನು ದ್ವೇಷಿಸ್ತೀರೋ ಅದು ನಮ್ಮೊಳಗೇ ಇರುವ ಇನ್ನೊಂದು ಅಂಶ ಆಗಿರಬಹುದು.

ಮೋದಿಯ ಅಪಾಯದ ಕುರಿತು ನೀವು ಸ್ಪಷ್ಟವಾಗಿ ಮಾತನಾಡಿದ್ದೀರಿ. ಅದೇ ರೀತಿ ಪ್ರಜಾಪ್ರಭುತ್ವದ ಶಕ್ತಿಯ ಬಗ್ಗೆಯೂ ಹೇಳಿದ್ದೀರಿ. ಆದರೆ ಮೋದಿ ಸಹಾ ಡೆಮಾಕ್ರಟಿಕಲಿ ಎಲೆಕ್ಟೆಡ್ ಚೀಫ್ ಮಿನಿಸ್ಟರ್. ಹಿಟ್ಲರ್ ಸಹಾ ಪ್ರಜಾತಾಂತ್ರಿಕವಾಗಿಯೇ ಗೆದ್ದು ಬಂದಿದ್ದವನು ಅಲ್ವಾ ಸಾರ್? ಅಂದ್ರೆ, ಇವತ್ತಿನ ಡೆಮಾಕ್ರಸಿಯ ಸ್ವರೂಪದಲ್ಲೇ ಫ್ಯಾಸಿಸ್ಟರು ಹುಟ್ಟಲು ಬೇಕಾದ ತಳಹದಿ ಇಲ್ವಾ?

ನಾವು ಪ್ರಜಾಪ್ರಭುತ್ವವನ್ನು ನಿರ್ವಹಣೆ ಮಾಡೋದನ್ನು ತಿಳೀದಿದ್ರೆ ಹೀಗಾಗುತ್ತೆ. ಸಾಮಾನ್ಯವಾಗಿ ಅದರ ನಿರ್ವಹಣೆ ಸಂಖ್ಯೆಯ ಮುಖಾಂತರ ನಡೆಯುತ್ತದೆ. ಆದರೆ ಪ್ರಜಾತಂತ್ರದ ವ್ಯಾಲ್ಯೂಸ್ ಅದರ ಸಂಖ್ಯೆಯ ಹೊರಗಡೆ ಇರುವವರಿಂದಲೂ ರೂಪುಗೊಳ್ಳಬೇಕು. ದಿ ಎನಿಮಿ ಆಫ್ ದಿ ಪೀಪಲ್ ಅಂತ ಒಂದು ನಾಟಕ ಇದೆ.

ಈ ಊರಿನ ಕೊಳಗಳಿಗೆ ಸ್ನಾನ ಮಾಡೋಕೆ ಅಂತ ಬಹಳ ಜನ ಬರ್ತಿರ್ತಾರೆ. ಅದರಿಂದ ಆ ಊರು ದೊಡ್ಡದಾಗಿ ಬೆಳೆಯುತ್ತೆ ಹಣ ಸೇರುತ್ತೆ. ಆದರೆ ಒಬ್ಬನಿಗೆ ಈ ನೀರಿನಿಂದ ಒಂದು ರೋಗ ಬರುತ್ತೆ ಅಂತ ಗೊತ್ತಾಗುತ್ತೆ. ಅವನಿಗೆ ನೀನು ನಿಜವಾದ ದೇಶಭಕ್ತನಾಗಿ ಅದನ್ನು ಹೇಳಬಾರದು ಅಂತ ಒತ್ತಡ ಬರುತ್ತೆ. ಆದ್ರೆ ಅವ್ನು ಈ ನೀರು ಕೆಟ್ಟಿದೆ, ಈ ಊರು ಕೆಟ್ಟಿದೆ ಅಂತ ಹೇಳ್ತಾನೆ. ನಾನು ಆ ಪ್ರಜಾಪ್ರಭುತ್ವದ ಕುರಿತು ಹೇಳ್ತಿದೇನೆ. ಬಹುಸಂಖ್ಯಾತರನ್ನು ಗೆಲಿಸುವುದೇ ಪ್ರಜಾಪ್ರಭುತ್ವ ಅಲ್ಲ, ಬಹುಸಂಖ್ಯಾತರು ತಪ್ಪು ದಾರಿಯಲ್ಲಿದ್ದರೆ ಅವರನ್ನು ಎಚ್ಚರಿಸುವ ಅವಕಾಶ ಇರುವುದೇ ಪ್ರಜಾಪ್ರಭುತ್ವದಲ್ಲಿ.

15 ವರ್ಷಗಳ ಕೆಳಗೆ ಒಂದು ಸಾರಿ ಒಂದು ಕಾರ್ಯಕ್ರಮದಲ್ಲಿ ನೀವು, ಜಾಗತೀಕರಣವು ಇಲ್ಲಿ ಯಶಸ್ವಿಯಾಗಲು ಸಾಧ್ಯವಿಲ್ಲ; ಯಾಕಂದ್ರೆ ದೊಡ್ಡ ರಾಗಿ ರುಚಿ ತಿಂದ ನಮ್ಮ ಜನರು ಪಿಜ್ಜಾ ಬರ್ಗರ್‌ಅನ್ನು ಇಷ್ಟು ಪಡುವುದಿಲ್ಲ ಎಂದಿದ್ದಿರಿ. ಜಾಗತೀಕರಣವನ್ನು ಹೀಗೆ ಎದುರಿಸೋಕೆ ಸಾಧ್ಯವಾ ಸಾರ್?

ನಮ್ಮ ದೇಶದ ಅನಿಷ್ಟವಾದ ಜಾತಿ ಪದ್ಧತಿ ತಂದಿರುವ ...ಂಚಗಳಿವೆಯಲ್ಲಾ, ಅವೂ ನಮಗೆ ಸಹಾಯಕವಾಗ್ತವೆ ಅಂತ ನನಗೆ ಅನ್ನಿಸುತ್ತೆ, ಅದು ಅನಿಷ್ಟವಾದದ್ದೇ. ಅದೇ ಬಹು ರುಚಿಗಳನ್ನೂ ತಂದಿದೆ. ಅದು ಜಾಗತೀಕರಣವು ನಮ್ಮನ್ನು ಸಂಪೂರ್ಣ ಆವರಿಸಿಕೊಳ್ಳದಂತೆಯೂ ತಡೆಯುತ್ತದೆ.

ಇಷ್ಟು ಸರಳವಾಗಿ ಅದನ್ನು ಹೇಳೋಕಾಗುತ್ತಾ ಸಾರ್?

ಕೇವಲ ಸಾಂಸ್ಕೃತಿಕ ನಿರ್ವಚನದ ಮೂಲಕವೇ ಇದನ್ನು ವಿವರಿಸೋಕೆ ಆಗುತ್ತಾ? ಜಾಗತೀಕರಣವು ನಮ್ಮನ್ನು ಸಂಪೂರ್ಣವಾಗಿ ಆವರಿಸಿಕೊಂಡಿದೆ. ದೊಡ್ಡ ರಾಗಿಯನ್ನೂ ಕಿತ್ತುಕೊಂಡು ಬಿಟ್ಟಿದೆ. ಹೀಗಿರುವಾಗ......

ಸರಳವಾಗಿ ಹೇಳೋಕಾಗಲ್ಲ, ಜಾಗತೀಕರಣವನ್ನು ವಿರೋಧಿಸ್ತಾನೇ ಅದರತ್ತ ಆಕರ್ಷಿತವಾಗಿರುವುದೂ ಇರುತ್ತೆ.

ನಿಮ್ಮ ಅನಾರೋಗ್ಯದ ಸಂದರ್ಭದಲ್ಲೂ ಇಷ್ಟು ದೃಢವಾಗಿದ್ದೀರಿ, ನಿಮ್ಮ ಅಭಿಪ್ರಾಯಗಳು ಬದಲಾಗ್ತಿಲ್ಲ, ಇದರ ಬಗ್ಗೆ ನೀವು ಅಧೀರರಾದ ಹಾಗೆ ಕಾಣ್ತಿಲ್ಲ. ಲಂಕೇಶರು ಸಹಾ ಹಲವಾರು ವರ್ಷಗಳ ಕಾಲ ಅನಾರೋಗ್ಯಕ್ಕೆ ಗುರಿಯಾದ್ರು. ಅದರ ಬಗ್ಗೆಯೂ ಬರೆದರು......

ನಾನು ಲಂಕೇಶ್‌ಗೂ ಹೇಳ್ತಾ ಇದ್ದೆ, ನಿನ್ನ ಖಾಯಿಲೆ ಬಗ್ಗೆ ಅಷ್ಟೊಂದು ಬರೆಯಬೇಡ ಅಂತ. ಆದರೆ ಪತ್ರಿಕೆ ಇದ್ದಿದ್ದರಿಂದ, ವೈಯಕ್ತಿಕವಾಗಿ ಏನನ್ನಾದರೂ ಬರೀಬೇಕಾಗ್ತಿತ್ತು, ಹಾಗಾಗಿ ಟೆಂಪ್ಟಾಗಿ ಬಿಟ್ಟು ಬರೀತಿದ್ದ. ಆದ್ರೆ ಆತನ ಒಳನೋಟಕ್ಕೆ ಯಾವತ್ತೂ ಅನಾರೋಗ್ಯ ಉಂಟಾಗಲಿಲ್ಲ, ವ್ಯಾಧಿ ಒಳನೋಟದ ವ್ಯಾಧಿ ಆಗಲಿಲ್ಲ, ಹಿ ವಾಸ್ ಎ ಗ್ರೇಟ್ ಮ್ಯಾನ್.

ಪ್ಯೂರಿಟಿಯ ಹುಡುಕಾಟದಲ್ಲಿ ನನಗೆ ನಾನು ವಿರೋಧಿಯಾಗೋದು ಸಾಧ್ಯವಾಗಬೇಕು. ನಾನು ಹೇಳಿದ್ದು ಅಷ್ಟೂ ತಪ್ಪು ಅಂತ ಹೇಳೋಕಾಗಬೇಕು. ಆಗ ನನಗೆ ಒಳನೋಟದ ವ್ಯಾಧಿ ಇಲ್ಲದಂತೆ ಆಗುತ್ತದೆ. ಆಗ ಮನಸ್ಸು ನಿರ್ಭಯವಾಗಿರುತ್ತದೆ. ತನ್ನನ್ನು ತಾನು ಡಿಫೆಂಡ್ ಮಾಡಿಕೊಳ್ಳಲಿಕ್ಕೆ ಹೋಗಬಾರದು. ತಪ್ಪಾದರೆ ತಪ್ಪು.

ಆದ್ರೆ ಆತನ ದೊಡ್ಡ ತಪ್ಪು ಏನಂದ್ರೆ, ಮೋದಿ ಅಷ್ಟು ತಪ್ಪು ಮಾಡಿದ್ರೂ ಅವನನ್ನು ತೆಗೆದುಹಾಕದೇ ಇದ್ದದ್ದು. ಆಗ ಆರೆಸ್ಸೆಸ್‌ನ ನಿಷ್ಠೆ ಅಡ್ಡ ಬಂದು ಬಿಡ್ತು, ಇದೇ ಥರದ್ದು ಆತನ ಬಗ್ಗೆ ಇನ್ನೂ ಒಂದು ಇದೆ. ಅದನ್ನು ಮಧು ಲಿಮಯೆ ಹೆಂಡತಿ ಚಂಪಾ ನನಗೆ ಹೇಳಿದ್ದು. ನಾನು ಎಲ್ಲೂ ಹೇಳಿಲ್ಲ ಇದನ್ನು, ಲಿಮಯೆ, ವಾಜಪೇಯಿ ಇವರೆಲ್ಲರನ್ನೂ ಜೈಲಿನಲ್ಲಿಟ್ಟ ಸಂದರ್ಭದಲ್ಲೇ, ಇಂದಿರಾ ಗಾಂಧಿ ಎಲ್ಲಾ ಪಾರ್ಲಿಮೆಂಟ್ ಸದಸ್ಯರ ಅವಧಿಯನ್ನು ಒಂದು ವರ್ಷ ಹೆಚ್ಚು ಮಾಡ್ತಾಳೆ. ಎಲ್ಲರಿಗೂ ಖುಷಿಯಾಗ್ತದೆ, ಇನ್ನೊಂದು ವರ್ಷ ಸಿಕ್ತಲ್ಲಾ ಅಂತ. ಆದ್ರೆ ಅದನ್ನು ಮಧು ಲಿಮಯೆ ತಿರಸ್ಕರಿಸ್ತಾರೆ, ಇಂದಿರಾ ಗಾಂಧಿಯ ದಾನದಿಂದ ಬಂದ ಸವಲತ್ತು ತನಗೆ ಬೇಡ ಅಂತಾರೆ. ಜೊತೆಗೆ ತನ್ನ ಹೆಂಡತಿಯನ್ನು ಕರೆದು, 'ಈ ಮಾತನ್ನು ವಾಜಪೇಯಿಯೂ ಹೇಳಬೇಕು; ಆಗ ಇಂದಿರಾ ಗಾಂಧಿಗೆ ತನ್ನ ಆಟ ನಡೆಯಲ್ಲ ಅಂತ ಗೊತ್ತಾಗುತ್ತೆ, ನೀನು ಹೋಗಿ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿರುವ ವಾಜಪೇಯಿಗೆ ಹೇಳು' ಅಂತಾರೆ. ಚಂಪಾ ಇದನ್ನು ಹೇಳಿದಾಗ, ವಾಜಪೇಯಿ ಒಪ್ಪಲ್ಲ 'ನಾನು ನಮ್ಮ ಪಾರ್ಟಿಯನ್ನು ಕೇಳಬೇಕು' ಅಂತಾರೆ. ಒಂಥರದಲ್ಲಿ ಡೆಮಾಕ್ರಟಿಕ್ಕಾಗಿ ಅದು ಸರಿ ಅನ್ನಿಸಿದ್ರೂ, ಇಂತಹ ಕ್ರೈಸಿಸ್ ಸಂದರ್ಭದಲ್ಲೂ ಅವರು ಆರೆಸ್ಸೆಸ್ ಹೇಳಿದ ಹಾಗೆ ಕೇಳೋದು ಅವರಲ್ಲಿನ ದೊಡ್ಡ ದೌರ್ಬಲ್ಯವಾಗಿತ್ತು.

ಸೋಷಲಿಸ್ಟರಿಗೆ ಇದ್ದ ಕ್ಲಾರಿಟಿ ವಾಜಪೇಯಿಗೆ ಸಾಧ್ಯವಿರಲಿಲ್ಲ.

ಏನೇ ಆದ್ರೂ ವಾಜಪೇಯಿಯಲ್ಲಿ ಒಂದು



ಆದ್ದರಿಂದಲೇ ಅನೇಕ 'ದ್ವಂದ್ವ'ಗಳು ಬೇರೆಯವರಿಗೆ ಕಂಡಿದ್ದು. ಪರವಾಗಿಲ್ಲ. ಆದರೆ ನೀವು ಪೂರಾ ನೋಡಿದರೆ ದ್ವಂದ್ವ ಇರಲಿಲ್ಲ ಅಂತ ಗೊತ್ತಾಗುತ್ತೆ. ನಿಜವಾದ ಮುಖಾಮುಖಿ ಆಗಬೇಕು ಅದಕ್ಕೆ.

ನೀವು ವಾಜಪೇಯಿ ಕುರಿತಾಗಿ ಮಾತನಾಡಬೇಕಾದರೆ, 'ಆತ ದೇಶದ ಪ್ರಧಾನಿಯಾದ್ರೆ, ನನಗೂ ಪ್ರಧಾನಿ' ಅಂತ ಅಂದಿದ್ರಿ. ಅದೇ ಮಾತನ್ನು ನೀವು ಮೋದಿ ಬಗ್ಗೆ ಆಡಲ್ಲ....

ಹೌದು. ವಾಜಪೇಯಿ ಪಾಕಿಸ್ತಾನದ ವಿಚಾರದಲ್ಲಿ ಪ್ರಾಯಶಃ ಕಾಂಗ್ರೆಸ್ ಮಾಡಲಾರದ್ದನ್ನು ಮಾಡಿದ್ರು. ಆಗ ನನಗೆ ಅವರ ಬಗ್ಗೆ ಬಹಳ ಗೌರವ ಬಂತು. ಅದಕ್ಕಿಂತ ಹೆಚ್ಚಾಗಿ ವೈಯಕ್ತಿಕವಾದ್ದು ಏನೋ ಒಂದು ಆಗಿತ್ತು. ದೂರದರ್ಶನದಲ್ಲಿ ಒಂದು ಚರ್ಚೆಯಲ್ಲಿ ನಾವು ಭಾಗವಹಿಸಿದ್ವಿ.

ನಾನು ನೋಡಿದ್ದೀನಿ, ಭಾಷೆ ಕುರಿತ ಚರ್ಚೆ ಅದು. ರಾತ್ರಿ 10 ಗಂಟೆ ನಂತರ ಪ್ರಸಾರವಾಗಿತ್ತು.

ಹೌದು, ಅದೇ. ಅವತ್ತು ಚರ್ಚೆ ಮುಗಿದ ಮೇಲೆ ಬಣ್ಣ ಅಳಿಸಿಕೊಳ್ಳಬೇಕಾದ್ರೆ, ವಾಜಪೇಯಿ ಒಂದು ಮಾತನ್ನು ಹೇಳಿದ್ರು 'ನೀನು ಹೇಳಿದ್ದನ್ನ ನಾನು ಹೇಳೋಕಾಗ್ತಿರ್ಲಿಲ್ಲ' ಅಂತ. ನಾನು ಏನು ಹೇಳಿದ್ದೆ ಅಂದ್ರೆ, ಸಾಮಾನ್ಯ ಜನರು ಹಿಂದೀನ ಇಷ್ಟ ಪಡೋದು ಅದು ನ್ಯಾಷನಲ್ ಲಾಂಗ್ವೇಜ್ ಅಂತ ಅಲ್ಲ, ಅದರಲ್ಲಿ ಕಬೀರ್ ಬರೆದಿದ್ದಾರೆ, ತುಳಸೀದಾಸರು ಬರೆದಿದ್ದಾರೆ ಅಂತ. ಆ ಕಾರಣಕ್ಕೆ ನಮ್ಮ ಹಳ್ಳಿ ಹೆಣ್ಣು ಮಗಳೊಬ್ಬಳು ಹಿಂದಿ ಕಲಿತಿದ್ದಳು. ಅದನ್ನು ತಾನು ಹೇಳೋಕೆ ಆಗ್ತಿರ್ಲಿಲ್ಲ ಅಂತ ವಾಜಪೇಯಿಗೆ ಅನ್ನಿಸಿತ್ತು.

ಹಾಗೇ ಮುಂದುವರೆದು ಅವರು 'ಐ ಡೋಂಟ್ ವಾಂಟ್ ಟು ಯೂಸ್ ರಿಲಿಜನ್ ಇನ್ ಪಾಲಿಟಿಕ್ಸ್' ಅಂದ್ರು. ಅದು ತುಂಬಾ ತಪ್ಪು ಅಂತಲೂ ಅಂದ್ರು. ಅದಾದ ಮೇಲೆ ನಾನು ಅಕಾಡೆಮಿ ಫಂಕ್ಷನ್‌ಗೆ ಅವರನ್ನು ಕರೆದಿದ್ದೆ, ಆಗ ಅವ್ರು ರಾಮಾಯಣದ ಬಗ್ಗೆ ಹೇಳ್ತಾ 'ರಾಮಾಯಣ ಅಂದ್ರೆ ನನಗೆ ಅಯೋಧ್ಯಾ ಕಾಂಡ ಅಲ್ಲ' ಅಂದ್ರು. ಇದು ನನಗಿಷ್ಟವಾಯ್ತು, ಆತನೇನಾದ್ರೂ ಕಾಶ್ಮೀರದ ಸಮಸ್ಯೇನಾ ಬಗೆಹರಿಸಿಬಿಟ್ಟಿದ್ರೆ, ಬೇರೆ ಯಾರೂ ಬಗೆಹರಿಸಲಿಕ್ಕಾಗದ್ದನ್ನು ಮಾಡಿದ ಹಾಗೆ ಆಗ್ತಿತ್ತು.

ಒಳದನಿಯಿತ್ತು, ಮೋದಿಗೆ ಒಳದನಿಯೇ ಇಲ್ಲ. ಆತನ ಜೊತೆ ಮಾತೂ ಸಾಧ್ಯವಿಲ್ಲ, ಬಿಗಿಯಾಗಿರ್ತಾನೆ. ಆ ಬಿಗಿ ಜರ್ಮನಿಯಲ್ಲಿ ನಡೆದದ್ದನ್ನು ಪುನರಾವರ್ತಿಸಬಲ್ಲ ಬಿಗಿಯಾಗಿದೆ.

ನೀವು ಸೋಷಲಿಸ್ಟರ ಕ್ಲಾರಿಟಿ ಬಗ್ಗೆ ಹೇಳ್ತಿದ್ದೀರಿ. ಆದ್ರೆ ಜನಸಂಘ ಮತ್ತು ಬಿಜೆಪಿಯ ಬೆಳವಣಿಗೆಗೆ ಸೋಷಲಿಸ್ಟರ ಕೊಡುಗೆಯೂ ಇದೆ. ಈ ಸಮಸ್ಯೆ ಇಂಡಿವಿಜ್ಯುಯಲ್ ಸೋಷಲಿಸ್ಟರದಾ ಅಥವಾ ಲೋಹಿಯಾವಾದದೊಳಗೇ ಇರುವ ಸಮಸ್ಯೆಯಾ?

ಇದು ಲೋಹಿಯಾವಾದದೊಳಗೇ ಇರುವ ಸಮಸ್ಯೆ. ಅದನ್ನು ನಾನು ಲೋಹಿಯಾಗೇ ಹೇಳಿದ್ದೆ. ನೆಹರೂ ಕುರಿತಾದ ಲೋಹಿಯಾರ ವಿರೋಧ, ಅದು ನಂತರ ಲೋಹಿಯಾವಾದಿಗಳಲ್ಲಿ ಕಾಂಗ್ರೆಸ್ ಮತ್ತು ನೆಹರೂ ಕುಟುಂಬಕ್ಕೆ ವಿಸ್ತರಿತವಾದದ್ದು ಹೌದು.

ವಾಜಪೇಯಿಯವರನ್ನು ಇಷ್ಟ ಪಟ್ಟ ಹಾಗೆ, ಹಲವಾರು ಸಾರಿ ಹಲವಾರು ವ್ಯಕ್ತಿಗಳ ಬಗ್ಗೆ ಮಾತಾಡಿದ್ದೀರಿ. ಈ ವ್ಯಕ್ತಿಗಳಲ್ಲಿ ಇರುವ ಈ ಒಳ್ಳೆಯತನ ದೇಶಕ್ಕೆ, ರಾಜ್ಯಕ್ಕೆ ಒಳ್ಳೆಯದನ್ನು ಮಾಡುತ್ತೆ ಅಂತ. ಆ ಮಾತುಗಳನ್ನು ನೀವು ಕುಮಾರಸ್ವಾಮಿ, ಯಡಿಯೂರಪ್ಪನ ತನಕ ವಿಸ್ತರಿಸಿದ್ದೀರಿ. ಇದು ಹೇಗೆ ಸಾಧ್ಯ? ಇವರೆಲ್ಲರಿಗಿಂತ ಈ ವ್ಯವಸ್ಥೆ ದೊಡ್ಡದಲ್ಲವಾ? ಅಥವಾ ಮಾರ್ಕ್ಸ್‌ವಾದಿ ಪರಿಭಾಷೆಯಲ್ಲಿ ಹೇಳೋದಾದ್ರೆ ಇವರು ಒಂದು ವರ್ಗ ಹಿತಾಸಕ್ತಿಯನ್ನು ಪ್ರತಿನಿಧಿಸೋದಿಲ್ವಾ? ನಿಜವಾಗ್ಲೂ ನೀವು ಅವರು ಬದಲಾಗ್ತಾರೆ ಅಂತ ನಂಬಿಕೊಂಡಿರ್ತೀರಾ ಅಥವಾ ವಿಷ್‌ಫುಲ್ ಥಿಂಕಿಂಗಾ?

ವಿಷ್‌ಫುಲ್ ಥಿಂಕಿಂಗೇ. ಅದು ನನ್ನ ವ್ಯಕ್ತಿತ್ವದಲ್ಲೇ ಇರೋದು. ನನ್ನ ಬಾಲ್ಯಕಾಲದಿಂದಲೂ ಇದೆ. ಅದು ನನ್ನನ್ನು ಕಾಪಾಡಿದೆ ಅಂತಲೂ ಅನ್ನಿಸುತ್ತೆ, ಇಲ್ಲಾಂದ್ರೆ ನಾನು ಸಿನಿಕಲ್ ಆಗಿ ಬಿಡ್ತಿದ್ದೆ ಇಲ್ಲಾಂದ್ರೆ ಕ್ರೂರಿಯಾಗಿಬಿಡ್ತಿದ್ದೆ. ಮಾರ್ಕ್ಸ್‌ನ ಒಂದು ವಿಚಾರವನ್ನು ನಾನು ಒಪ್ತೀನಿ. ಯಾವನಾದ್ರೂ, ಏನಾದ್ರೂ ಬದಲಾವಣೆ ತರಬೇಕಂದ್ರೆ, ಅದಕ್ಕೆ ಆ ಕಾಲ ಅವಕಾಶ ಕೊಡಬೇಕು ಅದಕ್ಕೆ ಇಷ್ಟು ಕಬ್ಬಿಣ ಇರಬೇಕು, ಇಷ್ಟು ಇಂಡಸ್ಟ್ರಿ ಬೆಳೆದಿರ್ಬೇಕು ಇತ್ಯಾದಿ.

ಇಲ್ಲಾಂದ್ರೆ ಅದನ್ನು ಮಾಡೋಕಾಗಲ್ಲ ಅಂತ. ಅದೇ ರೀತಿ ಅರ್ಲಿ ಮಾರ್ಕ್ಸ್‌ಗೆ ಇನ್ನೂ ಒದು ವಿಷಯ ಗೊತ್ತಿತ್ತು, ಅದೇನು ಅಂದ್ರೆ, ಮನುಷ್ಯನಿಗೆ ಬಯಕೆ ಅಂತ ಒಂದಿರುತ್ತೆ. ಅದು ಪ್ರಿಮಿಟಿವ್ ಆದ ಕಾಲದಿಂದಲೂ ಇತ್ತು. ಎಷ್ಟು ಪ್ರಿಮಿಟಿವ್ ಕಾಲದಿಂದಲೂ ಮನುಷ್ಯ ಒಳ್ಳೇದನ್ನು ಬಯಸ್ತಾನೆ. ಇಲ್ಲಾಂದ್ರೆ ಸ್ಲೇವರಿಯನ್ನು ಸಾಕ್ರಟಿಸ್ ವಿರೋಧಿಸುತ್ತಿರಲಿಲ್ಲ.


ಅಂದರೆ ಮನುಷ್ಯ ಭಾವನೆಯಲ್ಲಾದ್ರೂ ಕಾಲಾತೀತವಾಗಿರಬೇಕು. ತನ್ನ ಕಾಲಧಲ್ಲಿ ಮಾಡಲು ಸಾಧ್ಯವಾಗುವಷ್ಟು ಮಾತ್ರಕ್ಕೆ ಯೋಚನೆಯನ್ನು ಸೀಮಿತಗೊಳಿಸಿಕೊಂಡರೆ ಕಷ್ಟ. ಅದು ನನಗೆ ಹೋಮರ್‌ನಲ್ಲಿ, ವೇದವ್ಯಾಸನಲ್ಲಿ, ಕಾಳಿದಾಸನಲ್ಲಿ ಸಿಗುತ್ತೆ. ಭಾವನಾಲೋಕದಲ್ಲಿ ಸಾಧ್ಯವಾಗುವುದೂ ಸಹಾ, ಕನಸುಗಳೂ ಸಹಾ ನಿಜವಾಗುತ್ತೆ ಅಂತ ನಂಬಿಕೆ ಅದು. ಅಂತಹ ಕನಸುಗಳು ಇರುವ ರಾಜಕಾರಣಿಗಳನ್ನು ನಾನು ಇಷ್ಟಪಡ್ತೇನೆ. ಪಟೇಲನಲ್ಲಿ ಅಂತಹ ಕನಸುಗಳಿದ್ದವು. ಹೆಗಡೇಲಿ ಸ್ವಲ್ಪ ಕಡಿಮೆ ಇತ್ತು, ದೇವೇಗೌಡರಲ್ಲೂ ಒಳ್ಳೇತನ ಇದೆ ಅಂತ ನಾನು ಭಾವಿಸ್ತೇನೆ.

ಹೆಗಡೇಲಿ ಇದು ಕಡಿಮೆ ಇತ್ತು ಅಂತ ನಾನು ಯಾಕೆ ಹೇಳ್ತೇನೆ ಅಂದ್ರೆ, ಬಂಗಾರಪ್ಪನ ವಿಚಾರದಲ್ಲಿ ನಡೆದುಕೊಂಡ ರೀತಿ ನನಗೆ ಗೊತ್ತು. ಜನತಾ ಪಾರ್ಟಿ ಬರೋಕೆ ಬಂಗಾರಪ್ಪಾನೇ ಕಾರಣ. ಆತನ ಒಂದು 5 ಓಟು ಮುಖ್ಯವಾಗಿತ್ತು, ಇಲ್ಲಾಂದ್ರೆ ಈ ಒಕ್ಕಲಿಗರು, ಲಿಂಗಾಯತರ ಓಟಿನಿಂದ ಗೆಲ್ಲೋಕೆ ಆಗ್ತಿರ್ಲಿಲ್ಲ. ನಾನು ಹೆಗಡೆ ಮತ್ತು ಬಂಗಾರಪ್ಪ ಒಂದಾಗಿರ್ಲಿ ಅಂತ ಪ್ರಯತ್ನ ಪಡ್ತಿದ್ದೆ. ಒಂದು ದಿನ ಹೆಗಡೇವ್ರು ನನ್ನನ್ನು ಮಾಸ್ತಿಯವರನ್ನು ನೋಡೋಕೆ ಕರೆದುಕೊಂಡು ಹೋಗ್ತಿದ್ರು. ರಘುಪತೀನೂ ಇದ್ರು. ಆ ಸಮಯದಲ್ಲಿ ಹೆಗಡೆ ಬಂಗಾರಪ್ಪನಿಗೆ ನೀನು ನಿನ್ನ ಪಾರ್ಟಿಯನ್ನು ಬರ್ಖಾಸ್ತು ಮಾಡಿ ಬಂದ್ರೆ ಮಾತ್ರ ಒಳ್ಳೇ ಸ್ಥಾನ ಅಂತ ಸ್ಪಷ್ಟಪಡಿಸಿದ್ರು. ಅದರಲ್ಲೇನೂ ತಪ್ಪಿರ್ಲಿಲ್ಲ. ಆದ್ರೆ ಸ್ವಲ್ಪ ಪ್ರೈಡ್ ಇದ್ದ ಬಂಗಾರಪ್ಪ ಅದನ್ನು ಬಿಟ್ಟು ಬರಲ್ಲ ಅಂತ ಅವರಿಗೆ ಗೊತ್ತಿತ್ತು. ಅದಕ್ಕೇ ಈ ರೀತಿ ಹೇಳಿದ್ರು. ಅದನ್ನು ಮನಸ್ಸಿನಲ್ಲಿಟ್ಕೊಂಡು ನಂಗೆ 'ನೋಡು, ನಿನ್ನ ಫ್ರೆಂಡ್‌ಗೆ ನಾನು ಹೇಗೆ ಮಾಡಿದೆ' ಅಂತ ಅಂದ್ರು. ನನಗೆ ಸಿಟ್ಟು ಬಂತು. 'ನೀವು ಈ ರೀತಿ ಮಾತಾಡಬಾರದು. ಬಂಗಾರಪ್ಪನಂಥವನಿಗೆ ಹೀಗೆ ಮಾಡೋದು ದೊಡ್ಡ ಅನ್ಯಾಯ' ಅಂತ ಸಿಟ್ಟಿನಲ್ಲೇ ಹೇಳಿದೆ. ಆಗ ರಘುಪತಿ 'ಅಯ್ಯೋ, ನಮ್ಮ ಸಾಹೇಬರು ಹೇಳಿದ್ದು ಹಾಗಲ್ಲ' ಅಂತ ಮಾತಾಡಲು ಬಂದ್ರು. ನಾನು ಹೇಳಿದೆ 'ನೀವು ಸುಮ್ಮನಿರಿ. ಈ ದೇಶದಲ್ಲಿ ಬಂಗಾರಪ್ಪನಂಥ ಒಬ್ಬ ಈಡಿಗರ ಹುಡುಗ ದೊಡ್ಡ ನಾಯಕನಾಗೋದು ಚಾರಿತ್ರಿಕ ಸಂಗತಿ. ಅವರನ್ನು ನೀವು ಕ್ರಿಟಿಸೈಸ್ ಮಾಡೋದಾದ್ರೂ ಅದನ್ನು ಹೀನಾಯಗೊಳಿಸಿ ಮಾಡಬಾರದು'. ಆಗ ಹೆಗಡೆ 'ನೀವು ಹೇಳೋದು ಸರಿ. ಅವರು ಮುಖ್ಯ' ಅಂದ್ರು. ಹೆಗಡೇಗೆ ಅಷ್ಟು ಅರ್ಥವಾಗ್ತಿತ್ತು.

ಸಾರ್, ನಿಮ್ಮ ಸೂರ್ಯನ ಕುದುರೆಯ ಅನಂತು, ಕಾಮರೂಪಿ ಕಥೆಯ ನಿರೂಪಕ ಮತ್ತು ಭಾರತೀಪುರದ ಜಗನ್ನಾಥ ಇವರೆಲ್ಲರೂ ನೀವೇ (ಜಗನ್ನಾಥನನ್ನು ನೀವು ಹಾಗಂತೀರೋ ಇಲ್ಲವೋ ಗೊತ್ತಿಲ್ಲ) ಆಗಿದ್ದು ಈ ಮೂವರಲ್ಲೂ ಒಂದು ಮುಜುಗರದ ಆಸ್ಪೆಕ್ಟ್ ಎದ್ದು ಕಾಣುತ್ತದೆ. ಸುತ್ತಲಿನವರು ಇದ್ದಷ್ಟು ಸಹಜವಾಗಿ ನಾನಿಲ್ಲ ಅನ್ನುವ ಹಳಹಳ.

ದಾಕ್ಷಿಣ್ಯ ಅದು. ಇದೂ ಸಹಾ ನನ್ನ ವ್ಯಕ್ತಿತ್ವದ ಭಾಗವಾಗಿಯೇ ಬಂದಿರೋದು. ಅದೇ ಕಾರಣಕ್ಕೆ ನಾನು ಹಲವು ತಪ್ಪುಗಳನ್ನೂ ಮಾಡಿದ್ದೇನೆ. ಆದರೆ ಒಬ್ಬ ಲೇಖಕನಾಗಿರೋದರಿಂದ ಅದನ್ನು ನಿರ್ವಹಣೆ ಮಾಡೋದು ನನಗೆ ಸಾಧ್ಯವಾಗಿದೆ. ಆ ರೀತಿ ನಾನು ತೀವ್ರವಾಗಿ ಭಾವಿಸಿ ಬರೆದದ್ದು ಭಾರತೀಪುರ ಮತ್ತು ಸೂರ್ಯನ ಕುದುರೆಯನ್ನು. ಅದನ್ನು ನೋಡಿದರೆ ನಿಮಗೆ ಗೊತ್ತಾಗ್ತದೆ ■

ಸಂವೇದನೆಯನ್ನು ಸೂಕ್ಷ್ಮವಾಗಿಸಿದ ಗುರು- ಯು.ಆರ್.ಎ.



ನಾನು ಕಾಲೇಜು ಸೇರುವವರೆಗೂ ನನಗೆ ಅನಂತಮೂರ್ತಿಯವರು ಯಾರೆಂದೇ ತಿಳಿದಿರಲಿಲ್ಲ. ಉಡುಪಿಯ ಮಹಾತ್ಮ ಗಾಂಧಿ ಸ್ಮಾರಕ ಕಾಲೇಜಿನಲ್ಲಿ ಪ್ರಥಮ ಪಿಯುಸಿಯಲ್ಲಿದ್ದಾಗ ರವೀಂದ್ರನಾಥ ಠಾಕೂರರ ಮೇಲೆ ನಡೆದ ಪ್ರಬಂಧ ಸ್ಪರ್ಧೆಯಲ್ಲಿ ನನಗೆ ಪ್ರಥಮ ಬಹುಮಾನ ಸಿಕ್ಕಿತು. ಬಹುಮಾನವಾಗಿ ಅನಂತಮೂರ್ತಿಯವರ ವೈಚಾರಿಕ ಲೇಖನಗಳ ಸಂಗ್ರಹ 'ಸನ್ನಿವೇಶ'ವನ್ನು ಕೊಟ್ಟರು. ಆ ಪುಸ್ತಕದ ಓದು ನನ್ನ ಆಲೋಚನಾ ರೀತಿಯನ್ನೇ ಬದಲಿಸಿಬಿಟ್ಟಿತು. ನಂತರ ನಾನು ಯು.ಆರ್.ಎ. ಅವರ 'ಪ್ರಜ್ಞೆ ಮತ್ತು ಪರಿಸರ' ಓದಿದೆ. ಅದರಲ್ಲಿ ಅವರು ಅಸ್ತಿತ್ವವಾದದ ಬಗ್ಗೆ ಬರೆದ ಲೇಖನ 'ಇಂಗ್ಲಿಷ್ ಬ್ರಾಹ್ಮಣ ಕನ್ನಡ ಶೂದ್ರ', 'ಬೆಕೆಟ್‌ನ ಗಾಡೋ' ಮೇಲಿನ ಲೇಖನಗಳು ನನ್ನ ಮೇಲೆ ಆಳವಾದ ಪ್ರಭಾವವನ್ನು ಬೀರಿದವು- ಅದು 1976-77ರ ಸಮಯ. ದಿವಂಗತ ಇಂದಿರಾ ಗಾಂಧಿ ದೇಶದ ಮೇಲೆ ತುರ್ತು ಪರಿಸ್ಥಿತಿ ಘೋಷಿಸಿದ್ದ ವರ್ಷ. ಅನಂತಮೂರ್ತಿ, ಗೋಪಾಲಕೃಷ್ಣ ಅಡಿಗ, ಶಿವರಾಮ ಕಾರಂತ, ಸ್ನೇಹಲತಾ ರೆಡ್ಡಿ, ಜಾರ್ಜ್ ಫರ್ನಾಂಡಿಸ್‌ರಂತಹ ಶ್ರೇಷ್ಠ ಚಿಂತಕರು ಆ ತುರ್ತು ಪರಿಸ್ಥಿತಿಯನ್ನು ವಿರೋಧಿಸಿದ್ದನ್ನು ನೋಡಿ-ಕಾಲೇಜು ವಿದ್ಯಾರ್ಥಿಗಳಾದ ನಾವೂ ಭೂಗತರಾಗಿ ಇಂದಿರಾ ಗಾಂಧಿಯವರ ಸರ್ವಾಧಿಕಾರಿ ಧೋರಣೆಯ ವಿರುದ್ಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೆವು. ತಮಾಷೆಯೆಂದರೆ ಆಗ ನಮ್ಮ ಜತೆ ಇದ್ದವರು ಆರ್.ಎಸ್.ಎಸ್.ನ ಸದಸ್ಯರು! ಎಲ್ಲ ಜಯಪ್ರಕಾಶ ನಾರಾಯಣರ ವಿಚಾರಗಳಿಂದ ಪ್ರಭಾವಿತರಾಗಿದ್ದೆವು. ಗೋಪಾಲಕೃಷ್ಣ ಅಡಿಗರು ಜನಸಂಘದಲ್ಲಿದ್ದರು!

ಮುಂದೆ ಅನಂತಮೂರ್ತಿಯವರ ಎಲ್ಲಾ ಕೃತಿಗಳನ್ನು ನಾನು ಓದಿದೆ. ಅಷ್ಟು ಮಾತ್ರವಲ್ಲ 'ನವ್ಯ' ಸಾಹಿತ್ಯ ಪಂಥದ ಲಂಕೇಶ್, ತೇಜಸ್ವಿ, ಚಂಪಾ, ಗಿರೀಶ್ ಕಾರ್ನಾಡ್, ಗಿರಿ, ಗೋಪಾಲಕೃಷ್ಣ ಅಡಿಗ, ಶಾಂತಿನಾಥ ದೇಸಾಯಿ, ಗಂಗಾಧರ ಚಿತ್ತಾಲ, ಕಂಬಾರ... ಮುಂತಾದವರ ಎಲ್ಲಾ ಕೃತಿಗಳನ್ನು ಓದಿ, ಸ್ವತಃ ನಾನು ಹಾಗೆಯೇ ಬರೆಯಲು, ಯೋಚಿಸಲು ತೊಡಗಿದೆ.

ಆಗ ನನಗೆ ಗೆಳೆಯನಾಗಿ ದಕ್ಕಿದವನು ಪಟ್ಟಾಭಿರಾಮ ಸೋಮಯಾಜಿ. ಅವನು ಇಂಗ್ಲಿಷ್ ಸಾಹಿತ್ಯದ ಐಚ್ಛಿಕ ವಿದ್ಯಾರ್ಥಿ. ನಾನು ವಾಣಿಜ್ಯ ವಿಭಾಗದ ವಿದ್ಯಾರ್ಥಿ. ಎಂ.ಜಿ.ಎಂ. ಕಾಲೇಜಿನ ಸುತ್ತ ಬೆಳೆದಿರುವ ಮಾವಿನಮರಗಳ ಕೆಳಗಿರುವ ಕಲ್ಲು ಬೆಂಚುಗಳ ಮೇಲೆ ಕುಳಿತು ನಾನು ಮತ್ತು ಪಟ್ಟಾಭಿ ಜಗತ್ತಿನ ಎಲ್ಲಾ ಸಾಹಿತ್ಯ ಕೃತಿಗಳ ಬಗ್ಗೆ ಚರ್ಚಿಸುತ್ತಿದ್ದೆವು. ಆ ನಮ್ಮ ಚರ್ಚೆಗಳಿಗೆ ಪ್ರೇರಣೆಯಾಗಿದ್ದದ್ದು ಅನಂತಮೂರ್ತಿಯವರ ಬರಹಗಳು.

ನಂತರ ಪಟ್ಟಾಭಿ ಮೈಸೂರಿಗೆ ಹೋಗಿ ಅನಂತಮೂರ್ತಿಯವರ ಅಚ್ಚುಮೆಚ್ಚಿನ ಎಂ.ಎ. ವಿದ್ಯಾರ್ಥಿ ಆದರು. ಬಿ.ಕಾಂ. ವಿದ್ಯಾರ್ಥಿ ಆಗಿದ್ದ ನಾನು ಸಿ.ಎ. ಮಾಡಲು ಬೆಂಗಳೂರಿಗೆ ಹೋದೆ. ಆದರೆ ಇಂಗ್ಲಿಷ್ ಸಾಹಿತ್ಯ ಮತ್ತು ಯು.ಆರ್.ಎ. ಅವರ ಆಕರ್ಷಣೆ ನನ್ನಲ್ಲಿ ಎಷ್ಟು ಇತ್ತೆಂದರೆ ನಾನು ಸಿ.ಎ.ಯನ್ನು ಅರ್ಧಕ್ಕೆ ಬಿಟ್ಟು ಪಟ್ಟಾಭಿಯ ಸಹಾಯದಿಂದ ಮೈಸೂರಿಗೆ ಹೋಗಿ ಡಿಪ್ಲೋಮಾ ಇನ್ ಇಂಗ್ಲಿಷ್ ಸೇರಿದೆ. ಆಗ ಡಿಪ್ಲೋಮಾಕ್ಕೆ ಸೇರಲು ಸಹಕರಿಸಿದವರು ಯು.ಆರ್.ಎ. ನಂತರ ಎಂ.ಎ.ಯಲ್ಲಿ ನಾನು ಅವರ ನೇರ ವಿದ್ಯಾರ್ಥಿ ಆದೆ. ಅವರು ಪಾಠ ಮಾಡುತ್ತಿದ್ದ ರೀತಿ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಒಮ್ಮೆ ಅವರು 19ನೇ ಶತಮಾನದ ಜೆರಾಲ್ಡ್ ಮ್ಯಾನ್ಲಿ ಹಾಪ್‌ಕಿನ್ಸ್‌ನ 'ವಿಂಡ್ ಹೋವರ್' (Wind Hover) ಪದ್ಯ ಮಾಡುತ್ತಿದ್ದರು. ನಮ್ಮ ಗರುಡನಂತಹ ದೊಡ್ಡ ಸುಂದರವಾದ ಹಕ್ಕಿ ಅದು. ಅದು ಗಾಳಿಯಲ್ಲಿ ನಿರಾಳ ತೇಲುವ ರೀತಿಯನ್ನು ಹಾಪ್‌ಕಿನ್ಸ್ 'ರೈತನೊಬ್ಬ ತನ್ನ ನೇಗಿಲಿನಿಂದ ಹೊಲವನ್ನು ಉಳುತ್ತಾ ಉಳುತ್ತಾ ಆ ಉತ್ತ ಜಾಗವೇ ಪ್ರಕಾಶಿಸುವಂತೆ ಮಾಡುತ್ತಾನೆ' ಎಂದು ಕವಿ ಕೆಲವೇ ಶಬ್ದಗಳಲ್ಲಿ ಸೂಚಿಸುತ್ತಾನೆ ಎಂದು ಹೇಳಿದ ಗುರುಗಳು ಸಂಸ್ಕೃತದಲ್ಲಿ ಪಿಪೀಲಿಕಾ ಮಾರ್ಗ ಮತ್ತು ಶುಕ ಮಾರ್ಗ ಅಂತ ಇದೆ. ವ್ರತ ನಿಯಮಗಳ ವಿಧಾನದ ದಾರಿ ಪಿಪೀಲಿಕಾ (ಇರುವೆಯ) ಮಾರ್ಗ, ಒಮ್ಮೆಗೇ ಗುರಿಯತ್ತ ಹಾರುವ ಮಾರ್ಗ-ಶುಕ=ಗಿಳಿಯದ್ದು ಎಂದು ಹೇಳಿ ಒಮ್ಮೆಗೇ, "ನಮ್ಮ ಕನ್ನಡದ ಅಡಿಗರ ಒಂದು ಕವನದ ಸಾಲಿದೆ 'ಗಾಳಿ ಕಟೆಯಲು ಸೆಟೆದ ಬೆಳ್ಳಿ ಮಂಥು' ಬಿಳಿ ಎದೆಯ ಗರುಡ ಆಕಾಶದಲ್ಲಿ ಹಾರುವಾಗ ಬೆಳ್ಳಿಯ ಮಂಥಿನಂತೆ ಕಾಣುತ್ತದೆ.. ಈ ರೂಪಕ ಎಷ್ಟು ಅದ್ಭುತವಾಗಿದೆಯಲ್ಲಾ!" ಎಂದು ಹೇಳಿದರು. ಅಡಿಗರನ್ನು ಆಗಲೇ ಓದಿಕೊಂಡಿದ್ದ ನನಗೆ ಈ ಹೋಲಿಕೆ ರೋಮಾಂಚನ ಉಂಟುಮಾಡಿತು.

ಅದೇರೀತಿ ಟಿ.ಎಸ್.ಎಲಿಯಟ್‌ನ 'ವೇಸ್ಟ್ ಲ್ಯಾಂಡ್' ಅವರು ನಮಗೆ ಮನಮುಟ್ಟುವಂತೆ ಪಾಠ ಮಾಡಿದ್ದರು. ಏಟ್ಸ್‌ನ ಕವನ 'ಬೈಜಾಂಟಿಯಂ'ನ ಕೊನೆಯ ಭಾಗದಲ್ಲಿ ಬರುವ ಸಾಲು **"Dolphine Tormented Sea"** ಯನ್ನು ಅವರು ಹೀಗೆ ವರ್ಣಿಸಿದ್ದರು- "ಕಾಮೋದ್ದೀಪನಕ್ಕೆ ಒಳಗಾಗಿರುವ ಡಾಲ್ಫಿನ್ ಜೋಡಿಗಳು ಪರಸ್ಪರ ಅಟ್ಟಾಡಿಸುತ್ತಾ ಇಡೀ ಸಮುದ್ರದ ತುಂಬಾ ಓಡಾಡುತ್ತವೆ. ಸ್ವತಃ ಅಲೆಗಳಿರುವ ಸಮುದ್ರವನ್ನೇ ಅಲ್ಲೋಲಕಲ್ಲೋಲಗೊಳಿಸುತ್ತವೆ. ಆದಾಗಲೇ ಮುದುಕನಾಗಿದ್ದ ಏಟ್ಸ್ ಜೀವಿಗಳ ಮೇಲೆ 'ಕಾಮ'ಕ್ಕೆ ಇರುವ ಪ್ರಚಂಡ ಪ್ರಭಾವದ ಬಗ್ಗೆ ಬರೆದ ಸಾಲು ಅದು..." ಇವತ್ತಿಗೂ ಏಟ್ಸ್‌ನ ಈ 'ಬೈಜಾಂಟಿಯಂ' ಮೇಲಿನ ಕವನ ನನ್ನ ಇಷ್ಟದ ಕವನವಾಗಿ ಉಳಿದಿದೆ. ಅದಕ್ಕೆ ಕಾರಣ ಯು.ಆರ್.ಎ. ಅವರು ಅದನ್ನು ಕಣ್ಣಿಗೆ ಕಟ್ಟುವ ಹಾಗೆ ಪಾಠ ಮಾಡಿದ ರೀತಿ. ವರ್ಡ್ಸ್‌ವರ್ತ್, ಬ್ಲೇಕ್‌ರ ಕವನಗಳನ್ನೂ ಅವರು ಅದೇ ರೀತಿ ಅದ್ಭುತವಾಗಿ ಮಾಡಿದ್ದಾರೆ. ಆಲ್ಬರ್ಟ್ ಕಮೂನ ಕಾದಂಬರಿ 'ಫಾಲ್'ನಲ್ಲಿ ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಏಕಕಾಲದಲ್ಲಿ ನ್ಯಾಯಾಧೀಶನೂ, ಅಪರಾಧಿಯೂ, ಕಪಟಿಯೂ ಆಗುವ ಸ್ಥಿತಿಯನ್ನು ಮಾರ್ಮಿಕವಾಗಿ ವಿವರಿಸಿದ್ದರು.



ಆ ಸಮಯದಲ್ಲೇ ಅವರು ತಮ್ಮ 'ಸೂರ್ಯನ ಕುದುರೆ' ನೀಳ್ಗತೆ ಬರೆದದ್ದು. ಅದರ ಬಗ್ಗೆ ಅವರು ತರಗತಿಯಲ್ಲಿ ಚರ್ಚಿಸಿದ್ದರು. ನನ್ನ ಪ್ರಕಾರ ಅದು ಅವರ ಅತ್ಯುತ್ತಮ ಕತೆ. ಒಂದು ಕಥಾವಸ್ತುವಿಗೆ ಸಂಬಂಧಪಟ್ಟ ಎಲ್ಲಾ ಮಗ್ಗುಲುಗಳನ್ನು ಶೋಧಿಸುತ್ತಾ ಆಳಆಳಕ್ಕೆ ವಿಸ್ತಾರ ವಿಸ್ತಾರಕ್ಕೆ ಚಾಚುತ್ತಾ ಘನಗಂಭೀರವಾಗಿ ಸಾಗುವ ಅವರ ಕಥನ ಕ್ರಮ ನನಗೆ ಅಚ್ಚುಮೆಚ್ಚು.

ಮೈಸೂರಿನಲ್ಲಿ ಎಂ.ಎ. ಮಾಡುತ್ತಿರುವಾಗಲೇ ಪಟ್ಟಾಭಿರಾಮ ಸೋಮಯಾಜಿಯ ಜತೆಗೆ ನಾನು ತೊಣಚಿಕೊಪ್ಪಲು ಬಡಾವಣೆಯಲ್ಲಿದ್ದ ಅವರ ಮನೆಗೆ ಹೋಗುತ್ತಿದ್ದೆ. ಮನೆಯ ಹೆಸರು 'ಅಭಯ'. ಆದರೆ ಮನೆಯ ಗೇಟು ತೆಗೆಯುತ್ತಿದ್ದಂತೆಯೇ ದೊಡ್ಡದೊಂದು ನಾಯಿ ಬೊಗಳುತ್ತಾ ನಮ್ಮತ್ತ ಓಡಿ ಬರುತ್ತಿತ್ತು, ಅದು ಅವರ ಜರ್ಮನ್ ಶೆಫರ್ಡ್ ನಾಯಿ ರೂಬಿ. ಮೊದಲಿಗೆ ಅದು

ತೀರ್ಥಹಳ್ಳಿ ಆಗುಹೋಗುಗಳ ಜೊತೆ ಅನಂತಮೂರ್ತಿ




ಅನಂತಮೂರ್ತಿ ಈ ಕಾಲಘಟ್ಟದ ಎಲ್ಲ ಬರಹಗಾರರಿಗಿಂತ ವಿಭಿನ್ನ. ಒಬ್ಬ ಬರಹಗಾರ ತನ್ನ ದೇಹ ಮತ್ತು ಮನಸ್ಸು ಎರಡಕ್ಕೂ ಕೆಲಸ ಕೊಟ್ಟಾಗ ಮಾತ್ರ ನಿಜವಾಗಲೂ ಸಂವೇದನಾಶೀಲನಾಗುತ್ತಾನೆ. ಅನ್ಯಾಯ ಅಕ್ರಮಗಳು ಆಳುವ ವರ್ಗದಿಂದ ನಡೆವಾಗ ತಿಳಿದೂ ತಿಳಿದೂ ಅದನ್ನು ಪ್ರತಿಭಟಿಸುವುದಿರಲಿ, ಸರ್ಕಾರ ಕೊಡುವ ಪುರಸ್ಕಾರಗಳಿಗೆ ಕೈಒಡ್ಡುವ ಸಾಹಿತಿಗಳೇ ಅಧಿಕವಾಗಿರುವ ಈಗಿನ ಸಂದರ್ಭದಲ್ಲಿ ಅನಂತಮೂರ್ತಿ ಜಾತ್ಯತೀತ ತತ್ವದ ರಕ್ಷಣೆಯ ಜವಾಬ್ದಾರಿಯನ್ನು ಹೆಗಲ ಮೇಲೆ ಹೊತ್ತವರಂತೆ ಭಿನ್ನರಾಗಿರುತ್ತಾರೆ. ಅದಕ್ಕಾಗಿ ಅಭಿಪ್ರಾಯ ರೂಪಿಸುತ್ತಾರೆ.

ತಮ್ಮ ಹುಟ್ಟೂರು ತೀರ್ಥಹಳ್ಳಿಯಲ್ಲಿ 'ತುಂಗಾ ಮೂಲ ಉಳಿಸಿ ಚಳವಳಿ'ಯನ್ನು ಜನರ ಚಳವಳಿಯನ್ನಾಗಿಸಲು ಅನಂತಮೂರ್ತಿಯವರು ತೆಗೆದುಕೊಂಡ ಶ್ರಮ ಹಾಗೂ ಅದನ್ನು ಯಶಸ್ವಿಗೊಳಿಸಿದ ರೀತಿ ಎಲ್ಲ ಜನಪರ ಚಳವಳಿಗಾರರಿಗೂ ಮಾದರಿಯಾಗಬೇಕು. ವಿದ್ಯಾರ್ಥಿದೆಸೆಯಿಂದಲೂ ರೈತ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ನನಗೆ ಈ ಕಾಲಘಟ್ಟದ ದಲಿತ ಹಾಗೂ ರೈತ ಚಳವಳಿಗಳು ಮಂಕಾಗಿ ಸೊರಗಲು ಹಾಗೂ ಕರಗಲು ಅವುಗಳನ್ನು ಮುನ್ನಡೆಸುವ ನಾಯಕರಲ್ಲಿರುವ ತಾಂತ್ರಿಕ ಸಮಸ್ಯೆ ಎನಿಸುತ್ತದೆ. ಯಾಕೆಂದರೆ 'ತುಂಗಾ ಮೂಲ ಉಳಿಸಿ ಚಳವಳಿ'ಯು ಕೇವಲ ಪರಿಸರಾಸಕ್ತ ಬುದ್ಧಿಜೀವಿಗಳ ಹಪಹಪಿಕೆಯಾಗದೆ ಅದು ಇಡೀ ತುಂಗಾತೀರದ ಎಲ್ಲ ಜನರ ಚಳವಳಿಯಾಗಿ ಅನಂತಮೂರ್ತಿ ಮಾರ್ಪಡಿಸಿದರು. ಆಗ ಅವರು ತೀರ್ಥಹಳ್ಳಿಯ ಪ್ರತಿ ಮನೆ ಅಂಗಡಿಗಳ ಹತ್ತಿರಹೋಗಿ ತುಂಗೆ ಉಳಿಸಬೇಕಾದ ಅನಿವಾರ್ಯತೆಯನ್ನು ಮನ ಮುಟ್ಟುವಂತೆ ವಿವರಿಸಿದ ರೀತಿ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

ಜಡ್ಡುಗಟ್ಟಿ ಹೋಗಿದ್ದ ತೀರ್ಥಹಳ್ಳಿಯ ಹೋರಾಟದ ಇತಿಹಾಸದಲ್ಲಿ 'ತುಂಗಾ ಮೂಲ ಉಳಿಸಿ ಚಳವಳಿ' ದಾಖಲಾರ್ಹ. ಆ ಚಳವಳಿಯ ಭಾಗವಾಗಿ ಇಡೀ ಶಿವಮೊಗ್ಗ ಜಿಲ್ಲೆಯ ಪ್ರತಿ ಹಳ್ಳಿಯೂ ಬಂದ್ ಆಚರಿಸಿತ್ತು, ಅಲ್ಲದೆ ಅಂಗಡಿ ಮುಂಗಟ್ಟುಗಳಲ್ಲಿ ಕುಳಿತವರೆಲ್ಲ ಕುದುರೆಮುಖ ಗಣಿಗಾರಿಕೆಯಿಂದ ಆಗುತ್ತಿರುವ ಅನಾಹುತಗಳ ಬಗ್ಗೆ ಮಾತಾಡಹತ್ತಿದರು. ರೈತರು, ಮೀನುಗಾರರು, ಪಂಪ್ಸೆಟ್ ಬಳಕೆದಾರರು, ನೀರಾವರಿ ರೈತರು, ಎಲ್ಲರಲ್ಲೂ ತುಂಗಾ ನದಿ ಎಂಬುದು ನಮ್ಮ ಬದುಕಿನ ಅವಿಭಾಜ್ಯ ಅಂಗ ಎಂಬ ಪ್ರಜ್ಞೆ ಬರುವಂತೆ ಮಾಡುವಲ್ಲಿ ಈ ಚಳವಳಿ ಯಶಸ್ವಿಯಾಯಿತು.

ವಿಯೆಟ್ನಾಂ ಮೇಲೆ ಅಮೆರಿಕಾ ನಿರ್ದಯವಾಗಿ ದಾಳಿ ನಡೆಸುತ್ತಿದ್ದಾಗ, ಅಲ್ಲಿಯ ಅಭೇದ್ಯ ಅರಣ್ಯ ತಮ್ಮ ಸೈನಿಕರ ಪಾಲಿಗೆ ಮುಳ್ಳಾಗುತ್ತಿರುಗುವುದನ್ನು ಮನಗಂಡು ಕಾಡು ನಾಶಮಾಡಲು ವಿಷಪೂರಿತ ರಾಸಾಯನಿಕಗಳನ್ನು ಸಿಂಪಡಿಸುತ್ತಾ ಕೈಗೆ ಸಿಕ್ಕ ನಾಗರಿಕರನ್ನು ಸುಡುತ್ತಾ ಸಾಗುತ್ತಿದ್ದ ಅಮೆರಿಕಾದ ನೀತಿಯನ್ನು ಪ್ರತಿಭಟಿಸಿ ಐರೋಪ್ಯ ಬುದ್ಧಿಜೀವಿಗಳಾರೂ ಸೊಲ್ಲೆತ್ತದಿದ್ದಾಗ ಬರ್ಟ್ರೆಂಡ್ ರಸೆಲ್ ಅಮೆರಿಕಾದ ಯುದ್ಧದಾಹದ ವಿರುದ್ಧ ಧ್ವನಿ ಎತ್ತಿದ್ದನ್ನು ಮರೆಯಲಾದೀತೆ? ತನ್ನ ಜೀವಿತದ ಕೊನೆಯ ಕಾಲದಲ್ಲಿ ಲಂಡನ್‌ನ ಥೇಮ್ಸ್ ನದಿ ದಂಡೆಯ ಗುಂಟ ಅಮೆರಿಕಾ ವಿರುದ್ಧ ಹೋರಾಡಿ ಅಭಿಪ್ರಾಯ ಕ್ರೋಢೀಕರಿಸಿದ್ದನ್ನು ಕರ್ನಾಟಕದ ಸಂದರ್ಭವನ್ನಿಟ್ಟುಕೊಂಡು ಪುನಃಸ್ಥಾಪಿಸಬೇಕಾದ್ದು ಇಂದಿನ ಅಗತ್ಯ. ಏಕೆಂದರೆ ಇಂದಿನ ವಿಶ್ವವಿದ್ಯಾಲಯದ ಬುದ್ಧಿಜೀವಿಗಳ ಮೇಲೆ ಪ್ರಮುಖವಾಗಿ ಇರುವ ಆರೋಪವೆಂದರೆ ಇವರೆಲ್ಲ ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಪಂಚೇಂದ್ರಿಯಗಳನ್ನೇ ಕಳಕೊಂಡಿದ್ದಾರೆ ಎಂಬುದು. ಆದರೆ ಅನಂತಮೂರ್ತಿಯವರು ಹಾಗಲ್ಲ, ಅವರು ಇಂದು ಮೋದಿಯ ವಿರುದ್ಧ ಮಾತಾಡಬಹುದು. ಇಕ್ಕಟ್ಟಿಗೂ ಸಿಲುಕಬಹುದು. ಈ ವಯಸ್ಸಲ್ಲೂ ಅವರು ಸಮಕಾಲೀನ ಬದಲಾವಣೆಗಳಿಗೆ ಸ್ಪಂದಿಸುವ ರೀತಿ ಇಡೀ ಇಂಡಿಯಾಗೆ ಮಾದರಿಯಾದದ್ದೆ.

ಇಂದಿರಾ ಗಾಂಧಿಯವರ ಹತ್ಯೆಯ ಅಲೆಯಲ್ಲಿ ಇಡೀ ದೇಶ ರಾಜೀವ್ ಗಾಂಧಿಯವರ ಕೈಗೆ ಹೋಗಿತ್ತು, ಸಂಸತ್ತಿನಲ್ಲಿ 400 ಕ್ಕೂ ಹೆಚ್ಚು ಸೀಟುಗಳನ್ನು ಪಡೆದು ಇನ್ನಾರೂ ಕಾಂಗ್ರೆಸ್ ವಿರುದ್ಧ ಸೊಲ್ಲೆತ್ತದಂತೆ ರಾಜೀವ್ ಗಾಂಧಿ ಮಾಡಿದ್ದರು. ಆಗ ಕರ್ನಾಟಕದಲ್ಲಿ ಅಧಿಕಾರದಲ್ಲಿದ್ದ ರಾಮಕೃಷ್ಣ ಹೆಗಡೆಯವರ ಎರಡು ವರ್ಷಗಳ ಆಳ್ವಿಕೆ ಲೋಕಸಭಾ ಚುನಾವಣೆಯಲ್ಲಿ 28 ಕ್ಷೇತ್ರಗಳ ಪೈಕಿ ಕೇವಲ ನಾಲ್ಕು ಸೀಟುಗಳನ್ನು ಪಡೆದು ಫಜೀತಿಗೆ ಸಿಕ್ಕಿಬಿದ್ದಿತು. ಆಗ ವಿಧಾನಸಭೆಯನ್ನು ವಿಸರ್ಜಿಸಿದ ರಾಮಕೃಷ್ಣ ಹೆಗಡೆಯವರು ಮತ್ತೆ ಜನರ ಬಳಿ ಹೋಗುವ ನಿರ್ಧಾರ ಮಾಡಿದರು. ಹಿಂದಿನ ಅಂದರೆ 1983ರ ವಿಧಾನಸಭಾ ಚುನಾವಣೆಯಲ್ಲಿ 18 ಸೀಟುಗಳನ್ನು ಪಡೆದಿದ್ದ ಬಜೆಪಿ ರಾಮಕೃಷ್ಣ ಹೆಗಡೆಯವರ ಸರ್ಕಾರಕ್ಕೆ ಬೆಂಬಲ ನೀಡಿತ್ತು. ಆ ಬೆಂಬಲದ



ನೆಪದಲ್ಲಿ ಅನೇಕ ರೀತಿಯ ಬ್ಲಾಕ್ ಮೇಲ್ ಕೂಡ ಬಿಜೆಪಿ ಮಾಡಿದ್ದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಆದರೆ ಮತ್ತೊಮ್ಮೆ ಚುನಾವಣೆ ಎದುರಿಸುವಾಗ ಬಿಜೆಪಿ ಗೋಗರೆದರೂ ಅದರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೆ ಚುನಾವಣೆ ಎದುರಿಸಿದ್ದರ ಫಲವಾಗಿ ಜನತಾ ಪಕ್ಷ 137 ಸ್ಥಾನಗಳನ್ನು ಗೆದ್ದು ಹೆಗಡೆ ನೇತೃತ್ವದ ಜನತಾ ಪಕ್ಷ ಸ್ಪಷ್ಟ ಬಹುಮತ ಪಡೆಯಿತು. ಬಿಜೆಪಿ ಕೇವಲ ಎರಡು ವಿಧಾನಸಭಾ ಸ್ಥಾನಗಳಿಗೆ ತೃಪ್ತಿ ಪಟ್ಟುಕೊಳ್ಳಬೇಕಾಯ್ತು. ಬಿಜೆಪಿಯೊಂದಿಗೆ ಹೊಂದಾಣಿಕೆಯಾಗದಂತೆ ಪಟ್ಟು ಹಿಡಿದು ತಡೆದದ್ದರಲ್ಲಿ ಅನಂತಮೂರ್ತಿ ಮತ್ತು ದಿವಂಗತ ಜೆ.ಹೆಚ್.ಪಟೇಲರ ಪಾತ್ರ ಉಲ್ಲೇಖನೀಯ. ಆ ಚುನಾವಣೆಯಲ್ಲಿ ಜನತಾ ಪಕ್ಷದ ಪರ ಅನಂತಮೂರ್ತಿಯವರು ಕಾಲಿಗೆ ಚಕ್ರ ಕಟ್ಟಿಕೊಂಡು ಓಡಾಡಿದ್ದು ಜನರ ಮನಸ್ಸಿಂದ ಮಾಸದ ವಿಚಾರ. ಯಾರು ಏನೇ ಟೀಕೆ ಮಾಡಿದರೂ ತಾನು ಹೇಳಬೇಕಾದನ್ನು ನವಿರಾದ ಸರಳವಾದ ಭಾಷೆಯಲ್ಲಿ ಹೇಳುವ ಕಲೆ ಅನಂತಮೂರ್ತಿಯವರಿಗೆ ಸಿದ್ಧಿಸಿದಂತೆ ಬೇರಾರಿಗೂ ಸಿದ್ಧಿಸಿಲ್ಲ ಎಂಬ ಸತ್ಯವನ್ನು ಅವರ ವಿರೋಧಿಗಳೂ ಒಪ್ಪಿಕೊಳ್ಳುತ್ತಾರೆ.

ಒಮ್ಮೆ ನನ್ನ ಪತ್ರಿಕೆಯಲ್ಲಿ ಅನಂತಮೂರ್ತಿಯವರ ಬಗ್ಗೆ ಕೆಲವೊಂದು ಆಕ್ಷೇಪಾರ್ಹ ವಿಷಯಗಳನ್ನು ಬರೆದಿದ್ದೆ. ಇದರಿಂದ ಅವರಿಗೆ ಸಿಟ್ಟಾಗಿ "ನಿನ್ನ ಪತ್ರಿಕೆಯೇ ಬೇಡ" ಎಂದು ಕಾಗದ ಬರೆದದ್ದೇ ಅಲ್ಲದೆ, ಪತ್ರಿಕೆಯ ಬಾಬ್ತಿನ ಹಣವನ್ನೂ ಕಳುಹಿಸಿದ್ದರು. ಆದರೆ ನಾನು ಹಣ ಸ್ವೀಕರಿಸದೆ


ನ್ನನ್ನು ಹೆದರಿಸಿದರೂ ನಂತರ ಗೆಳೆತನ ಬೆಳೆಸಿಕೊಂಡು ಹಿಂದೆಹಿಂದೆಯೇ ರುತ್ತಿತ್ತು. ಇನ್ನೊಂದು ಕಂತ್ರಿ ನಾಯಿ 'ಪ್ಲುಟೋ' ಅಲ್ಲಿತ್ತು. ರೂಬಿ ಮನೆಯ ಂಪೌಂಡ್ ಒಳಗೇ ಇರುತ್ತಿದ್ದರೆ ಈ ಪ್ಲುಟೋ ಊರೆಲ್ಲಾ ತಿರುಗಿಕೊಂಡು ರುತ್ತಿತ್ತು. ಅನಂತಮೂರ್ತಿಯವರ ಮಗಳು ಅನುರಾಧಾಗೆ ಈ ಪ್ಲುಟೋ ಂದರೆ ಬಹಳ ಇಷ್ಟವಿತ್ತು ಎಂದು ಪದ್ಮನಾಭ ಹೇಳುತ್ತಿದ್ದ.

ಎಂ.ಎ. ಮುಗಿದನಂತರವೂ ಗುರುಗಳ ಜತೆಗಿನ ನನ್ನ ನಂಟು ಮುಂದುವರಿದಿದೆ. ನಮಗೆಲ್ಲಾ ಅನಂತಮೂರ್ತಿಯವರ ಶಿಷ್ಯರು ಎಂದು ೇಳಿಕೊಳ್ಳಲು ತುಂಬಾ ಹೆಮ್ಮೆ. ನಾವು ನಮ್ಮ ಸಾಂಸಾರಿಕ ಕಷ್ಟಸುಖಗಳನ್ನೂ ವರ ಜತೆ ಹೇಳಿಕೊಳ್ಳುತ್ತಿರುತ್ತೇವೆ. ಸ್ವಲ್ಪವೂ ಬಿಗುಮಾನವಿಲ್ಲದೆ ಅವರು ನ್ನಂತಹ ಶಿಷ್ಯರ ಜತೆಗೆ ವ್ಯವಹರಿಸುತ್ತಾರೆ. ನನಗೆ ಡಾಕ್ಟೊರೇಟ್ ಆದಾಗ ತ್ಪೂರ್ವಕ ಅಭಿನಂದಿಸಿದವರು ಯು.ಆರ್.ಎ. ವಾಸ್ತವವಾಗಿ ನನ್ನ ಪಿಎಚ್.ಡಿ.ಗೆ ಕೆ.ಯ 'ನೋಟ್‌ಬುಕ್' ಮತ್ತು ಜೀನ್‌ಪಾಲ್ ಸಾರ್ತ್ರೆಯ 'ನಾಜಿಯಾ' ಾದಂಬರಿಗಳ ತೌಲನಿಕ ಅಧ್ಯಯನ ಮಾಡು ಎಂದು ಸೂಚಿಸಿ, ಒಳನೋಟ ಡಿದವರೇ ಯು.ಆರ್.ಎ.

ಸಾಹಿತಿಯಾದವರು ಸಾಮಾಜಿಕ ಉಪದ್ವ್ಯಾಪಗಳಿಂದ ದೂರ ಂತಗೋಪುರದಲ್ಲಿ ಇರಬೇಕೆನ್ನುವ ನಿಲುವಿನವರಲ್ಲ ಯು.ಆರ್.ಎ. ಸಾಹಿತಿಯೂ ಮಾಜಜೀವಿ. ಸಮಾಜದ ಆಗುಹೋಗುಗಳಿಗೆಲ್ಲಾ ಜವಾಬ್ದಾರಿಯುತವಾಗಿ ತಿಸ್ಪಂದಿಸುತ್ತಿರಬೇಕೆಂದು ನಂಬಿದ; ಆ ಪ್ರಕಾರ ಬದುಕುತ್ತಿರುವ ಜನಪರ ೇಖಕ ಯು.ಆರ್.ಎ. ಆ ಕಾರಣಕ್ಕಾಗಿಯೇ ಅವರು ತುಂಬಾ ಟೀಕೆಗೆ ಮತ್ತು ಆಕ್ರಮಣಕ್ಕೆ ಒಳಗಾಗಿದ್ದಾರೆ / ಆಗುತ್ತಿದ್ದಾರೆ. ಬಲಪಂಥೀಯ ಪಕ್ಷಗಳು ಮತ್ತು ಸುದ್ದಿ ಮಾಧ್ಯಮಗಳಂತೂ ಅವರ ವಿರುದ್ಧ ವ್ಯವಸ್ಥಿತ ಅಪಪ್ರಚಾರವನ್ನೇ ಡೆಸುತ್ತಿವೆ.

ಆದರೂ ಎದೆಗುಂದದೆ ತನ್ನ ಸಾಮಾಜಿಕ ಜವಾಬ್ದಾರಿಯನ್ನು ಸಮರ್ಪಕವಾಗಿ ರ್ವಹಿಸುತ್ತಿದ್ದಾರೆ ಎಂಭತ್ತೆರಡರ ಹರೆಯದ ತನ್ನ ಗುರು ಅನಂತಮೂರ್ತಿಯವರು. ನಗೆ ಪ್ರಾಮಾಣಿಕವಾಗಿ ಅನ್ನಿಸಿದ್ದನ್ನು ಧೈರ್ಯದಿಂದ ಅಭಿವ್ಯಕ್ತಗೊಳಿಸುತ್ತಿರುವ ಸಾಮಾಜಿಕ ಬದ್ಧತೆಯ ಲೇಖಕ ಯು.ಆರ್. ಅನಂತಮೂರ್ತಿಯವರು.

ನನ್ನಂತಹ ನೂರಾರು ವಿದ್ಯಾರ್ಥಿಗಳಿಗೆ ಕವನ, ಕತೆ, ಕಾದಂಬರಿಗಳನ್ನು ಗೆ ವಿಮರ್ಶಿಸಬೇಕು ಮತ್ತು ರಸಸ್ವಾದ ಮಾಡಬೇಕೆಂದು ಕಲಿಸಿದವರು ು.ಆರ್.ಎ. ಜನಪರ ನಿಲುವನ್ನು ಯಾವತ್ತೂ ಬಿಟ್ಟುಕೊಡಬಾರದೆಂಬ ಸ್ಥೈರ್ಯವನ್ನು ಬೋಧಿಸಿದ ಗುರುಗಳು. ನಮ್ಮ ಸಂವೇದನೆಯನ್ನು



ಸೂಕ್ಷ್ಮವಾಗಿಸಿದವರು.

ಅವರ ಈ 81ನೇ ವರ್ಷದ ಹುಟ್ಟುಹಬ್ಬಕ್ಕೆ ವಿದ್ಯಾರ್ಥಿಗಳೆಲ್ಲರ ಹೃತ್ಪೂರ್ವಕ ಶುಭಾಶಯಗಳು.

ಅವರು ನೂರು ವರ್ಷ ಅರ್ಥಪೂರ್ಣವಾಗಿ, ಆರೋಗ್ಯವಂತರಾಗಿ ಬಾಳಬೇಕೆಂಬುದು ನಮ್ಮೆಲ್ಲರ ಆಶಯ.

● ಡಾ. ಹಯವದನ ಮೂಡುಸಗ್ರಿ


ನ್ನೂರಿನವರು ಎಂಬ ಅಭಿಮಾನದ ಆಧಾರದ ಮೇಲೆ ಪತ್ರಿಕೆ ರಿಹಿಸುತ್ತಿರುವುದರ ಹಿಂದಿನ ಅರ್ಥಗಳನ್ನು ಹೇಳಿ ಚೆಕ್ಕನ್ನು ಹಿಂದಿರುಗಿಸಿದ್ದೆ. ಅಂದೇನೋ ಬರೆದ ಹುಮ್ಮಸ್ಸಿನಲ್ಲಿದ್ದೆ. ಆದರೆ ಈಗಿನ ಸನ್ನಿವೇಶದಲ್ಲಿ ನಂತಮೂರ್ತಿಯವರ ವಿರುದ್ಧ ಆಕ್ಷೇಪಾರ್ಹವಾಗಿ ಬರೆದದ್ದನ್ನು ನೆನಪಿಸಿಕೊಂಡರೆ ನ್ನ ಅಪಕ್ವತೆಯ ಬಗ್ಗೆ ನನಗೇ ನಾಚಿಕೆ ಎನಿಸುತ್ತದೆ. ಈ ಘಟನೆಯಾದ ಸ್ವಲ್ಪ ಮಯದಲ್ಲಿ ಅನಂತಮೂರ್ತಿಯವರು ಹೃದಯದ ತೊಂದರೆಗಾಗಿ ಬೆಂಗಳೂರಿನ ಾರಾಯಣ ಹೃದಯಾಲಯದಲ್ಲಿ ಸೇರ್ಪಡೆಯಾಗಿದ್ದರು. ಅವರನ್ನು ನೋಡಲು ೋಗುವಾಗ ಹಳೆಯದನ್ನು ಜ್ಞಾಪಿಸುವ ಸಾಧ್ಯತೆ ಬಗ್ಗೆ ಯೋಚಿಸಿದೆ. ಆದರೆ ಗಾಗಲಿಲ್ಲ. ಏನೂ ನಡೆದೇ ಇಲ್ಲವೆಂಬ ರೀತಿಯಲ್ಲಿ ಅವರು ನಡೆಸಿಕೊಂಡರು. ಮ್ಮ ಊರಿನಿಂದ ಬಂದವನೊಬ್ಬನನ್ನು ವಿಚಾರಿಸುವಂತೆಯೇ ವಿಚಾರಿಸಿದರು; ಾವ ಕಲ್ಮಶಗಳೂ ಅವರಲ್ಲಿ ಇರಲಿಲ್ಲ, ಅಲ್ಲದೆ ಅಷ್ಟು ದೂರದಿಂದ ಬಂದದ್ದಕ್ಕೆ ನ್ನೇ ಉಪಚರಿಸಿದರು.

ತೀರ್ಥಹಳ್ಳಿ ಸುತ್ತಮುತ್ತಲಿನ ಅವರ ಜೊತೆಗಾರರನೇಕರು ಈ ಒಂದೈದಾರು ರ್ಷಗಳಲ್ಲಿ ನಮ್ಮನ್ನಗಲಿದ್ದಾರೆ. ಈ ಹಿಂದೆ ಅಂಥವರಿಂದ ಅನಂತಮೂರ್ತಿರವರು ರ್ಥಹಳ್ಳಿಯ ಅನೇಕ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು. ಅಂತವರಲ್ಲಿ ಾಜವಾದಿ ಶಂಕರನಾರಾಯಣಭಟ್, ಇತ್ತೀಚೆಗೆ ನಿಧನರಾದ ಪ್ರೊ. ಗಂಗಾಧರ್ ರಿದ್ದರು. ತಾವು ಎಲ್ಲೇ ಇದ್ದರೂ, ತೀರ್ಥಹಳ್ಳಿಯಲ್ಲಿ ನಡೆಯುತ್ತಿರುವ ವಲಾವಣೆಗಳ ತಿಳಿದುಕೊಳ್ಳಬೇಕೆಂಬ ಕುತೂಹಲವನ್ನು ಅನಂತಮೂರ್ತಿ ದುಕೊಳ್ಳದೆ ಗ್ರಹಿಸುತ್ತಿದ್ದರು.

ತೀರ್ಥಹಳ್ಳಿಯ ಬಗೆಗೆ ಅನಂತಮೂರ್ತಿಯವರ ವ್ಯಾಮೋಹ ತುಂಬಾ ಸ್ತಿಯೇ. ಅನಾರೋಗ್ಯಪೀಡಿತರಾಗುವ ಮುನ್ನ ಅನೇಕ ಸಾರಿ ರ್ಥಹಳ್ಳಿಯಿಂದಲೇ ರಾಜ್ಯದ ಒಟ್ಟು ಸಾಮಾಜಿಕ ರಾಜಕೀಯ ವಿದ್ಯಮಾನಗಳಿಗೆ ಮುಟ್ಟಿಸುವ ಮಾತುಕತೆಯಾದದ್ದೂ ಇದೆ.


ತೀರ್ಥಹಳ್ಳಿಯಲ್ಲಿ ರಾಜಕಾರಣ ಹಾಳಾದರೆ, ಇಲ್ಲಿ ನಡೆವ ಚುನಾವಣೆಗಳು ತೀಯತೆಯ ತಿರುವು ಪಡೆದರೆ, ಹಣ ಹೆಂಡ ರಾರಾಜಿಸಿದರೆ ಇಡೀ ಜ್ಯವೇ ಪರಿತಪಿಸಬೇಕಾಗುತ್ತದೆ ಎಂಬ ಅಭಿಪ್ರಾಯ ಅನಂತಮೂರ್ತಿಯವರದ್ದು. ಂದರೆ ತೀರ್ಥಹಳ್ಳಿ ಇಲ್ಲಿಯವರೆಗೆ ಪ್ರಜಾಸತ್ತಾತ್ಮಕತೆಯ ಶ್ರೇಷ್ಠತೆಗೆ ಹೆಸರಾಗಿದೆ. ಹೆಸರು ಹಾಳಾಗಲು ಬಿಡಬಾರದು ಎಂಬುದು ಅವರ ಖಚಿತ ನಿಲುವು.

ಈ ಕಾರಣದಿಂದಲೇ ಕಳೆದ ವಿಧಾನಸಭಾ ಚುನಾವಣೆ ಹಳಿತಪ್ಪುತ್ತಿದೆ ದು ಗೊತ್ತಾಗುತ್ತಲೆ ಅದನ್ನು ತಡೆಯಲು ಅವರು ತಮ್ಮ ಶಿಷ್ಯರ ಜೊತೆ




ಸಂಪರ್ಕ ಸಾಧಿಸಿದ್ದು ಇನ್ನು ಹಸಿರಾಗಿರುವ ಸಂಗತಿ. ನಂತರ ಚುನಾವಣಾ ಫಲಿತಾಂಶ ಹೊರಬಿದ್ದಾಗ 'ತೀರ್ಥಹಳ್ಳಿಯ ಮಸ್ಕೃತಿಗೆ ತಕ್ಕುದಾಗಿದೆ' ಎಂದು ಅನಂತಮೂರ್ತಿ ಖುಷಿ ಪಟ್ಟಿದ್ದನ್ನು ಅವರ ಸಹಪಾಠಿಗಳು ಸಂತೋಷದಿಂದ ಮೆಲುಕು ಹಾಕುತ್ತಾರೆ.

● ನೆಂಪೆ ದೇವರಾಜ್
ತೀರ್ಥಹಳ್ಳಿ



ಅನಂತಮೂರ್ತಿ ಹಿಂಸೆಯನ್ನು ಎದುರಿಸುವ ಬಗೆ

ಮೋದಿ ಪ್ರಧಾನಿಯಾಗಿರುವ ಭಾರತದಲ್ಲಿ ತಾನು ಇರಬಯಸುವುದಿಲ್ಲ ಎಂದು ಇತ್ತೀಚೆಗೆ ಅನಂತಮೂರ್ತಿ ಹೇಳಿದಾಗ, ಬಿಜೆಪಿಯ ಲೌಡ್ ಸ್ಪೀಕರ್‌ನ ಹಾಗಿರುವ ಕನ್ನಡದ ಎರಡು ಪತ್ರಿಕೆಗಳು ಅವರ ವಿರುದ್ಧ ಅಪಪ್ರಚಾರದ ಅಸ್ತ್ರವನ್ನೇ ಪ್ರಯೋಜಿಸಿದವು. ಅನಂತಮೂರ್ತಿಯವರ ಯಾವ ಕೃತಿಯನ್ನೂ ಓದದವರು ಕೂಡ ಅವರನ್ನು ತರಾಟೆಗೆ ತೆಗೆದುಕೊಂಡರು. ಮಹಾನುಭಾವರೊಬ್ಬರು 'ಸಾಹಿತಿಗಳು ಸಾಹಿತ್ಯ ಬಿಟ್ಟು ಬೇರೆ ವಿಷಯದಲ್ಲಿ ಯಾಕೆ ತಲೆ ಹಾಕಬೇಕು?' ಎಂದು ಪ್ರಶ್ನಿಸಿದರು. ಅವರದ್ದು ತಲೆತಿರುಕತನದ ಮಾತು ಎಂದು ತಳ್ಳಿ ಹಾಕುವಂತಿಲ್ಲ. ಸಾಹಿತ್ಯದ ರಸಿಕರಲ್ಲಿಯೂ ಸಾಕಷ್ಟು ಮಂದಿ ಹಾಗೇ ಭಾವಿಸುವವರು. ಅವರ ಪ್ರಕಾರ ಸಾಹಿತ್ಯವೆನ್ನುವುದು




ರುಚಿರುಚಿಯಾದ ಅಡುಗೆಯ ಹಾಗೆ ಒಂದು 'ರಸಪಾಕ'. ರಾಜಕೀಯದಂತಹ ಕ್ಷುಲ್ಲಕ ಸಂಗತಿಗಳ ಬಗ್ಗೆ ಸಾಹಿತಿ ತಲೆಕೆಡಿಸಿಕೊಳ್ಳಕೂಡದು. ಇನ್ನು ಕೆಲವು ರಸಿಕರ ಪಾಲಿಗೆ ರಾಜಕೀಯ ಕ್ಷೌರದಂಗಡಿಯಲ್ಲಿ ಮಾತ್ರ ಮಾತನಾಡಲು ಯೋಗ್ಯವಾದ ತತ್ಕಾಲೀನ ಸಂಗತಿ; ಅವರಾದರೋ "ಶಾಶ್ವತಸತ್ಯ"ದ ಉಪಾಸಕರು. ಅಂತಹವರಿಗೂ ಅನಂತಮೂರ್ತಿ ಮೋದಿ ಬಗ್ಗೆ ಹೇಳಿದ್ದು ಅಪಥ್ಯವಾಗಿ ಕಂಡಿದೆ. ಆದರೆ ಮೋದಿಯ ಭಾರತದಲ್ಲಿ ತಾನಿರಲಾರೆ ಎಂಬ ಮಾತು ಕೇವಲ ಸದ್ಯದ ರಾಜಕೀಯದ ಕುರಿತು, ಲೇಖಕರೊಬ್ಬರು ಆಡಿದ ಹಾರಿಕೆಯ ಮಾತಲ್ಲ. ಮೋದಿ ಕಟ್ಟಲು ಹೊರಟಿರುವ ಭಾರತದ ಪರಿಕಲ್ಪನೆಯನ್ನೇ ಅನಂತಮೂರ್ತಿ ತನ್ನ ಆ ಮಾತಿನ ಮುಖಾಂತರ ತಿರಸ್ಕರಿಸಿದ್ದರು. ಮೋದಿ, ಅವರ ಮಟ್ಟಿಗೆ ಕೇವಲ ರಾಜಕಾರಣಿಯಲ್ಲ. ಆತ ಅಭಿವೃದ್ಧಿ ಮತ್ತು ರಾಷ್ಟ್ರಪ್ರಭುತ್ವಗಳ ಕುರಿತು ದೇಶದಲ್ಲಿ ಈಗ ಚಾಲ್ತಿಯಲ್ಲಿರುವ ವಿಚಾರಗಳ ಒಂದು ಸಾಕಾರ ಸ್ವರೂಪ. ಮೋದಿಯ ಜನಪ್ರಿಯತೆಯ ಗುಟ್ಟು ಕೂಡ ಅದೇ.

ಮೋದಿ ಮುಖ್ಯಮಂತ್ರಿಯಾಗಿ ಗುಜರಾತ್‌ನಲ್ಲಿ ಸಾಧಿಸಿರುವ ಅಭಿವೃದ್ಧಿಯ ಕುರಿತು ಅವನ ಅಭಿಮಾನಿಗಳು ಹೇಳುವುದೆಲ್ಲವೂ ನಿಜ ಎಂದೇ ಭಾವಿಸಿದರೂ ಆ ಅಭಿವೃದ್ಧಿಯ ಮಾದರಿ, ಭಾರತದ ಇತರ ರಾಜ್ಯಗಳ ಅಭಿವೃದ್ಧಿ ಯೋಜನೆಗಳಿಗಿಂತ ಭಿನ್ನವಾದದ್ದೇನೂ ಅಲ್ಲ. ಸ್ವಾತಂತ್ರ್ಯಾನಂತರ ಭಾರತದ ಕೋಟ್ಯಾಂತರ ಆದಿವಾಸಿಗಳನ್ನೂ ಬಡರೈತರನ್ನೂ ನಿರ್ಗತಿಕರನ್ನಾಗಿಸಿದ ಅಭಿವೃದ್ಧಿಯ ಮಾದರಿ ಅದು. ವಸತಿ, ಶಿಕ್ಷಣ, ಆರೋಗ್ಯ, ಉದ್ಯೋಗ, ಆಹಾರ ಮುಂತಾದ ಮೂಲಭೂತ ಅವಶ್ಯಕತೆಗಳ ಪೂರೈಕೆಯಲ್ಲಿ ತೀವ್ರ ಅಸಮಾನತೆ ಹಾಗೂ ಸಂಪತ್ತಿನ ಕೇಂದ್ರೀಕರಣ ಕೂಡ ಈ ಅಭಿವೃದ್ಧಿ ಮಾದರಿಯ ಬಳುವಳಿಗಳು. ಈ ಮಾದರಿಯನ್ನೇ ಇನ್ನಷ್ಟು ವೇಗವಾಗಿ, ದಕ್ಷವಾಗಿ ಮತ್ತು ವ್ಯಾಪಕವಾಗಿ ಜಾರಿಗೆ ತರುವುದೇ ಮೋದಿಯ ಅಜೆಂಡಾ. ಅದು ತನ್ನ ಸಿದ್ಧಾಂತ ಮತ್ತು ಆಚರಣೆ ಎರಡರಲ್ಲೂ ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಮಾನವ ಹಕ್ಕುಗಳ ಮಹಾನ್ ಹೋರಾಟಗಾರ್ತಿಯೂ, ನರ್ಮದಾ ಬಚಾವೋ ಆಂದೋಲನ ಚಳವಳಿಯ ನಾಯಕಿಯೂ ಆಗಿರುವ ಮೇಧಾ ಪಾಟ್ಕರ್‌ಗೆ ಮೋದಿಯ ಗುಜರಾತ್‌ನೊಳಗೆ ಕಾಯಂ ಆಗಿ ಪ್ರವೇಶ ನಿಷಿದ್ಧವಾಗಿರುವುದೇ ಇದಕ್ಕೆ ಸಾಕ್ಷಿ. ಮೋದಿ ಆಳುವ ಭಾರತ ಮೇಧಾ ಪಾಟ್ಕರ್‌ರಂತಹವರನ್ನು ಗೌರವಿಸುವುದು ಹಾಗಿರಲಿ, ಪ್ರಜೆ ಎಂದು ಸಹ ಪರಿಗಣಿಸಲಾರದು. ಅವನ ಅಭಿವೃದ್ಧಿ ಮಾದರಿ ಬಲಿಷ್ಠ ಭಾರತದ ಕುರಿತ ಅವನ ಕಾರ್ಯಯೋಜನೆಗೆ ಅಂತರ್ಗತವಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಬದಲು ಪ್ರಜೆಗಳಿಗೆಲ್ಲರಿಗೂ ಒಂದು ಭಾಷೆ, ಒಂದು ಧರ್ಮ ಮತ್ತು ಒಂದು ಸಂಸ್ಕೃತಿಯ ಏಕರೂಪ ಮೋದಿ ಕಟ್ಟುವ ಬಲಿಷ್ಠ ಭಾರತದ ಹೆಗ್ಗುರುತಾಗಿರುತ್ತದೆ. ಭಿನ್ನವಾಗಿರುವುದಕ್ಕೆಲ್ಲ

ಕ್ರೂರವಾಗಿ ಹತ್ತಿಕ್ಕುವ ದಬ್ಬಾಳಿಕೆ ಮತ್ತು "ಅನ್ಯರನ್ನು" ನಿರ್ಮೂಲಗೊಳಿಸುವ ಅಗಾಧ ಜೀವ ಹಿಂಸೆಗಳಲ್ಲದೆ ಇಂತಹ ಒಂದು ರಾಷ್ಟ್ರವನ್ನು ಕಟ್ಟುವುದು ಅಸಾಧ್ಯ. ಮೋದಿ ಆಳುವ ಭಾರತದಲ್ಲಿ ತಾನು ಇರಲಾರೆ ಎಂದು ಹೇಳುವುದರ ಮೂಲಕ ಅನಂತಮೂರ್ತಿ ಈ ದಬ್ಬಾಳಿಕೆ ಮತ್ತು ಹಿಂಸೆಗಳಿಗೆ ತನ್ನ ವಿರೋಧವನ್ನು ಸೂಚಿಸಿದ್ದರು.

ಮೋದಿಯ ಅಭಿವೃದ್ಧಿಯ ಮಾದರಿ ಮತ್ತು ಬಲಿಷ್ಠ ಭಾರತದ ಯೋಜನೆಗೆ ಕಾರ್ಪೋರೇಟ್ ಮಾಧ್ಯಮಗಳು ಈಗ ಜನಸಮ್ಮತಿಯನ್ನು ಉತ್ಪಾದಿಸುವುದರಲ್ಲಿ ತೊಡಗಿವೆ. ಈ ಮಾಧ್ಯಮಗಳು 'ತಲೆತಿರುಕ ಜೋಲಾವಾಲಾಗಳು' ಎಂದು ಚಿತ್ರಿಸುವ ಬೆರಳೆಣಿಕೆಯಷ್ಟು ಮಾನವ ಹಕ್ಕು ಹೋರಾಟಗಾರರು ಮತ್ತು ಅನಂತಮೂರ್ತಿಯಂತಹ ಲೇಖಕರನ್ನು ಹೊರತುಪಡಿಸಿ ಯಾರೂ ಈ ಅಭಿವೃದ್ಧಿ ಬಲಿ ತೆಗೆದುಕೊಳ್ಳುವ ಜೀವಗಳ ಸಂಖ್ಯೆ ಎಷ್ಟು ಎಂದು ಪ್ರಶ್ನಿಸುತ್ತಿಲ್ಲ. ಅಭಿವೃದ್ಧಿಯ ಆಕರ್ಷಣೆಯೇ ಅಂತಹದ್ದು! ಈ ಅರ್ಥದಲ್ಲಿ ಮೋದಿ ಪ್ರತಿನಿಧಿಸುವ ಜೀವ ಹಿಂಸೆ, ಮೋದಿ ಒಬ್ಬನದ್ದೇ ಅಲ್ಲ. ಅದು ನಮ್ಮೊಳಗೂ ಇರುವಂತಹದ್ದು. ಈ ಮಾತನ್ನೂ ಸಹ ಅನಂತಮೂರ್ತಿ ತನ್ನ ಹಲವು ಭಾಷಣ-ಲೇಖನಗಳಲ್ಲಿ ಹೇಳಿದ್ದಾರೆ. ಹಿಂಸೆಯನ್ನು ಗುರುತಿಸುವುದು ಎಂದರೆ, ಅದರ ನೈತಿಕ ಜವಾಬ್ದಾರಿಯನ್ನು ಹೊರುವುದು ಎಂದು ಅವರು ತಮ್ಮ ಕತೆ ಕಾದಂಬರಿಗಳ ಮುಖಾಂತರವೂ ನಮಗೆ ಕಾಣಿಸಿದ್ದಾರೆ. ಸಾಹಿತಿಯೊಬ್ಬ ಹಿಂಸೆಯನ್ನು ಹಾಗಲ್ಲದೆ ಬೇರೆ ಯಾವ ಬಗೆಯಲ್ಲೂ ಚಿತ್ರಿಸಲಾರ. ಆದರೆ ಹಿಂಸೆ, ನಾಗರಿಕ ಸಮಾಜದಲ್ಲಿ ನಿರೂಪಣೆಗಿಂತ ಹೆಚ್ಚಾಗಿ ನ್ಯಾಯ ಮತ್ತು ಪರಿಹಾರಗಳನ್ನು ಒತ್ತಾಯಿಸುತ್ತದೆ. ಉದಾಹರಣೆಗೆ, ಗುಜರಾತ್ 2002ರ ಓರ್ವ ಸಂತ್ರಸ್ತ ಮುಸ್ಲಿಮ ನಮಗೆ ಎದುರಾದರೆ "ನೀವು ಅನುಭವಿಸಿದ ಹಿಂಸೆಗೆ ನಾನು ಜವಾಬ್ದಾರ" ಎಂದು ನಿವೇದಿಸಿಕೊಂಡ ಮಾತ್ರಕ್ಕೆ ಅವರಿಗೆ ನ್ಯಾಯಸಿಗುವುದಿಲ್ಲ. ಹಿಂಸೆಯ ಜವಾಬ್ದಾರಿ ಹೊರುವುದರ ಜೊತೆ ನ್ಯಾಯಕ್ಕಾಗಿ ವ್ಯವಸ್ಥೆಯನ್ನು ಆಗ್ರಹಿಸುವುದು ಕೂಡ ನಮ್ಮ ಕರ್ತವ್ಯವಾಗಿದೆ. ನಮ್ಮ ಮನೆಯಲ್ಲಿ ಕಳ್ಳತನವಾದರೆ ನಾವು ಮನುಷ್ಯನ ದುರಾಸೆಯ ಬಗ್ಗೆ ಯೋಚಿಸುತ್ತ ಕೂರುವುದಿಲ್ಲ ಅಥವಾ ದುರಾಸೆ ನನ್ನೊಳಗೂ ಇದೆ ಎಂಬ ಆತ್ಮಜ್ಞಾನದಿಂದಲೂ ತೃಪ್ತರಾಗುವುದಿಲ್ಲ; ಬದಲಿಗೆ ಸೂಕ್ತ ಕ್ರಮಕ್ಕಾಗಿ ಒತ್ತಾಯಿಸಲು ನಮ್ಮ ಊರಿನ ಪೋಲೀಸು ಠಾಣೆ ಅರಸಿಕೊಂಡು ಹೋಗುತ್ತೇವೆ. ಅದೇ ಆ ಕ್ಷಣದ ನಮ್ಮ ಆದ್ಯ ಕರ್ತವ್ಯ. ಆದರೆ ಕೋಮುಹಿಂಸೆಯ ಬಗ್ಗೆ ಮಾತ್ರ ನಮ್ಮ ಬಹುತೇಕ ಸಾಹಿತಿಗಳದ್ದು ಅದು ತಮಗೆ ಸಂಬಂಧಿಸಿದ್ದೇ ಅಲ್ಲ ಎಂಬ ಧೋರಣೆ; ಅಥವಾ ಅದು ಎಲ್ಲ ಕಾಲದಲ್ಲಿಯೂ ಎಲ್ಲ ದೇಶಗಳಲ್ಲೂ ಇರುವಂತಹದ್ದೆ ಎಂಬ ಉದಾಸೀನ. ಈಗೀಗ ಆತ್ಮಾವಲೋಕನ ಎಂಬ ಹೊಸವರಸೆಯೂ ಪ್ರಾರಂಭವಾಗಿದೆ. ವಾಸ್ತವವಾಗಿ ಅದು ಅವರ ಆತ್ಮರತಿಯ ಇನ್ನೊಂದು ರೂಪ. ಆದರೆ ಈ ಸಾಹಿತಿಗಳು ಯಾವತ್ತೂ ಹಿಂಸೆಯನ್ನು ನೇರವಾಗಿ ಎದುರಿಸುವವರಲ್ಲ. ಹೀಗಿರುತ್ತ ಅನಂತಮೂರ್ತಿ ಮೋದಿಯನ್ನು ಅಂದರೆ ಆತ ಪ್ರತಿನಿಧಿಸುವ ಹಿಂಸೆ ಮತ್ತು ದಬ್ಬಾಳಿಕೆಗಳನ್ನು ನೇರ ಮಾತುಗಳಲ್ಲಿ ವಿರೋಧಿಸಿರುವುದು ಮಹತ್ವದ್ದಾಗಿದೆ. ಆಕಸ್ಮಾತ್ ಮೋದಿ ಭಾರತದ ಪ್ರಧಾನಿಯಾದರೆ, ಅವನನ್ನು ಎದುರಿಸಲಾದರೂ ಅನಂತಮೂರ್ತಿ ನೂರುಕಾಲ ಬಾಳಬೇಕಾಗಿದೆ.



● ಜಿ. ರಾಜಶೇಖರ

ಅನಂತಮೂರ್ತಿಯವರನ್ನು ದಾಖಲಿಸುವಾಗ...

"ಈ ವಯಸ್ಸಿನಲ್ಲಿ ನನ್ನನ್ನು ಇಡಿಯಾಗಿ ಹಿಡಿದು ಬಿಟ್ಟೆ" ಮೆಚ್ಚುಗೆ, ಉತ್ಪ್ರೇಕ್ಷೆ ಕೂಡಿದ್ದ ಈ ಮಾತನ್ನು ಅನಂತಮೂರ್ತಿಯವರು ಕೆಲವು ತಿಂಗಳ ಹಿಂದೆ ನನ್ನೊಂದಿಗೆ ಹೇಳಿದರು.

ಎಂಟು ತಿಂಗಳ ಅವಧಿಯಲ್ಲಿ ಸುಮಾರು ಹದಿನಾರು ಗಂಟೆಗಳ ಕಾಲ ಅವರ ವೀಡಿಯೊ ರೆಕಾರ್ಡಿಂಗ್ ಮಾಡಿಮುಗಿಸಿದ್ದೆವು. ಇನ್ನೂ ನಾಲ್ಕು ಗಂಟೆ ರೆಕಾರ್ಡಿಂಗ್ ಕೆಲಸ ಬಾಕಿ ಉಳಿದಿತ್ತು. ನಾನು ಅವರದೊಂದು ದೀರ್ಘವಾದ ಸಂದರ್ಶನವನ್ನು ಮಾಡಬೇಕೆಂದು ಹತ್ತು ವರ್ಷಗಳ ಹಿಂದೆಯೇ ಅವರು ಸೂಚಿಸಿದ್ದರು. ಅವರ ಮುಖ್ಯ ಕೃತಿಗಳನ್ನು ಮಾತ್ರ ಓದಿದ್ದ ನಾನು ಅವರ ಎಲ್ಲ ಕೃತಿಗಳನ್ನು ಓದಿದ ನಂತರವೇ ಈ ಕೆಲಸ ಮಾಡುವುದು ಲೇಸೆಂದು ಭಾವಿಸಿ ಸುಮ್ಮನಾಗಿದ್ದೆ.

ಹೋದವರ್ಷ ಅವರಿಗೆ ಡಯಾಲಿಸಿಸ್ ಮಾಡಬೇಕಾಗಿ ಬಂದಾಗ ಅವರಿಗೆ ಸಂದರ್ಶನ ನೀಡುವ ಉತ್ಸಾಹ ಉಳಿದಿಲ್ಲದಿರಬಹುದೆಂದು ಆತಂಕವಾಯಿತು. ಹೆಚ್ಚಿನ ಪಾಲು ಒಪ್ಪಲಾರರು ಎಂದುಕೊಳ್ಳುತ್ತಾ, ನನ್ನ ಸೋಮಾರಿತನವನ್ನು ಬೈದುಕೊಳ್ಳುತ್ತಾ ಅವರಿಗೆ ಫೋನ್ ಮಾಡಿದೆ. ನನ್ನ ಯೋಜನೆಯನ್ನು ವಿವರಿಸುತ್ತಿದ್ದಂತೆ "ಓಹ್ ಎಸ್, ಮಾಡಬಹುದು. ಬಂದು ಕಾಣು ನನ್ನನ್ನ" ಎಂದರು. ನಾನವರಿಗೆ ಹೇಳಿದ್ದು: "ನಿಮಗಿಷ್ಟವಾದ ಕನ್ನಡ ಲೇಖಕರ ಬಗ್ಗೆ ಪ್ರತ್ಯೇಕ ಉಪನ್ಯಾಸಗಳನ್ನು ಕನ್ನಡದಲ್ಲಿ ನೀಡಿ. ವಾರಕ್ಕೊಂದು ಉಪನ್ಯಾಸ. ಅದನ್ನು ಬೆಳಗ್ಗೆ ವೀಡಿಯೊ ರೆಕಾರ್ಡ್ ಮಾಡೋಣ. ಸಂಜೆ ನಿಮ್ಮ ಅನುಭವ, ಆಲೋಚನೆಗಳನ್ನು ಕುರಿತು ನಿಮ್ಮನ್ನು ಇಂಗ್ಲಿಷಿನಲ್ಲಿ ನಾನು ಸಂದರ್ಶನ ಮಾಡುತ್ತೀನಿ."



ನನ್ನ ಉದ್ದೇಶ ಸರಳದ್ದಾಗಿತ್ತು: ಅನಂತಮೂರ್ತಿಯವರ ಮಾತಿನ ಮಾಂತ್ರಿಕ ಶಕ್ತಿ, ಅವರ ವಿಶಿಷ್ಟ ಆಲೋಚನಾಕ್ರಮ ಹಾಗೂ ವಿಷಯ ಮಂಡಿಸುವ ಶೈಲಿಗಳನ್ನು ದಾಖಲು ಮಾಡುವುದು. ಕನ್ನಡ ಕಟ್ಟುವ ಕೆಲಸಕ್ಕೆ ಇದೊಂದು ಕೊಡುಗೆಯೂ ಸರಿ ಎಂದೂ ಖಚಿತವಾಗಿತ್ತು, ಅವರ ವೀಡಿಯೊ ದಾಖಲೆ ತಯಾರಿಸಲು ನನ್ನ ವಿಶ್ವವಿದ್ಯಾಲಯ ನೆರವು ಮಾಡಿಕೊಟ್ಟಿತು. (ನಮ್ಮ ವಿಸಿಯ 'ಖರ್ಚು ಕಡಿಮೆ ಇರಲಿ' ಎಂಬ ಎಚ್ಚರಿಕೆ ಮನಸ್ಸಿನಲ್ಲಿಟ್ಟುಕೊಂಡು, ಕನಿಷ್ಠ ಖರ್ಚಿನಲ್ಲೇ ಎಲ್ಲವನ್ನು ನಿಭಾಯಿಸಲು ಹೋಗಿ ನಾನು ಪಟ್ಟ ಕಷ್ಟದ ವಿವರ ಇಲ್ಲಿ ಬೇಡ).

ಕನ್ನಡ ಭಾಷೆ, ಕುವೆಂಪು, ಶಿವರಾಮ ಕಾರಂತ, ಬೇಂದ್ರೆ, ಮಾಸ್ತಿ, ಅಡಿಗ, ಲಂಕೇಶ್, ತೇಜಸ್ವಿ, ಕಾರ್ನಾಡ್, ಕಂಬಾರ, ನವ್ಯ ಸಾಹಿತ್ಯ, ದಲಿತ ಸಾಹಿತ್ಯ ಮುಂತಾದ ವಿಷಯಗಳ ಬಗ್ಗೆ ಪ್ರತ್ಯೇಕವಾಗಿ ಪರಿಚಯ ಮಾಡುವುದೆಂದು ನಾವು ನಿರ್ಧರಿಸಿದೆವು. (ನಾನು ಕ್ಲಾಸ್‌ರೂಮ್ ಉಪನ್ಯಾಸದ ರೀತಿ ಮಾತಾಡುವುದಿಲ್ಲ. ಈ ಸಾಹಿತಿಗಳ ಬಗ್ಗೆ ನನಗೆ ಮುಖ್ಯವೆನ್ನಿಸಿದ್ದನ್ನ, ಅವರ ಜೊತೆ ಇದ್ದ ನನ್ನ ಸಂಬಂಧಗಳ ಬಗ್ಗೆ ನನ್ನ ಅನಿಸಿಕೆಗಳನ್ನೂ ಹಂಚಿಕೊಳ್ಳುತ್ತೀನಿ,' ಎಂದಿದ್ದರು. ಈ ರೀತಿಯ ದಾಖಲೆ ಹೆಚ್ಚು ಸ್ವಾರಸ್ಯಕರವಾಗಿರುತ್ತದೆಂದು ನನಗೂ ಅನ್ನಿಸಿತು)

ಸಂದರ್ಶನಗಳಲ್ಲಿ ಅವರ ಬಾಲ್ಯ, ಕಾಲೇಜು, ವಿಶ್ವವಿದ್ಯಾಲಯದ ಅನುಭವಗಳು, ಅವರ ಸ್ನೇಹಿತರು, ಅವರ ಸಾರ್ವಜನಿಕ ಜೀವನ, ಭಾಷೆ, ಸಂಪ್ರದಾಯ, ರಾಜಕೀಯ ಮುಂತಾದ ವಿಷಯಗಳ ಕುರಿತು ಚರ್ಚಿಸಬೇಕೆಂದು ನಿಶ್ಚಯಿಸಿದ್ದೆ.

ಅವರ ಮನೆಯಲ್ಲಿ ಶೂಟಿಂಗ್ ಮಾಡುವುದೇ ಅವರಿಗೆ ಹೆಚ್ಚು ಅನುಕೂಲಕರವಾದ್ದರಿಂದ, ನಾನು ಮತ್ತು ಕ್ಯಾಮೆರಾಮನ್ ಬಿ.ಆರ್.ವಿಶ್ವನಾಥ್ ಶೂಟಿಂಗ್‌ನ ದಿನ ಬೆಳಗ್ಗೆಯೇ ಅವರ ಮನೆಗೆ ತೆರಳಿ ಸಂಜೆ ಎಂಟು ಗಂಟೆಯವರೆಗೂ ಅಲ್ಲೇ ಉಳಿದುಕೊಳ್ಳುತ್ತಿದ್ದೆವು. ಬೆಳಗ್ಗೆ ಸಾಹಿತಿಗಳನ್ನು ಪರಿಚಯಿಸುವಾಗ ಅನಂತಮೂರ್ತಿಯವರು ಸುಮಾರು ಅರ್ಧ ಗಂಟೆ ಮಾತನಾಡಿ, ತಮ್ಮ ಕೋಣೆಗೆ ತೆರಳಿ ಡಯಾಲಿಸಿಸ್ ಮಾಡಿಸಿಕೊಂಡನಂತರ ಹಿಂತಿರುಗಿ ರೆಕಾರ್ಡಿಂಗ್‌ಅನ್ನು ಪೂರ್ಣಗೊಳಿಸುತ್ತಿದ್ದರು. ಡಯಾಲಿಸಿಸ್‌ನಿಂದ ಅವರು ಯಾವುದೇ ರೀತಿಯ ಹಿಂಸೆ, ಅನಾನುಕೂಲ ಅನುಭವಿಸಿದ್ದನ್ನು ಅವರು ಯಾವತ್ತೂ ತೋರಿಸಲಿಲ್ಲ, ಹೀಗಾಗಿ ನಮಗೆ ನಿಸ್ಸಂಕೋಚವಾಗಿ ಕೆಲಸ ಮಾಡಲು ಸಾಧ್ಯವಾಯಿತು.


ಬೆಳಗ್ಗಿನ ರೆಕಾರ್ಡಿಂಗ್ ಮುಗಿದನಂತರ ಎಸ್ತರ್ ಅವರು ಕಾಳಜಿಯಿಂದ ತಯಾರಿಸಿದ ಆರೋಗ್ಯಕರ ಊಟವನ್ನು ಮಾಡಿ ಅನಂತಮೂರ್ತಿಯವರು ಮಧ್ಯಾಹ್ನ ವಿಶ್ರಾಂತಿ ಪಡೆಯುತ್ತಿದ್ದರು. ಊಟದ ವೇಳೆಯಲ್ಲೂ ಎಸ್ತರ್ ಅವರ "ಹೆಚ್ಚು ಮಾತನಾಡಬೇಡಿ, ಸುಸ್ತಾಗುತ್ತೆ" ಎಂಬ ಎಚ್ಚರದ ಮಾತನ್ನು ನಿರ್ಲಕ್ಷಿಸಿ ದಿನದ ಮುಖ್ಯ ಸುದ್ದಿಯಿಂದ ಹಿಡಿದು ಹಲವಾರು ಭಿನ್ನಭಿನ್ನ ವಿಚಾರಗಳ ಕಡೆಗೆ ನಮ್ಮ ಗಮನ ಸೆಳೆಯುತ್ತಿದ್ದರು. ಸಾಯಂಕಾಲ ಅವರ ಸಂದರ್ಶನವನ್ನು ಪ್ರಾರಂಭಿಸುತ್ತಿದ್ದೆ. ಅನಂತಮೂರ್ತಿಯವರ ಸೆಕ್ರೆಟರಿ ಭಾಸ್ಕರ್‌ಭಟ್, ಹೊತ್ತು ಹೊತ್ತಿಗೆ ದಿನವಿಡೀ ಚಹಾ ನೀಡಿ ನಮ್ಮ ತಂಡದವರು ಸೊರಗದಂತೆ ನೋಡಿಕೊಳ್ಳುತ್ತಿದ್ದರು. ವಾರಕ್ಕೊಂದು ರೆಕಾರ್ಡಿಂಗ್ ಮಾಡಿ ಮೂರು ತಿಂಗಳೊಳಗೆ ಮುಗಿಯಬೇಕಿದ್ದ ನಮ್ಮ ಕೆಲಸ ನಾನಾ ಕಾರಣಗಳಿಂದ ಒಂದು ವರ್ಷ ಸಾಗಿತು.

ಶೂಟಿಂಗ್ ವೇಳೆಯಲ್ಲಿ ಅನಂತಮೂರ್ತಿಯವರು ತಮ್ಮ ಮಾತಿನಲ್ಲಿ ಮಗ್ನರಾಗಿರುತ್ತಿದ್ದರು. ತಾವು ಹೇಳಿದ್ದನ್ನು ತಿದ್ದುವುದಾಗಲಿ, ಹಿಂತೆಗೆದುಕೊಳ್ಳುವುದಾಗಲಿ ಎಂದೂ ಮಾಡಲಿಲ್ಲ. ತಮ್ಮ ಮಾತಿನಲ್ಲಿ ತಮ್ಮ ಇರುವಿಕೆಯನ್ನು ಸಂಪೂರ್ಣವಾಗಿ ಅನುಭವಿಸುತ್ತಿದ್ದಂತೆ ಕಾಣಿಸುತ್ತಿತ್ತು. ಜೀವನೋತ್ಸಾಹದಿಂದ ಕೂಡಿದ್ದ ಅವರ ವಿಚಾರ ಮಂಡಿಸುವ ರೀತಿ ಕನ್ನಡ ಮಾತಿನಲ್ಲಿ ಅಡಗಿರುವ ರಸಾನುಭವದ ಸಾಧ್ಯತೆಗಳನ್ನೂ ತೋರಿ, ಲೋಕಗಾಂಭೀರ್ಯ ಹುಟ್ಟಿಸುವಂತೆಯೂ ಮಾಡುತಿತ್ತು. ಅವರು ಸಹನೆಯನ್ನು ಯಾವ ಗಳಿಗೆಯಲ್ಲೂ ಕಳೆದುಕೊಳ್ಳಲಿಲ್ಲ. ಒಮ್ಮೆ ಪಕ್ಕದ ಮನೆಯಿಂದ ಪಾತ್ರೆ ತೊಳೆಯುವ ಸದ್ದು ಅನಿರೀಕ್ಷಿತವಾಗಿ ಕೇಳಿಬಂದಾಗ, "ಅವರೂ ಕೆಲಸ ಮಾಡುತ್ತಿದ್ದಾರೆ" ಎಂದು ಹೇಳಿ ನಮ್ಮಲ್ಲೇ ಸಹನೆ ಕೋರಿದ್ದರು.

ನಾನು ಗಮನಿಸಿದ ಇನ್ನೊಂದು ಅಂಶ: ಅವರ ಸಸ್ಪೆನ್ಸ್ ಹುಟ್ಟು ಹಾಕುವ ಪ್ರಾರಂಭದ ಮಾತು ಹಾಗೂ ನಯವಾಗಿ ಅದನ್ನು ಮುಗಿಸುವ ಶೈಲಿ. ಅವರು ಅಡಿಗರನ್ನು ಪರಿಚಯಿಸಿದ್ದು ಹೀಗೆ: "ಅಡಿಗರ ಬಗ್ಗೆ ಬಹಳ ಮುಖ್ಯವಾದ ಮಾತು ಹೇಳಬೇಕೆಂದರೆ: ಅವರು ತನ್ನ ಕಾವ್ಯದ ಉಚ್ಛ್ರಾಯ ಕಾಲದಲ್ಲಿ ತನ್ನನ್ನು ತಾನೇ ನಿರಾಕರಿಸಿಕೊಂಡ ಕವಿ."

ಲಂಕೇಶರ ಬಗ್ಗೆ ಅವರ ಶುರುವಿನ ಮಾತು: "ಲಂಕೇಶ್ ಬಗ್ಗೆ ಮಾತಾಡೊದು ನನಗೆ ಕಷ್ಟ."

ಅವರ ಜೊತೆ ಸಂಪಾದಿಸಿದ ವೀಡಿಯೊ ದಾಖಲೆಯು ತಿಳಿದಿದ್ದ ಹಾಗೂ ತಿಳಿಯದಿದ್ದ ಹಲವಾರು ಸಂಗತಿಗಳನ್ನು ಮೆಲುಕುಹಾಕಿ, ಇಪ್ಪತ್ತನೆ ಶತಮಾನದ ಕನ್ನಡ ಸಾಹಿತ್ಯ ಲೋಕದ ವಿಶಾಲದರ್ಶನ ಕಾಣಿಸುತ್ತದೆ. ಹೆಚ್ಚಿನ ವಿವರ ನೀಡಲು ಇಲ್ಲಿ ಜಾಗವಿಲ್ಲ. ಸಮಕಾಲೀನ ಸಂದರ್ಭದಲ್ಲಿ ಪರಿಸರದ ಸುತ್ತಮುತ್ತ ಮೂಡುವ ಕಾಳಜಿಗಳು ಪ್ರಮುಖ ಶಕ್ತಿಯಾಗಿ ಸಾಹಿತ್ಯ ರಾಜಕೀಯ ಕ್ಷೇತ್ರಗಳಲ್ಲಿ ಹೊಸತನ ಮೂಡುವುದೆಂದು ಅಭಿಪ್ರಾಯಪಟ್ಟರು. ದುಡ್ಡಿನ ವ್ಯಾಮೋಹ ಇಂದಿನ ಬರಹಗಾರರನ್ನು ಕುಗ್ಗಿಸಿದೆ ಎಂದು ಗಮನಿಸಿದರು. ಕಡೆಯ ಸಂದರ್ಶನದಲ್ಲಿ ಅವರಿಗೆ ದೊಡ್ಡ ರಿಗ್ರೆಟ್ ಯಾವುದಾದರು ಉಳಿದಿದೆಯೇ ಎಂದು ಕೇಳಿದೆ. ತಾನು ಇಂಗ್ಲಿಷ್ ಸಾಹಿತ್ಯದ ಬದಲು ಹಳೆಗನ್ನಡ ಸಾಹಿತ್ಯವನ್ನು ಅಭ್ಯಾಸ ಮಾಡಬೇಕಿತ್ತು ಎಂದರು.



● ಚಂದನಗೌಡ

ಅನಂತಮೂರ್ತಿ ಮತ್ತು ಸತ್ಯಹರಿಶ್ಚಂದ್ರ



ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ಜನಜನಿತವಾದುದು. ರಾಜ ಹರಿಶ್ಚಂದ್ರನ ಸತ್ಯಸಂಧತೆಯ ನಿರೂಪಣೆ ಈ ಕಾವ್ಯದಲ್ಲಿದೆ. ಸಾಮಾನ್ಯ ಜನವರ್ಗಕ್ಕೆ ಕಾವ್ಯ ತಲುಪಿಸುವ ಸಲುವಾಗಿ 'ಜನ ಬದುಕಲೆಂದು' ಕಾವ್ಯ ಬರೆವ ಕೆಲಸಕ್ಕೆ ಕೈ ಹಾಕಿದವ ರಾಘವಾಂಕ. 'ನಡೆವವರೆಡವದೆ, ಕುಳಿತವರೆಡವ್ವರೆ?' ಎಂಬ ಸರಳ ಪ್ರಶ್ನೆಯ ಮೂಲಕ, ಕುಹಕಿಗಳ ಸೊಲ್ಲಡಗಿಸಿದವ ಈತ. ಹರಿಶ್ಚಂದ್ರ ಬೇಟೆಗೆ ತೆರಳಿದ ಸಂದರ್ಭದಲ್ಲಿ ವಿಶ್ವಾಮಿತ್ರ 'ಇರುಳು ಕನ್ಯೆ'ಯರನ್ನು ಸೃಷ್ಟಿಸಿ ಅವರು ಹರಿಶ್ಚಂದ್ರನ ಆಯಾಸ ಪರಿಹಾರ ಮಾಡುತ್ತಾರೆ. ಇದರಿಂದ ಉಲ್ಲಸನಾದ ಆತ ಸಹಜವಾಗಿ ಅವರ ಬೇಡಿಕೆ ಏನೆಂಬುದಾಗಿ ಕೇಳುತ್ತಾನೆ. ಇದೇ ಸಾಕೆಂಬಂತೆ ಅವರು 'ನಮ್ಮನ್ನು ಮದುವೆಯಾಗು' ಎಂದು ಒತ್ತಾಯಿಸುತ್ತಾರೆ. ಜಾಗೃತಗೊಂಡ ರಾಜ ಅದನ್ನು ನಿರಾಕರಿಸುತ್ತಾನೆ ಹಾಗೂ 'ರಾಜ್ಯ ಬೇಕಾದರೂ ಕೊಟ್ಟೇನು, ನಿಮ್ಮನ್ನು ಮದುವೆಯಾಗಲಾರೆ' ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಾನೆ. ಹಾಗಾದರೆ ನಿನ್ನ ಮಾತಿನಂತೆ 'ರಾಜ್ಯವನ್ನು ಕೊಡು, ಸತ್ಯ ಉಳಿಸಿಕೊ' ಎಂದು ಪ್ರಾರಂಭವಾದ ಒತ್ತಾಯ, ಆತ ರಾಜ್ಯಭ್ರಷ್ಟನಾಗಿ, ಕಷ್ಟಗಳನ್ನು ಅನುಭವಿಸಿ, ಸತ್ಯ ಹರಿಶ್ಚಂದ್ರ ಎಂದು ರೂಪಿಸುವಲ್ಲಿ ಅಂತ್ಯಗೊಳ್ಳುತ್ತವೆ.

ಈ ಕಾವ್ಯವನ್ನು ಓದುವ ಸಂದರ್ಭದಲ್ಲಿ, ಒಂದು ಬಗೆಯ ತೊಡಕು ಕಾಣಿಸಿಕೊಳ್ಳುತ್ತದೆ. ನಿಜಕ್ಕೂ ಈ ಬಗೆಯ ಒತ್ತಾಯ ಸಾಧ್ಯವೆ? ಅದೂ ಅಭಿಪ್ರಾಯವನ್ನು ತೀಕ್ಷ್ಣವಾಗಿ ನಿರೂಪಿಸುವ ಸಂದರ್ಭದಲ್ಲಿ ಹೇಳಿರಬಹುದಾದ ಮಾತನ್ನು ಈ ರೀತಿ ಲಂಭಿಸಿ, ರಾಜನೊಬ್ಬನಿಗೆ ಹಿಂಸೆ ಕೊಡಲು ಸಾಧ್ಯವೆ?



ಅಭಿಪ್ರಾಯ ತೀವ್ರತೆಗಾಗಿ ಬಳಸಿರಬಹುದಾದ ಮಾತಿನ ಎಳೆಯನ್ನೇ ಈ ರೀತಿ ಹಿಂಜಿ ಹಿಂಜಿ ಆತನನ್ನು ಸಂಕಷ್ಟಕ್ಕೆ ಗುರಿ ಮಾಡುವುದು ಸಾಧ್ಯವೇ? ಎಂಬ ಅಂಶ ಮನಸ್ಸನ್ನು ಕಾಡತೊಡಗುತ್ತದೆ.

ಆದರೆ ಇತ್ತೀಚಿಗಿನ ಅನಂತಮೂರ್ತಿಯವರ ಮೋದಿ ಕುರಿತ ಹೇಳಿಕೆ ಸೃಷ್ಟಿಸಿದ ವಾತಾವರಣ ಹರಿಶ್ಚಂದ್ರ ಕಾವ್ಯದ ಮೇಲಿನ ಪ್ರಸಂಗವನ್ನು ಧುತ್ತೆಂದು ಮನಸ್ಸಿಗೆ ತಂದಿತು. 'ಮೋದಿ ಪ್ರಧಾನಿಯಾಗುವ ನೆಲದಲ್ಲಿ ಬದುಕಿರಲಾರೆ' ಎಂಬ ಹೇಳಿಕೆಗೆ ಬಂದ ಕೀಳು ಮಟ್ಟದ ಪ್ರತಿಕ್ರಿಯೆಗಳು ಯಾವುದೇ ನಾಗರಿಕ ಸಮಾಜ ತಲೆತಗ್ಗಿಸುವಂತವು. ಪ್ರಸ್ತುತ ಸಾಮಾಜಿಕ, ರಾಜಕೀಯ ಹಿನ್ನೆಲೆಯಲ್ಲಿ ಭವಿಷ್ಯದ ಅಂಧಯುಗದ ದೃಷ್ಟಿಯಲ್ಲಿ ಆಡಿರಬಹುದಾದ ನೋವಿನ ಮಾತಿನ ಧ್ವನ್ಯಾರ್ಥವನ್ನು ಗ್ರಹಿಸದೆ, ವಾಚ್ಯಾರ್ಥದ ಹಂತದಲ್ಲಿಯೇ ನಡೆದ ಚರ್ಚೆಗಳು/ ವಿರಸಗಳು ಹೇವರಿಕೆ ಹುಟ್ಟಿಸುವಂತಿದ್ದವು.

ಹರಿಶ್ಚಂದ್ರನಂತಹ ರಾಜನನ್ನೇ ಕಶ್ಯಾಬಿಕ್ಕಿಯಾಗಿ ಮಾಡಿ, ಕೊಡುವಷ್ಟು ಕಾಟವನ್ನೆಲ್ಲಾ ಕೊಟ್ಟು, ಬಹುಶಃ ಸಾಮಾನ್ಯ ಜನರ ನಿಂದನೆಯಿಂದ ಪಾರಾಗಲು ಅನಿವಾರ್ಯವಾಗಿ 'ಸತ್ಯ ಹರಿಶ್ಚಂದ್ರ' ಪಟ್ಟವನ್ನು ನೀಡಿದ 'ಉದಾತ್ತ' ಪರಂಪರೆಯನ್ನು ಹೊಂದಿರುವ ನಮ್ಮ ಸಮಾಜ, ಅನಂತಮೂರ್ತಿಯವರ ಹೇಳಿಕೆಗೆ ಪ್ರತಿಯಾಗಿ ಅವರನ್ನೇ ಗಡಿಪಾರು ಮಾಡಲು, ಮುಗಿಸಲು ಮುಂದಾಗಿದ್ದು ಆಶ್ಚರ್ಯವೆನಿಸುವುದಿಲ್ಲ ಅಲ್ಲವೆ?

● ಎಸ್.ಪೂರ್ಣಚಂದ್ರ

ಲಂಕೇಶ್ ಪ್ರಕಾಶನದ ಲಭ್ಯ ಪುಸ್ತಕಗಳು

ಕರ್ನಾಟಕದ ಎಲ್ಲಾ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿದೆ. ಫೋನ್: 080-26676427

ನೀಲು ಕಾವ್ಯ -ಸಂಗ್ರಹ 1	150.00	ಕಲ್ಲು ಕರಗುವ ಸಮಯ	125.00	ಮಿಡತೆಗಳ ಬರವಿಗೆ....	100.00
ನೀಲು ಕಾವ್ಯ -ಸಂಗ್ರಹ 2	150.00	ನಾನಲ್ಲ	60.00	ಡಿಸೆಂಬರ್ 13	150.00
ನೀಲು ಕಾವ್ಯ -ಸಂಗ್ರಹ 3	200.00	ಕೆರೆಯ ನೀರನು ಕೆರೆಗೆ ಚೆಲ್ಲಿ	50.00	ಮನುಸ್ಮೃತಿ	20.00
ಚಿತ್ರ ಸಮೂಹ	90.00	ಉಲ್ಲಂಘನೆ	80.00	ಆರೋಗ್ಯ ಮತ್ತು ಜೀವನ	125.00
ಅಕ್ಷರ ಹೊಸ ಕಾವ್ಯ	250.00	ಪಾಪದ ಹೂಗಳು	60.00	ತೇಜಸ್ವಿ ನೆನಪು	100.00
ಮರೆಯುವಮುನ್ನ-ಸಂಗ್ರಹ1	150.00	ಬಿರುಕು	40.00	ಜಬೀವುಲ್ಲಾ ಕೊಟ್ಟ ಕೋಳಿ	100.00
ಮರೆಯುವಮುನ್ನ-ಸಂಗ್ರಹ2	150.00	ಸಂಕ್ರಾಂತಿ	45.00	ಮುತ್ತುರಾಜನ ಮುತ್ತು	175.00
ಮರೆಯುವಮುನ್ನ-ಸಂಗ್ರಹ3	150.00	ತೆರೆಗಳು	50.00	ವಿಷ್ಣು ನೂರೊಂದು ನೆನಪು	150.00
ಮನಕೆ ಕಾರಂಜಿಯ ಸ್ಪರ್ಶ	150.00	ಈಡಿಪಸ್ ಮತ್ತು ಅಂತಿಗೊನೆ	60.00	ಓ ಈಳಂ	250.00
ಈ ನರಕ ಈ ಪುಲಕ	125.00	ಟಿ. ಪ್ರಸನ್ನನ ಗೃಹಸ್ಥಾಶ್ರಮ	50.00	ಖೈರ್ಲಾಂಜಿ	200.00
ಆಟ-ಜೂಜು-ಮೋಜು!	150.00	ಗುಣಮುಖ	30.00	ಕಮಲಾ ದಾಸ್ ಕಥೆಗಳು	60.00
ಟೀಕೆ-ಟಿಪ್ಪಣಿ 1	200.00	ಕ್ರಾಂತಿ ಬಂತು ಕ್ರಾಂತಿ	40.00	ಮಾಂಟೊ ಕಥೆಗಳು	80.00
ಟೀಕೆ-ಟಿಪ್ಪಣಿ 2	200.00	ಕಪ್ಪು ಮಲ್ಲಿಗೆ	75.00	ಕೋಮುವಾದ	60.00
ಟೀಕೆ-ಟಿಪ್ಪಣಿ 3	200.00	ಕಂಡಹಾಗೆ ಭಾಗ-1	125.00	ಜಾತಿ ಪದ್ಧತಿ	125.00
ಸಾಹಿತಿ-ಸಾಹಿತ್ಯ	300.00	ಕಂಡಹಾಗೆ ಭಾಗ-2	150.00	ರಾಮಾಯಣ ವಿಷವೃಕ್ಷ	75.00
ರೂಪಕ ಲೇಖಕರು	70.00	ದರವೇಶಿ ಕತೆಗಳು	90.00	ಅರೇಬಿಯನ್ ನೈಟ್ಸ್	150.00
ಕಂಡದ್ದು ಕಂಡಹಾಗೆ	100.00	ಬಸವರಾಜಮಾರ್ಗ	40.00	ಜಿಮ್‌ಕಾರ್ಬೆಟ್-ಶಿಕಾರಿ ಕತೆಗಳು	80.00
ಪ್ರಸ್ತುತ	80.00	ಬೆನಜೀರ್	25.00	ಚೆಕ್‌ಪೋಸ್ಟ್	100.00
ಹುಳಿ ಮಾವಿನ ಮರ	275.00	ಆವರಣ ಎಂಬ ವಿ-ಕೃತಿ	100.00	Some-ಪದ	80.00
ಮುಸ್ಸಂಜೆಯ ಕಥಾ ಪ್ರಸಂಗ	250.00	ಜೈಲೆಂಬ ಲೋಕದಲ್ಲಿ	75.00	ಬಿಡಿಚಿತ್ರಗಳು	60.00
ಬಿರುಕು	60.00	ವೇದಾಂತ ರೆಜಿಮೆಂಟ್	60.00	ಗೋವು ಪವಿತ್ರ ಎಂಬ ಮಿಥ್ಯೆ	80.00
ಅಕ್ಕ	80.00	ಕಳೆದುಕೊಂಡವಳು	45.00	ಕರ್ಕರೆಯನ್ನು ಕೊಂದವರ್ಯಾರು	200.00
ಮಂಜು ಕವಿದ ಸಂಜೆ	85.00	ನೂರುಸ್ವರ	60.00	ಅಸ್ಪೃಶ್ಯ ವಸಂತ	200.00
ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00	ಟ್ರೇನ್ ಟು ಪಾಕಿಸ್ತಾನ್	125.00		

ಉತ್ತರ ಕನ್ನಡ: ಅಡ್ನಾಡಿ ಅನಂತ್‌ಮಾಣಿಯ ಅಡಿಕೆ ರಾಜಕೀಯ

ರಾವಳಿ ಮತ್ತು ಮಲೆನಾಡಿನ ಲಕ್ಷಾಂತರ ಅಡಿಕೆ ಟಗರ ಕುಟುಂಬಗಳು ಅಡಕತ್ತರಿಯಲ್ಲಿ ಸಿಕ್ಕಂತೆ ಡ್ಡಿಕ್ಕಿದ್ದಿದೆ! ಜೀವನಾಧಾರವಾದ ಅಡಿಕೆ ಕೃಷಿಯನ್ನೇ ಧಿಸಲಾಗುತ್ತದೆಂಬ ಗುಮ್ಮ ಹರಿಬಿಟ್ಟಿರುವ ಹರಾಮಿ ಕಾರಣಿಗಳು ಅಡಿಕೆ ಬೆಳೆಗಾರರ ಎದೆಗುಂದಿಸಿ ದ್ದಾರೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನಿಷೇಧ ಬಂಡವಾಳ ಮಾಡಿಕೊಳ್ಳಲು ಸ್ಕೆಚ್ ುವ ಸಂಘ ಪರಿವಾರದ ಸೋಗಲಾಡಿಗಳಂತೂ ಕ್ಕೊಂದು ಆಟ ಆಡುತ್ತಿದ್ದಾರೆ. ಉತ್ತರ ಕನ್ನಡದ ಣದ ಏರಿಯಾದ ಪ್ರತಿ ಪಡಸಾಲೆಯಲ್ಲೂ ಈಗ ರಾಜಕಾರಣದ ಕಾವು ಏರಿಬಿಟ್ಟಿದೆ!!

ಮೊದಲು ಜಿಲ್ಲೆಯಲ್ಲಿ ಅಡಿಕೆ ಭೂತ ತೋರಿಸಿದವನು ಯ ನಾಲಾಯಕ್ ಸಂಸದ ಅನಂತ್ಮಾಣಿ ಯಾನೆ ಕುಮಾರ್ ಹೆಗಡೆ. ಕಳೆದ ಹತ್ತು ವರ್ಷದಲ್ಲಿ ಸತ್ತಂತಿದ್ದ ಂಪಿ ಈಗ ಎದ್ದು ಕುಂತಿದ್ದಾನೆ. ಚುನಾವಣೆ ಬಂದಾಗ ಬದುಕಿನ ಸೂಕ್ಷ್ಮ-ಭಾವನಾತ್ಮಕ ಸಂಗತಿಗಳೊಂದಿಗೆ ಆಡುವುದೀತನ ಹುಟ್ಟುಗುಣ. ಮತೋನ್ಮಾದದಿಂದ ಬೇಯದಿದ್ದಾಗ ಜನಸಾಮಾನ್ಯರ ಕಸಬು-ಕೃಷಿಯೇ ಬುರ್ನಾಸ್ ರಾಜಕಾರಣಕ್ಕೆ ಬಂಡವಾಳ ಆಗುವುದು ಮೂಲು. ಈಗೀತನಿಗೆ ಅಡಿಕೆ ಅಸ್ತ್ರವಾಗಿದೆ!


ಉತ್ತರ ಕನ್ನಡದ ಘಟ್ಟದ ಮೇಲಿನ (ಮಲೆನಾಡು) ತೇಕ ಬ್ರಾಹ್ಮಣ ಕುಟುಂಬಗಳಿಗೆ ಅಡಿಕೆಯೇ ಅನ್ನ ವ ಸಾಧನ! ಬಾಯ್ಬಲ ಇರುವ ಈ ಮಂದಿ ತಮ್ಮ ಕೃಷಿಗೆ ಸರ್ಕಾರಿ ಯೋಜನೆಗಳಿಂದ ಅಥವಾ ಪ್ರಕೃತಿ ಪದಿಂದ ಏನೇ ತೊಂದರೆ-ತೊಡಕಾದರೂ ತಕ್ಷಣ ಗಳಿದ್ದು ಪ್ರತಿಭಟಿಸುವ ಜಾಣರು. ಈ ಸಮುದಾಯದ ಧಿಗಳಾದ ಸಂಸದ ಅನಂತ್ಮಾಣಿ-ಶಾಸಕ ಕಾಗೇರಿ ಮಾಣಿ ವಿಪ್ರೋತ್ತಮರು ತಮ್ಮವರಿಗೆ ತೊಂದರೆಯಾಗದಂತೆ ಟೊಂಕಕಟ್ಟಿ ನಿಂತಿರುತ್ತಾರೆ. ಹಾಗಂತ ಈ ಬ್ರಾಹ್ಮಣ ಗಳಿಗೆ ಜಿಲ್ಲೆಯ ಮೀನುಗಾರರ, ಕಬ್ಬು-ಭತ್ತ ಬೆಳೆಗಾರರ ಅರ್ಥವೇ ಆಗದು. ಸರ್ಕಾರದ ಎಡಬಿಡಂಗಿ ಶಣೆ-ಪ್ರಕೃತಿ ದಾಳಿಗಳಾದಾಗ ಈ ಬೆಸ್ತರು-ರೈತರು ವ ಬೊಬ್ಬೆ ಅರಣ್ಯರೋದನ ಆಗುತ್ತಲೇ ಇದೆ.

ನಿರಾ ಲೋಕಸಭಾ ಕ್ಷೇತ್ರದಲ್ಲಿ ಅಡಿಕೆ ತೋಟಿಗ ಣರು ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆ. ಇವರಲ್ಲಿ ತೊಂಬತ್ತರಷ್ಟು ಮಂದಿ ಬಿಜೆಪಿ ಒಲವಿನವರು. ಈ ಬಾರಿ ಹೈಗರಲ್ಲಿ ಹಾಲಿ ಸಂಸದ ಅನಂತ್ಮಾಣಿ ಅಸಹ್ಯ ಮೂಡಿದೆ. ಈತ ಕೆಲಸಕ್ಕೆ ಬಾರದ ಯೋಜಕ; ಒಂದು ಕಾಲದಲ್ಲಿ ಬುತ್ತಿ ಮಾಣಿಯಾಗಿದ್ದ ತ್ಮಾಣಿ ಈಗ ಕೋಟಿಗೆ ತೂಗುವ ಕೊಳಕು ಯಾಗಿರುವುದು ಆತನ ದೇಶಭಕ್ತಿ-ಧರ್ಮ ರಕ್ಷಣೆ ಮುತ್ತು ಬ್ರಾಹ್ಮಣರಿಗೆ ಅರ್ಥವಾಗಿಸಿದೆ.

ನ ಬಗ್ಗೆ ಬೇಸರದಲ್ಲಿರುವ ಸ್ವಜಾತಿಯವರನ್ನು ತಗೊಳಿಸಲು ಈಶ್ಯೂ ಒಂದಕ್ಕಾಗಿ ತಡಕಾಡುತ್ತಿದ್ದ ತ್ಮಾಣಿಗೆ ಕೇಂದ್ರದ ಆರೋಗ್ಯ ಇಲಾಖೆ ಅಡಿಕೆಯ ಣಗಳ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಹಾಕಿರುವ ವಿಟ್ ಮುಳುಗುವವನಿಗೆ ಹುಲ್ಲುಕಡ್ಡಿಯಂತೆ ಸಿಕ್ಕಿದೆ! ದ ಕಾಂಗ್ರೆಸ್ ಸರ್ಕಾರ ಅಡಿಕೆ ನಿಷೇಧಕ್ಕೆ ಸಿದ್ಧವಾಗಿದೆ ತ ಒಂದೇಸಮನೆ ಬೊಬ್ಬೆ ಹೊಡೆಯುತ್ತಿದ್ದಾನೆ. ಸ್ವ- ಹವ್ಯಕರ ನಡುವೆ ಎದುರಾಳಿ ಅನಂತ್ಮಾಣಿ ಹೀರೋ ತ್ತಿರುವುದು ಕಂಡು ಕಂಗಾಲಾದ ಶಾಸಕ ಕಾಗೇರಿ ಅಡಿಕೆ ನಿಷೇಧಕ್ಕೆ ಕೇಂದ್ರ ಸರ್ಕಾರ ಕರಾಮತ್ತು ುತ್ತಿದೆ ಎಂದು ತನ್ನದೇ ಸ್ಟೈಲಲ್ಲಿ ತಿಪ್ಪರಲಾಗ ತ್ತಿದ. ಈ ನರಿಬುದ್ಧಿಯ ನಾಯಕದ್ವಯರ ಎಲೆಕ್ಷನ್ ಅರಿಯದ ಅಡಿಕೆ ತೋಟಿಗರು ಬೆಚ್ಚಿಬಿದ್ದಿದ್ದಾರೆ!

ಆದರೆ ಕಾಗೇರಿ ಮಾಣಿ-ಅನಂತ್ಮಾಣಿ ಜೋಡಿ ುತ್ತಿರುವಷ್ಟು ಗಂಡಾಂತರವೇನೂ ಸದ್ಯಕ್ಕೆ ಅಡಿಕೆಗೆ ಲ್ಲ, ಅಡಿಕೆ ತಿನ್ನಲು ಯೋಗ್ಯವಲ್ಲದ ಆಹಾರ ಪದಾರ್ಥ ಒಂದು ಅಧ್ಯಯನ ವರದಿ ಸುಪ್ರೀಂಕೋರ್ಟಿಗೆ ಸರ್ಕಾರದ ವಕೀಲರು ಸಲ್ಲಿಸಿದ್ದಾರೆಯೇ ವಿನಃ ಯನ್ನೇ ನಿಷೇಧಿಸುವಂತೆ ಪ್ರಮಾಣಪತ್ರ ಹಾಕಿಲ್ಲ. ಸತ್ಯವನ್ನು ಬುದ್ಧಿಪೂರ್ವಕವಾಗಿ ತಿರುಚಿ ಅನಂತ್- ಅಡಿಕೆ ಬೆಳೆಗಾರರಲ್ಲಿ ಭಯ ಮೂಡಿಸಿ ಪಾಲಿಟಿಕಲ್ ೇಜ್ ಪಡೆಯಲು ಹವಣಿಸುತ್ತಿದ್ದಾರೆ. ವಾಸ್ತವವೆಂದರೆ, ಯ ಗುಣ ಧರ್ಮದ ಅಧ್ಯಯನಕ್ಕೆ ಸುಪ್ರೀಂಕೋರ್ಟ್ ಶದಂತೆ ಏಳು ಸಂಸ್ಥೆಗಳ ಒಂದು ತಂಡವನ್ನು ಕೇಂದ್ರ ರ ರಚಿಸಿತ್ತು. ಆ ಸಮಿತಿ ಕೊಟ್ಟಿರುವ ವರದಿಯನ್ನಷ್ಟೇ ಂಕೋರ್ಟಿಗೆ ಕೇಂದ್ರ ಆರೋಗ್ಯ ಇಲಾಖೆ ಸಲ್ಲಿಸಿದೆ .

ಅಷ್ಟಕ್ಕೂ ಅಡಿಕೆ ನಿಷೇಧಿಸಬಹುದೆಂಬ ಅನುಮಾನ- ಈಗ ಹುಟ್ಟಿದ್ದೇನೂ ಅಲ್ಲ, ಬಿಜೆಪಿ ಕೇಂದ್ರದಲ್ಲಿ ತ ನಡೆಸುತ್ತಿದ್ದಾಗಲೇ ಅಡಿಕೆ ನಿರ್ಬಂಧಿತ ಆಹಾರ ಟ್ಟಿ ಸೇರಿತ್ತು! ಆಗಲೇ ಅಡಿಕೆಗೆ ಶನಿ ಶುರುವಾಗಿತ್ತು.



ಆದರೆ ಆಗ ಕಣ್ಣು-ಬಾಯಿ ಮುಚ್ಚಿಕೊಂಡಿದ್ದ ಸ್ವಯಂಘೋಷಿತ ಅಡಿಕೆ ಬೆಳೆಗಾರರ ಸಂರಕ್ಷಕರಾದ ಕಾಗೇರಿ-ಅನಂತ್ಮಾಣಿ ವಗೈರೆಗಳು ಈಗ ಅಡಿಕೆ ತೋಟಿಗರಿಗೆ ಮಂಕುಬೂದಿ ಎರಚುತ್ತಿದ್ದಾರೆ. ಆರೋಗ್ಯಕ್ಕೆ ಹಾನಿ ಮಾಡುವ ತಿನ್ನುವ ವಸ್ತುಗಳ ಲಿಸ್ಟ್ ಅಡಿಕೆ ಸೇರಿದಾಗ ಅಡಿಕೆ ಬೆಳೆಗಾರರು ಪ್ರತಿಭಟಿಸಿದ್ದರು; ಅಡಿಕೆಯನ್ನು ಮಾರಕ ಆಹಾರ ಪಟ್ಟಿಯಿಂದ ಹೊರಗಿಡುವಂತೆ ಒತ್ತಾಯಿಸಿದ್ದರು. ಆದರೆ ಅಂದು ಈ ಕಾಗೇರಿ-ಅನಂತ್ಮಾಣಿ-ಹೆಬ್ಬಾರ್-ಶಾಂತ್ವೆಗ್ಡೆ...



ಮುಂತಾದವರು ಬಾಯ್ತುಂಬ ಎಲೆ-ಅಡಿಕೆ-ತಂಬಾಕು ತುಂಬಿಕೊಂಡು ರಸಗವಳ ಮೆಲ್ಲುತ್ತಿದ್ದರೇ ಹೊರತು ಅಡಿಕೆ ಬೆಳೆಗಾರರ ಬಗ್ಗೆ ಕಾಳಜಿ- ಕಳಕಳಿಯಿಂದ ಪ್ರತಿರೋಧ ತೋರಿಸಿರಲಿಲ್ಲ!!

ಅಡಿಕೆ ಅಸ್ತಿತ್ವಕ್ಕೆ ದೊಡ್ಡ ಹೊಡೆತ ಬಿದ್ದಿದ್ದು 2004ರಲ್ಲಿ; ಆಗ ವಿಶ್ವ ಆರೋಗ್ಯ ಸಂಸ್ಥೆಯ ಕ್ಯಾನ್ಸರ್ ಸಂಶೋಧನಾ ಅಂತಾರಾಷ್ಟ್ರೀಯ ಸಂಘಟನೆ ಅಡಿಕೆಯಲ್ಲಿ ಕ್ಯಾನ್ಸರ್‌ಗೆ ಕಾರಣವಾಗುವ ಅಂಶಗಳಡಗಿವೆ ಎಂದು ಹೇಳಿತ್ತು. ಆ ವರದಿ ಬರೀ ಅಡಿಕೆಯಷ್ಟೇ ಜಗಿದರೂ ಹಾನಿಕಾರಕ ಎಂದೇ ತರ್ಕಿಸಿತ್ತು. ಆ ನಂತರ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ (2006) 'ಅಡಿಕೆ ಆರೋಗ್ಯ ಮಾರಕ' ಎಂದು ಘೋಷಿಸಿತ್ತು. ಅಡಿಕೆ ನಿಷೇಧ ಅನುಮಾನ ಬಲವಾಗಿದ್ದೇ 2006ರ ನಂತರ. ತಕ್ಷಣ ಹೈಕೋರ್ಟ್‌ಗೆ ಶಿವಮೊಗ್ಗದ 'ಮ್ಯಾಮ್‌ಕೋಸ್' ಎಂಬ ಸಹಕಾರಿ ಅಡಿಕೆ ಸಂಸ್ಥೆ ಹೋಯ್ತು; ಅಡಿಕೆ ಹಾನಿಕಾರಕ ಅಲ್ಲವೆಂದು ವಾದಿಸಿತು. ಇದಕ್ಕೆ ಆಧಾರವಾಗಿ ಮೈಸೂರಿನ ಸಿಎಫ್‌ಟಿಆರ್‌ಐ ಅಧ್ಯಯನ ಸಂಸ್ಥೆ ನೀಡಿದ ವರದಿ ಕೋರ್ಟಿಗೆ ಕೊಟ್ಟಿತು. ಹೈಕೋರ್ಟ್ 'ಅಡಿಕೆ ಹಾನಿಕಾರಕ ಅಲ್ಲ' ಎಂಬ ತೀರ್ಪು ನೀಡಿತು. ಇದನ್ನು ಕಾಂಗ್ರೆಸ್ ಮುಂದಾಳತ್ವದ ಯುಪಿಎ ಸರ್ಕಾರ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೇನೂ ಹೋಗಲಿಲ್ಲ.

ಆದರೆ ಗುಟ್ಕಾ ನಿಷೇಧದ ಬಗ್ಗೆ ವಿಚಾರ ನಡೆದ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಿಬ್ಬರ ಪೀಠವು ಗುಟ್ಕಾ-ಪಾನ್ ಮಸಾಲಾದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಸ್ವತಂತ್ರ ತಜ್ಞರ ತಂಡದಿಂದ ಅಧ್ಯಯನ ನಡೆಸಿ ವರದಿ ಕೊಡುವಂತೆ ಕೇಂದ್ರ ಆರೋಗ್ಯ ಇಲಾಖೆಗೆ ಸೂಚಿಸಿತ್ತು. ಈ ಆದೇಶದಂತೆ ಏಳು ಸಂಸ್ಥೆಗಳನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿತ್ತು. ಈ ತಂಡದಲ್ಲಿ ಅಡಿಕೆ ಬಗ್ಗೆ ಅನುಮಾನಗಳಿದ್ದವರೂ ಇದ್ದಿದ್ದರು. ಈ ಸಮಿತಿ ಗುಟ್ಕಾ ನಿಷೇಧಿಸಲು ಶಿಫಾರಸು ಮಾಡಿತ್ತು; ಜತೆಗೆ ಅಡಿಕೆಯೂ ಜೀವಕ್ಕೆ ಅಪಾಯಕರ ಎಂದು ವರದಿಯಲ್ಲಿ ಸ್ಪಷ್ಟವಾಗಿ ಬರೆದಿತ್ತು! ಗುಟ್ಕಾ ನಿಷೇಧಿಸಿದಾಗ ಅಡಿಕೆ ಬೆಳೆಗಾರರ ಬದುಕೇ ಬರಿದಾಯ್ತೆಂದು ಹುಯಿಲಿಟ್ಟವರು, ಅಡಿಕೆಗೆ ಗಂಡಾಂತರ ಬಂದಿದ್ದು ಪರಿಗಣಿಸಲೇ ಇಲ್ಲ.

ಗುಟ್ಕಾ ನಿಷೇಧಿಸಿದಾಗ ಅಡಿಕೆ ದಂಧೆಗೆ ಹೊಡೆತ ಬೀಳುವ ಸಾಧ್ಯತೆಯಿತ್ತು. ಏಕೆಂದರೆ, ಬರೀ ಅಡಿಕೆ-ಕವಳ ತಿನ್ನೋರಿಗಿಂತ ತಂಬಾಕು, ಜರ್ದಾ ಮತ್ತಿತರ ಅಮಲುಕಾರಕ ರಾಸಾಯನಿಕ ಬೆರೆಸಿದ ಅಡಿಕೆ ಪುಡಿ ಮೆಲ್ಲೋರೇ ಜಾಸ್ತಿ. ಹೀಗಾಗಿ ಅಡಿಕೆಯಿಂದ ಅಡ್ಡ ಪರಿಣಾಮ ಪರೋಕ್ಷವಾಗಿ ಆಗುತ್ತಿದೆ. ಆದರೆ ಗುಟ್ಕಾ ನಿಷೇಧಿಸಿದಾಗ ಕೂಗಾಡಿದ ಅಡಿಕೆ ಬೆಳೆಗಾರರ ಮುಖಂಡ ಮಣಿಗಳು ಆ ಬಳಿಕ ತಣ್ಣಗಾಗಿದ್ದರು. ಇದಕ್ಕೆ ಕಾರಣ ಇಷ್ಟೇ. ಗುಟ್ಕಾ ನಿಷೇಧದಿಂದ ಅಡಿಕೆ ಮಾರುಕಟ್ಟೆಗೆ ಧಕ್ಕೆಯಾಗಿರಲಿಲ್ಲ. ಹೇಗೆಂದರೆ, ಅಡಿಕೆ ಪುಡಿಯ ಜತೆ-ಜತೆಗೆ ತಂಬಾಕು, ಜರ್ದಾ ಪುಡಿಗಳ ಪ್ಯಾಕೆಟ್ ಕದ್ದು ಮಾರಲಾಗುತ್ತಿತ್ತು. ಕಡೆಕಡೆಗೆ ತಂಬಾಕುಯುಕ್ತ-ಮಾರಕ ರಾಸಾಯನಿಕ ಭರಿತ ಅಡಿಕೆಯ ಪಕ್ಕಾ ಗುಟ್ಕಾಗಳೇ ರಾಜಾರೋಷವಾಗಿ ಬಿಕರಿಯಾಗತೊಡಗಿತು. ಇದು ಅಡಿಕೆ ಮಾಫಿಯಾಕ್ಕೆ ನೆಮ್ಮದಿ ನೀಡಿತ್ತು.

ಈಗ ಶುದ್ಧ ಅಡಿಕೆಗೇ ನಿಷೇಧದ ಭಯ ಬಂದಿದೆ! ಗುಟ್ಕಾ ನಿಷೇಧದ ಹೊತ್ತಲ್ಲಿ ಸುಪ್ರೀಂಕೋರ್ಟಿಗೆ ಕೊಡಲಾಗಿರುವ 'ತಜ್ಞ ತಂಡ'ದ ವರದಿ ದೋಷಪೂರಿತ; ಅಡಿಕೆಯ ವೈದ್ಯಕೀಯ ಗುಣಲಕ್ಷಣ, ಜಗತ್ತಿನ ಬೇರೆಡೆ ಅಡಿಕೆಗೆ ಪೂರಕವಾಗಿ ನಡೆದಿರುವ ಅಧ್ಯಯನ ವರದಿಗಳನ್ನು ಪರಿಗಣಿಸಿಲ್ಲ. ಹಾಗಾಗಿ ಅಡಿಕೆಯ 'ಮಾನ' ಹೋಗುವಂತಾಗಿದೆ. ಎಂದೆಲ್ಲ ಕೃಷಿ ತಜ್ಞರು, ವಿಜ್ಞಾನಿಗಳು ಹೇಳಿದರೂ ಅದನ್ನು ಕೇಳುವ ವ್ಯವಧಾನ ಕಾಗೇರಿ-ಅನಂತ್ಮಾಣಿಯಂಥಾ ಸೋಕಾಲ್ಡ್ ಅಡಿಕೆ ಆರಾಧಕರಿಗೆ ಇರಲಿಲ್ಲ. ಆಗ ಯಾವ ಎಲೆಕ್ಷನ್ ದರ್ದೂ ಇರಲಿಲ್ಲ; ಅಧಿಕಾರದ ಅಮಲಲ್ಲಿ ವಿವಿಧ ವ್ಯವಹಾರದಲ್ಲವರು ಆಗ ಬಿಜಿಯಾಗಿದ್ದರು.

ಇಂಥ ಆಷಾಢಭೂತಿಗಳಿಂದಾಗಿಯೇ ಇವತ್ತು ಅಡಿಕೆ ಅವಸಾನದ ಅಂಚಿನಲ್ಲಿದೆ. ಅದನ್ನು ನಂಬಿದ ಕೋಟ್ಯಾಂತರ ...

... ಸಂಕಷ್ಟದಿಂದ ಅಡಿಕೆ ತೋಟಿಗ ಹೊರಬರಬೇಕೆಂದಿದ್ದರೆ, ಭಾವೋದ್ವೇಗಕ್ಕೆ ಒಳಗಾಗದೆ ತಮ್ಮ ಓಟ ಕಾಯುವವರ್‍ಯಾರು? ನಾಟಕ ಮಾಡುವವರ್‍ಯಾರು? ಎಂದು ಯೋಚಿಸಿ ತೀರ್ಮಾನಕ್ಕೆ ಬರಬೇಕಿದೆ. ಅಡಿಕೆ ತೋಟಿಗರ ದಿಕ್ಕೆಡಿಸಿ ಓಟ್ ಬ್ಯಾಂಕ್ ರಾಜಕಾರಣಕ್ಕೆ ಹೊಂಚು ಹಾಕಿರುವ ಕಾಗೇರಿ, ಅನಂತ್ಮಾಣಿ ವಗೈರೆ ಬಿಜೆಪಿ ಭಂಡರು ಒಂದೆಡೆಯಾದರೆ, ಮತ್ತೊಂದೆಡೆ ಅಡಿಕೆ ಬೆಳೆಗಾರ ರಕ್ಷಣೆಯ ಬದ್ಧತೆಯಿಂದ ಸರ್ಕಾರ ಮತ್ತು ನ್ಯಾಯಾಲಯದ ಮಟ್ಟದಲ್ಲಿ ಸಶಕ್ತ ಸಮರ ನಡೆಸುತ್ತಿರುವ ಉಡುಪಿ-ಚಿಕ್ಕಮಗಳೂರು ಸಂಸದ ಜಯಪ್ರಕಾಶ್ ಹೆಗಡೆ ಇದ್ದಾರೆ.

ಅಡಿಕೆ ನಿಷೇಧ ಸುಪ್ರೀಂಕೋರ್ಟಿನಿಂದಾಗದಂತೆ ಜೆಪಿ ನಿಗಾ ವಹಿಸಿದ್ದಾರೆ. ಆತ ದಿಲ್ಲಿಯ ಜವಾಹರ ವಿವಿ ಕ್ಯಾನ್ಸರ್ ಬಯಾಲಜಿ ಸಂಶೋಧನಾ ಕೇಂದ್ರ ಮುಂತಾದ ಸಂಸ್ಥೆಗಳ ವಿಜ್ಞಾನಿಗಳೊಂದಿಗೆ ಅಡಿಕೆಯ ಸಾಧಕ-ಬಾಧಕದ ಬಗ್ಗೆ ಚರ್ಚೆಗೆ ಮುಂದಾಗಿದ್ದಾರೆ; ಅಡಿಕೆ ಕ್ಯಾನ್ಸರ್‌ಕಾರಕವಲ್ಲ ಎಂಬ ವೈಜ್ಞಾನಿಕ ಸಂಶೋಧನಾ ವರದಿ ಸುಪ್ರೀಂಕೋರ್ಟಿಗೆ ಒಪ್ಪಿಸಲು ತಯಾರಿ ನಡೆಸಿದ್ದಾರೆ. ಅಡಿಕೆ ಬೆಳೆಗಾರರನ್ನೂ ಪಾರ್ಟಿಯಾಗಿಸುವಂತೆ ಸುಪ್ರೀಂಗೆ ಮಧ್ಯಂತರ ಅರ್ಜಿ ಹಾಕಲು ಸಿದ್ಧರಾಗಿದ್ದಾರೆ. ಒಟ್ಟಿನಲ್ಲಿ ಕೋರ್ಟ್‌ನಲ್ಲಿ ವ್ಯತಿರಿಕ್ತ ಪರಿಣಾಮ ಆಗದಂತೆ ಎಚ್ಚರ ವಹಿಸುತ್ತಿದ್ದಾರೆ. ಅಡಿಕೆ ಬೆಳೆಗಾರರ ಕಾಪಾಡಲು ಜೆಪಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ; ಕಾಗೇರಿ-ಅನಂತ್ಮಾಣಿಗಳು ನಿಷೇಧದ ಗುಮ್ಮ ತೋರಿಸುತ್ತ ಅಡಿಕೆ ಬೆಳೆಗಾರರ ಭಯದ ಬೆಂಕಿಯಲ್ಲಿ ಬೇಳೆ ಬೇಯಿಸಿಕೊಳ್ಳಲು ಬರೀ ಬಂಡಲ್ ಬಿಡುತ್ತಿದ್ದಾರೆ.

ಇಲ್ಲೊಂದು ಮಹತ್ವ ಅಂಶವಿದೆ. ಬೆಳೆಗಾರರು ಢೋಂಗಿಗಳ ಮಾತಿಗೆ ಮರುಳಾಗಿ ಗೊಂದಲಗೊಳ್ಳುವ ಅವಶ್ಯಕತೆಯೇ ಇಲ್ಲ. ಏಕೆಂದರೆ ಅಡಿಕೆ ನಿಷೇಧಿಸಲು ಕೇಂದ್ರ ಸರ್ಕಾರದಿಂದ ಸಾಧ್ಯವೇ ಇಲ್ಲ. ಕೃಷಿ-ತೋಟಗಾರಿಕೆ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ವಿಷಯ. ಹಾಗೊಮ್ಮೆ ಅಡಿಕೆ ನಿಷೇಧ ಮಾಡುವುದಿದ್ದರೆ ರಾಜ್ಯ ಸರ್ಕಾರವೇ ಮಾಡಬೇಕು. ರಾಜ್ಯ ಸರ್ಕಾರ ಅಡಿಕೆ ನಿಷೇಧದ ಮಾತಾಡಿಲ್ಲ. ಈ ಶಾಸನಾತ್ಮಕ ಅಂಶ ನಾಲ್ಕು ಬಾರಿ ಸಂಸದನಾಗಿರುವ ಅನಂತ್ಮಾಣಿ, ಐದು ಬಾರಿ ಶಾಸಕನಾಗಿರುವ ಕಾಗೇರಿ ಮಾಣಿಗಳ ಹೆಡ್ಡ ತಲೆಗೆ ಹೊಳೆಯುತ್ತಿಲ್ಲ, ಪಾಪ! ಇಂಥ ಅಧಿಕಪ್ರಸಂಗಿ-ಅವಾಂತರಕಾರಿಗಳ ಸಂಸದ-ಶಾಸಕನಾಗಿ ಆಯ್ಕೆ ಮಾಡಿಕೊಂಡಿರುವ ತಪ್ಪಿಗೆ ಜನ ಆತಂಕ-ಅಭದ್ರತೆಗೆ ತುತ್ತಾಗಬೇಕಾಗಿ ಬಂದಿದೆ!

ಒಂದಂತೂ ನಿಜ. ಅಡಿಕೆ ಆರೋಗ್ಯಕ್ಕೆ ಪೂರಕವೂ ಹೌದು; ಮಾರಕವೂ ಹೌದು. ಹಾಗಂತ ಇತಿಹಾಸ-ವಿಜ್ಞಾನ ಎರಡೂ ಹೇಳುತ್ತಿದೆ. ಇದನ್ನು ಅಡಿಕೆ ಬೆಳೆಗಾರರು ಮರೆಯಬಾರದು. ಸದ್ಯಕ್ಕೆ ಕಂಗಾಲಾಗದೆ ಅಡಿಕೆ ಬೆಳೆಗಾರರು, ಅಡಿಕೆ ವ್ಯವಹಾರದ ಸಹಕಾರಿ ಸಂಸ್ಥೆಗಳು ಮತ್ತು ದಲ್ಲಾಳಿ (ವರ್ತಕ)ಗಳು ಒಟ್ಟಾಗಿ ನ್ಯಾಯಾಂಗ ಹೋರಾಟ ಮಾಡಬೇಕು. ಮೋಸಗಾರ ರಾಜಕಾರಣಿಗಳ ದೂರವಿಡಬೇಕು. "ಉಂಡು ವೀಳ್ಯದ ಮೆಂದು, ಅಂದು ಮೇಲಾಗಿ ಮಲಗದವನು ವೈದ್ಯಂಗು ಮೇಲು. ಕೇಳು ಸರ್ವಜ್ಞ" ಎಂದ್ಹೇಳಿದ್ದಾನೆ ಸರ್ವಜ್ಞ, ಅಂದರೆ ವೀಳ್ಯದೆಲೆ ಜತೆ ಅಡಿಕೆ ತಿನ್ನಬಹುದೇ ಹೊರತು ಅದೊಂದನ್ನೇ ಸೇವಿಸಬಾರದು. ಚರಕ ಸಂಹಿತೆಯಂತೂ ಕಾಮ ಪ್ರಚೋದಕವಾದ ಅಡಿಕೆ ಬ್ರಹ್ಮಚಾರಿಗಳು ಮತ್ತು ರೋಗಿಗಳು ತಿನ್ನಬಾರದೆಂದೇ ಹೇಳುತ್ತದೆ.

ಹಾಗಾಗಿ ಅಡಿಕೆಯ ಪರ್ಯಾಯ ಬಳಕೆಯತ್ತ ತೋಟಿಗರು ಲಕ್ಷ ಹರಿಸಬೇಕಾಗಿದೆ!!

● ಶುದ್ಧೋಧನ


ಲಂಕೇಶ್ ವಾರ್ಷಿಕ ಚಂದಾ ವಿವರ

ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ..


ಚಂದಾ ವಿವರಗಳು ಹೀಗಿವೆ:
ಒಂದು ವರ್ಷಕ್ಕೆ : 700
ಎರಡು ವರ್ಷಕ್ಕೆ : 1400
ಮೂರು ವರ್ಷಕ್ಕೆ : 2000

ಡಿಡಿ/ಚೆಕ್‌ಗಳನ್ನು 'ಲಂಕೇಶ್' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ.
ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-560 004.

ಹೆಚ್ಚಿನ ಮಾಹಿತಿಗಾಗಿ: 9880302817/080-266764



ಬರಹ-ಬದುಕಿಗೆ ಮುಖಾಮುಖಿಯಾದ ಅಪ್ರತಿಮ ಸಂಸ್ಕೃತಿ ಚಿಂತಕ



ಯಾವುದೇ ಒಬ್ಬ ಲೇಖಕ ಎಷ್ಟು ಬರೆದಿದ್ದಾನೆ, ಯಾವ ಯಾವ ಪ್ರಕಾರಗಳಲ್ಲಿ ಬರೆದಿದ್ದಾನೆ ಎನ್ನುವುದು ಯಾವ ಕಾಲಘಟ್ಟದಲ್ಲಿಯೂ ಮುಖ್ಯವಾಗಬಾರದು. ಮುಖ್ಯವಾಗಬೇಕಾದದ್ದು ಆತ ತನ್ನ ಬರವಣಿಗೆಗೆ ಮುಖಾಮುಖಿಯಾಗಿದ್ದಾನೋ ಇಲ್ಲವೇ ಬೆನ್ನು ಮಾಡಿ ಬದುಕಿರುವನೋ ಎನ್ನುವುದು ಮಾತ್ರ. ಆ ಕುರಿತು ಗಂಭೀರವಾದ ಚರ್ಚೆಗಳೂ ಅಗತ್ಯ. ಬರೆಯುವದಷ್ಟೇ ನನ್ನ ಕೆಲಸ ಬದುಕಿಗೆ ಅದನ್ನು ತಾಳೆ ಹಾಕಿ ನೋಡಬೇಡಿ ಎನ್ನುವ ಬರಹಗಾರರನ್ನು ಓದುವ ಅವಶ್ಯಕತೆ ನನಗಂತೂ ಅನಿಸುವುದಿಲ್ಲ. ಅನೇಕ ಬಾರಿ ಕೆಲ ಖಾಸಗಿ ಪ್ರಕಾಶನ ಸಂಸ್ಥೆಗಳು ಸಿದ್ಧಪಡಿಸುವ ಟಾಪ್ ಟೆನ್ ಪಟ್ಟಿಯಲ್ಲಿ ಬರುವವರ ಬರವಣಿಗೆಯೂ ಬದುಕಿನಿಂದ ವಿಚಲಿತವಾಗಿರುತ್ತದೆ. ಅಂಥವರ ಬರವಣಿಗೆ ಓದಬೇಕೋ.. ಬೇಡವೋ ಎನ್ನುವುದು ಬಹುದೊಡ್ಡ ಜಿಜ್ಞಾಸೆ. ಕೊನೆಯ ಪಕ್ಷ ಆತ ಬರೆದ, ಪ್ರತಿಪಾದಿಸಿದ ವಿಚಾರಗಳಿಗಾದರೂ ತಾವು ಸಾಥ್ ನೀಡಬೇಡವೇ..? ಸುಂದರವಾಗಿ ಬರೆದರೆ ಸಾಕೆ..? ಬರೆದಂತೆ ಬದುಕುವದು ಬೇಡವೇ..? ಎನ್ನುವ ಹಿನ್ನೆಲೆಯಲ್ಲಿ ಯೋಚಿಸುವ ತುರ್ತು ಸಾಹಿತ್ಯದ ಪ್ರಸ್ತುತ ಸಂದರ್ಭದಲ್ಲಂತೂ ಇದ್ದೇ ಇದೆ.

ಕನ್ನಡದ ಅಪರೂಪದ ಬರಹಗಾರರಲ್ಲಿ ಡಾ.ಯು.ಆರ್.ಅನಂತಮೂರ್ತಿ ಒಬ್ಬರು. ಅವರ ಕಥೆಗಳಿರಲಿ, ಕಾದಂಬರಿಗಳಿರಲಿ, ವೈಚಾರಿಕ ಬರಹಗಳಿರಲಿ, ಭಾಷಣಗಳಿರಲಿ, ಮುನ್ನುಡಿಯಿರಲಿ ಅಲ್ಲೆಲ್ಲ ಒಂದು ಬಗೆಯ ಚಲನಶೀಲತೆ ತುಂಬಿತುಳುಕುತ್ತದೆ. ಆ ಗುಣವೇ ಅವರ ಬರವಣಿಗೆಯನ್ನು ಸಾಹಿತ್ಯದ ಶಿಸ್ತಿನಿಂದ ಬರದ ನನ್ನಂಥವನೂ ಕೂಡಾ ಓದುವಂತೆ ಮಾಡುವಲ್ಲಿ ಗೆಲ್ಲುತ್ತದೆ. ಇದೇ ಬಗೆಯ ಸಾಧ್ಯತೆ ಲಂಕೇಶ್ ಮತ್ತು ತೇಜಸ್ವಿಯವರನ್ನು ಬಿಟ್ಟರೆ ಮಿಕ್ಕವರಲ್ಲಿ ಕಾಣುವುದು ಅಪರೂಪ.

ಅನಂತಮೂರ್ತಿಯವರು ಈ ನಾಡು ಕಂಡ ಒಂದು ಅದ್ಭುತ ಪ್ರತಿಭೆ. ಅಪ್ರತಿಮ ಸಂಸ್ಕೃತಿ ಚಿಂತಕ. ಅತ್ಯಂತ ಬಿಕ್ಕಟ್ಟಿನ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಅವರು ತಮ್ಮನ್ನು ತಮ್ಮ ಮಾತು, ಬರಹಗಳ ಮೂಲಕ ಅನಾವರಣಗೊಳಿಸಿಕೊಂಡ ರೀತಿ ಅನನ್ಯವಾದುದು. ಒಂದು ನಾಡಿನ ಸಾಂಸ್ಕೃತಿಕ ಪ್ರಜ್ಞೆಯಾಗಿ ಅದರ ಹಿರಿಮೆಯನ್ನು ಅಲ್ಲಿಯ ಬಹುತ್ವದಿಂದಲೇ ಬಿಂಬಿಸಬೇಕು ಎಂದು ಮತ್ತೆ ಮತ್ತೆ ಅವರು ತಮ್ಮ ಬರಹಗಳಲ್ಲಿ, ಮಾತಿನಲ್ಲಿ ಪ್ರತಿಪಾದಿಸಿದ್ದಾರೆ. ಸ್ವತಃ ಸಮಾಜವಾದಿಯಾಗಿದ್ದರೂ ಅದರ ಸ್ಥಿತಿ ವಾಸ್ತವದಲ್ಲಿ ಏನಿದೆ ಎನ್ನುವುದನ್ನು ಪರಾಮರ್ಶಿಸುತ್ತಲೇ ರಷ್ಯಾದಂತಹ ನೆಲೆಗಳನ್ನು ಮುಂದಿಟ್ಟುಕೊಂಡು ಯೋಚಿಸುತ್ತಾರೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅಪಾರ ನಂಬುಗೆಯಿರುವ ಅನಂತಮೂರ್ತಿಯವರು ಮಾನವೀಯ ಕಾಳಜಿಗೆ ಧಕ್ಕೆ ತರುವ ಸ್ಥಿತಿಯೊಂದು ಬಂದೊದಗಲಿದೆ ಎನ್ನುವಾಗ ಸಿಡಿಮಿಡಿಗೊಳ್ಳುತ್ತಾರೆ. ಅವರು ಈಚೆಗೆ ನರೇಂದ್ರ ಮೋದಿ ವಿಷಯವಾಗಿ ನೀಡಿದ್ದ ಹೇಳಿಕೆ ಇದೇ ರೀತಿಯದ್ದು. ಮೋದಿ ಈ ಗಳಿಗೆಯಲ್ಲಿ ಒಂದು ವ್ಯವಸ್ಥೆಯ ಪ್ರಾತಿನಿಧಿಕ ರೂಪಕವಷ್ಟೆ. ಆ ಬಗ್ಗೆ ಅವರು ಮುಂಚೆನಿಂದಲೂ ಮಾತನಾಡುತ್ತಾ ಬರೆಯುತ್ತಾ ಬಂದಿದ್ದಾರೆ. ಲಂಕೇಶರು ಕೂಡಾ ಹಿಂದೊಮ್ಮೆ ಸಂದರ್ಶನವೊಂದರಲ್ಲಿ "ಈ ದೇಶವನ್ನು ಯಾವುದೇ ಕಾಲಕ್ಕೂ ಫ್ಯಾಸಿಸ್ಟರು ಆಳಲಿಕ್ಕೆ ಬಿಡಬಾರದು" ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

ಅನಂತಮೂರ್ತಿಯವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಅವರನ್ನು ಡಾ. ರಾಜೇಂದ್ರ ಚೆನ್ನಿ ಸಂದರ್ಶನ ಮಾಡಿದ್ದರು (ನಡುಹಗಲಿನಲ್ಲಿ ಕಂದೀಲುಗಳು, ಪು-86). ಆಗ ಅವರು ಪ್ರಶ್ನೆಯ ರಾಜಕಾರಣವನ್ನು ಕುರಿತು ಮಾತನಾಡುತ್ತಾ "ನನ್ನ ಮನಸನ್ನು ಒಣಗಿಸುವ ರಾಜಕೀಯ ನನಗೆ ಬೇಡ. ಇಲ್ಲದೇ ಇದ್ದರೆ ನನ್ನ ಸಾಹಿತ್ಯ ಸೃಷ್ಟಿಗೆ ಬೇಕಾದ ಸಮೃದ್ಧವಾದ ನೆಲೆಯನ್ನೇ ನಾನು ಕಳೆದುಕೊಂಡು ಬಿಡುತ್ತೇನೆ. ಈ ಸಮೃದ್ಧವಾದ ನೆಲೆ ಇಸ್ಲಾಂನಿಂದ ಬಂದಿದೆ, ಕ್ರಿಶ್ಚಿಯಾನಿಟಿಯಿಂದ ಬಂದಿದೆ, ದೇವರು ಇಲ್ಲ ಅನ್ನೋ ವಾದದಿಂದ ಬಂದಿದೆ" ಎನ್ನುತ್ತಾರೆ. ಹೀಗೆ ಮಾತನಾಡುವುದು ಅನಂತಮೂರ್ತಿಯಂಥಾ ಬರಹಗಾರರಿಗೆ ಮಾತ್ರ ಸಾಧ್ಯ. ಅವರ ಬರವಣಿಗೆಯ ಬಗ್ಗೆ ಸಿ.ಎನ್.ರಾಮಚಂದ್ರನ್ (ಪರಂಪರೆ-ಪ್ರತಿರೋಧ, ಪು-122) "ಅನವರತ ಸೃಜನಾತ್ಮಕ ಶೋಧದಲ್ಲಿ ಅವರ ಕಥೆ ಕಾದಂಬರಿಗಳು ವಸಾಹತೋತ್ತರ ಭಾರತೀಯ ಸಮಾಜದ ವೈಚಾರಿಕ-ಸಾಂಸ್ಕೃತಿಕ-ಸಾಹಿತ್ಯಕ ತಿಕ್ಕಾಟಗಳ, ತುಡಿತಗಳ, ಒಳತೋಟಿಗಳ, ದ್ವಂದ್ವಗಳ ರಾಜೀಸೂತ್ರಗಳ ಅಪ್ರತಿಮ ದಾಖಲೆಗಳಾಗುತ್ತವೆ" ಎನ್ನುತ್ತಾರೆ. ನಿಜ, ಅವರ ಕಥೆ ಮತ್ತು ಕಾದಂಬರಿಗಳಲ್ಲಿಯ ಪಾತ್ರಗಳು ಅನಂತಮೂರ್ತಿಯವರ ಮುಖವಾಣಿಯಾಗುತ್ತವೆ.


ಪೂರ್ವಪಶ್ಚಿಮಗಳನ್ನು ಮುಖಾಮುಖಿಯಾಗಿಸುತ್ತಲೇ ಮಾತನಾಡುತ್ತಾ ನಾವೂ ಇಲ್ಲಿ ಇದ್ದೇವೆ ಎನ್ನುವ ಭಾವನೆ ಯುರೋಪಿನ ಜನರಲ್ಲಿ ಮೂಡಿದ್ದೇ 19ನೇ ಶತಮಾನದಲ್ಲಿ. ಜನಪ್ರಿಯ ಮನರಂಜನೆಗಳ ಮೂಲಕ ಅವರು ತಮ್ಮದನ್ನು ನಮ್ಮ ಮೇಲೆ ಹೇರುತ್ತಿರುವ, ಹೇರಿಸಿಕೊಳ್ಳುತ್ತಿರುವ ಬಗ್ಗೆ ಅನೇಕ ಸಂದರ್ಭಗಳಲ್ಲಿ ಅನಂತಮೂರ್ತಿಯವರು ಮಾತನಾಡಿದ್ದಾರೆ ಮತ್ತು ಬರೆದಿದ್ದಾರೆ. 'ಯುಗಪಲ್ಲಟ' ಎಂಬ ಕೃತಿಯಲ್ಲಿ ಬರುವ 'ಶತಮಾನದ ರಾಜಕಾರಣ' ಎಂಬ ಲೇಖನದಲ್ಲಿ 'ವಿದೇಶಿ ಚಾನೆಲ್‌ಗಳು ತೋರುವ ಸುದ್ದಿಗಳನ್ನೇ ಪ್ರಪಂಚದ ಸುದ್ದಿ ಎಂದುಕೊಳ್ಳುತ್ತೇವೆ. ಅಮೆರಿಕಾದಲ್ಲಿ ಪ್ರಪಂಚದ ಸುದ್ದಿ ಎಂದರೆ ಅಮೆರಿಕಾದ್ದೇ. ಆಫ್ರಿಕಾದ ರಾಷ್ಟ್ರಗಳಲ್ಲಿ ಕ್ಷಾಮ ಬಂದರೂ ಅದು ಅವರಿಗೆ ಬಹಳ ವರ್ಷ ತಿಳಿಯುವುದಿಲ್ಲ. ನಾವೂ ಹಾಗೆಯೇ.." ಬಹುತ್ವವನ್ನು ವ್ಯವಸ್ಥಿತವಾಗಿ ನಾಶ ಮಾಡುವ ಎಲ್ಲ ಬಗೆಯ ಹುನ್ನಾರಗಳು ಈ ಬಗೆಯ ಚಟುವಟಿಕೆಗಳಿಂದ ನಡೆದಿವೆ. ಜನರಿಗೆ ಇವಾವುದರ ಹಂಗಿಲ್ಲ. ಅವರದೇ ಮಾತಿನಲ್ಲಿ ಹೇಳುವುದಾದರೆ "ಇವತ್ತು ನಾವು ಬದುಕುತ್ತಿರುವ ರೀತಿ ಹೇಗಿದೆ ಎಂದರೆ ನಮಗೆ ಒಮ್ಮೊಮ್ಮೆ ಬರಬೇಕಾದ ಸಿಟ್ಟಾಗಲೀ ಅಥವಾ ಒಳಗಿನಿಂದ ಬದಲಾವಣೆಗೆ ಬೇಕಾದ ಪ್ರೇರಣೆಯಾಗಲೀ ಉಂಟಾಗುವುದಿಲ್ಲ. ಏಕೆಂದರೆ ನಮ್ಮ ಸಂಸಾರದ ಲಾಭವನ್ನು ಬಿಟ್ಟು ಯೋಚನೆ ಮಾಡುವುದು ಕಷ್ಟವಾಗಿ ಬಿಡುತ್ತದೆ." (ಯುಗಪಲ್ಲಟ, ಪು-55)

ನಮ್ಮ ಜಗಳಗಳನ್ನು ಕೂಡಾ ವೈಚಾರಿಕ ನೆಲೆಯಲ್ಲಿ ನೋಡಬೇಕು ಎನ್ನುವ ಅನಂತಮೂರ್ತಿಯವರು ಬರೀ ಅಹಂಕಾರದ ಮೂಲಕ ಏನನ್ನೂ ಸಾಧಿಸಿದಂತಾಗುವುದಿಲ್ಲ. ಅದರೊಂದಿಗೆ ವೈಚಾರಿಕ ಆಯಾಮವೂ ಇರಬೇಕಾದುದು ಅವಶ್ಯಕ ಎನ್ನುತ್ತಾರೆ. ಎಡ ಮತ್ತು ಬಲಪಂಥೀಯ ಹೋರಾಟ, ಹಿಂಸೆಗಳ ನಡುವಿನ ಸೂಕ್ಷ್ಮತೆಯನ್ನು ಸ್ಪಷ್ಟವಾಗಿ ಗುರುತಿಸುವ ಅವರು ಬಲಪಂಥೀಯ ಹಿಂಸೆಯಲ್ಲಿ ಕೋಮುವಾದ ಅಡಕವಾಗಿರುತ್ತದೆ. ಅದಕ್ಕೆ ಸಾಕಷ್ಟು ಕಡೆಗಳಲ್ಲಿ ತಮ್ಮ ಲೇಖನಗಳ ನಡುವೆ ಅಲ್ಲಲ್ಲಿ ಉದಾಹರಣೆ ಕೊಟ್ಟಿರುವುದೂ ಇದೆ. ಎದುರಿದ್ದವನನ್ನು ಗೌರವಿಸುವ ಗುಣ ಇರಬೇಕು ಎನ್ನುವ ಗಾಂಧೀಜಿಯವರ ತತ್ವವನ್ನು ಅಪಾರವಾಗಿ ನಂಬುವ ಅವರು "ಒಬ್ಬನು ಹೇಳಿದುದನ್ನು ಇನ್ನೊಬ್ಬರು ಒಪ್ಪದಿದ್ದರೂ ಅನಿಸಿದ್ದನ್ನು ಹೇಳಿ, ಚರ್ಚೆ ಮಾಡಿ ಆದರೂ ಸ್ನೇಹದಿಂದ ಇದ್ದು ಅಪ್ರಾಮಾಣಿಕವಾಗದಂತೆ ಇರುವುದನ್ನು ಕಲಿಯಬೇಕು" ಎನ್ನುವ ಅವರ ತಾತ್ವಿಕತೆಯನ್ನು ಈ ಹೊತ್ತಿನ ಬರಹಗಾರರು ರೂಢಿಸಿಕೊಳ್ಳಬೇಕಿದೆ. ಅನಂತಮೂರ್ತಿಯವರು ಸುಖಾಸುಮ್ಮನೇ ಅಲ್ಪಸಂಖ್ಯಾತರ ಪರವಾಗಿ ಮಾತನಾಡಿದವರಲ್ಲ. ಅವರೂ ಈ ದೇಶದ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಅತಿ ಮುಖ್ಯ ಭಾಗ. ಹಾಗೆಯೇ ಅವರು ಮೂಲಭೂತವಾದಿಗಳಾಗುವ, ಕೋಮುವಾದಿಗಳಾಗುವ ಕ್ರಮವನ್ನು ಮಾತ್ರ ಅವರು ಕಠೋರವಾಗಿ ಟೀಕಿಸದೇ ಬಿಡುವವರಲ್ಲ. 21-12-2007 ರಂದು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲಿನಲ್ಲಿ ಮಾತನಾಡುವಾಗ "ಅಲ್ಪಸಂಖ್ಯಾತರು ಕೋಮುವಾದಿಗಳಾದರೆ ಆ ಕೋಮಿನ ಸರ್ವನಾಶ. ಆದರೆ ಬಹುಸಂಖ್ಯಾತರು ಕೋಮುವಾದದಲ್ಲಿ ತೊಡಗಿದ್ದರೆ ಅದು ಇಡೀ ದೇಶದ ನಾಶ" ಎಂದು ಹೇಳುವ ಮೂಲಕ ಎರಡೂ ಸಮೂಹಗಳ ಕೋಮುವಾದದ ಪರಿಣಾಮವನ್ನು ಅತ್ಯಂತ ವಸ್ತುನಿಷ್ಠವಾಗಿ ಚರ್ಚಿಸಿದರು. (ಈ ಮುಖೇನ- ಎಚ್.ಎಸ್.ವಿ. ಪು-158-159)

ಅನಂತಮೂರ್ತಿಯವರು ಒಬ್ಬ ಅಪರೂಪದ ಬರಹಗಾರ, ಸಾಂಸ್ಕೃತಿಕ ಚಿಂತಕ. ಮುಖ್ಯವಾಗಿ ಗಾಂಧೀಜಿಯವರ ವಿಚಾರಗಳಿಂದ ಕಳಚಿಕೊಳ್ಳಲಾಗದ ಗಾಢ ಪ್ರಭಾವವೂ ಅಲ್ಲಿದೆ. "ಕೋಮುವಾದವನ್ನು ಸಮರ್ಥವಾಗಿ ಹಿಮ್ಮೆಟ್ಟಿಸಬೇಕಾದರೆ ನಾವು ರಾಮಾಯಣ, ಮಹಾಭಾರತ ಭಗವದ್ಗೀತೆ ಉಪನಿಷತ್ತುಗಳನ್ನು ಸರಿಯಾದ ನೆಲೆಯಲ್ಲಿ ಸಮುದಾಯಕ್ಕೆ ದಾಟಿಸುವ ಪ್ರಯತ್ನ ಮಾಡಬೇಕು." (ಈ ಮುಖೇನ ಎಚ್.ಎಸ್.ವಿ. ಪು-160) ಕೊನೆಗೂ ಅನಂತಮೂರ್ತಿಯವರು ಈ ಕೋಮುವಾದವನ್ನು ಹಿಮ್ಮೆಟ್ಟಿಸುವಲ್ಲಿ ರಾಮಾಯಣ, ಮಹಾಭಾರತ, ಉಪನಿಷತ್ತುಗಳ ಮೊರೆ ಹೋಗುವುದು ಅವರ ಮೇಲಿರುವ ಗಾಂಧೀಜಿಯವರ ಪ್ರಭಾವವನ್ನು ಗ್ರಹಿಸಿದವರಿಗೆ ಅಸಹಜವೆನಿಸುವುದಿಲ್ಲ.




● ಡಾ.ಎಸ್.ಬಿ.ಜೋಗುರ



ಭಿನ್ನ, ಅನನ್ಯ


ಸುಮಾರು ಎರಡು ದಶಕಗಳ ಹಿಂದಿನ ಮಾತು. ಮಂಗಳೂರು ಪರಿಸರದಲ್ಲಿ ಇಬ್ಬರು ಹಿರಿಯ ಚಿಂತಕರ ಉಪಸ್ಥಿತಿ ಮತ್ತು ಉಪನ್ಯಾಸಗಳು ಎಲ್ಲೇ ಇರಲಿ ನಾನು ಅಲ್ಲಿ ಹಾಜರಿರುತ್ತಿದ್ದೆ. ಆ ಇಬ್ಬರು ಹಿರಿಯರೇ- ಡಾ. ಶಿವರಾಮ ಕಾರಂತರು ಮತ್ತು ಡಾ. ಯು.ಆರ್.ಅನಂತಮೂರ್ತಿಯವರು.

ಶಿವರಾಮ ಕಾರಂತರ ಬಗ್ಗೆ ಹೇಳಬೇಕಾಗಿಯೇ ಇಲ್ಲ. ಯಾರ ಮುಲಾಜಿಗೆ ಒಳಗಾಗಿಯೂ ಅವರು ಮಾತನಾಡುವವರಲ್ಲ. ಅಲ್ಲದೆ, ಎಲ್ಲವನ್ನೂ ಅವರು ವೈಜ್ಞಾನಿಕ ನೆಲೆಯಲ್ಲಿಯೇ ವಿಶ್ಲೇಷಿಸುತ್ತಿದ್ದುದರಿಂದ ಅವರ ಮಾತುಗಳಿಗೆ ವಿಶೇಷ ತೂಕವಿರುತ್ತಿತ್ತು. ಉಷ್ಣವಿದ್ಯುತ್ ಸ್ಥಾವರದ ಬೂದಿಯಿಂದ ಹಾನಿಯಿಲ್ಲ. ಅದರಿಂದ ಇಟ್ಟಿಗೆ ಮಾಡುತ್ತೇವೆ ಎಂದು ಉಷ್ಣವಿದ್ಯುತ್ ಸ್ಥಾವರದ ಸಮರ್ಥಕರು ಬೂಸಿ ಬಿಡುತ್ತಿದ್ದಾಗ, ಸ್ಥಾವರದಿಂದ ಹೊರಬೀಳುವ ಬೂದಿಯ ಪ್ರಮಾಣವನ್ನೂ, ಅದರಿಂದ ಇಟ್ಟಿಗೆ ತಯಾರಿಸಲು ಬೇಕಾಗುವ ನೀರನ್ನೂ ಕರಾರುವಾಕ್ಕಾಗಿ ಲೆಕ್ಕಹಾಕಿ, ಅಷ್ಟೊಂದು ನೀರನ್ನು ಎಲ್ಲಿಂದ ತರುತ್ತೀರಿ ಎಂದು ಪ್ರಶ್ನಿಸಿದ್ದಲ್ಲದೆ ಕೊನೆಗೆ 'ಆ ಬೂದಿಯಿಂದ ಹಣೆಗೆ ನಾಮ ಹಾಕಿಕೊಳ್ಳಬೇಕಷ್ಟೇ' ಎಂದು ಛೇಡಿಸಿದ್ದರು. ಪರಿಸರ ಚಳವಳಿಯ ಪ್ರಶ್ನೆ ಬಂದಾಗ ಅಲ್ಲಿ ಕಾರಂತರಿದ್ದರೆಂದರೆ ಚಳವಳಿಕಾರರಿಗೆ ಅದೇನೋ ಧೈರ್ಯ ಬರುತ್ತಿತ್ತು, ಅದೇ ಹೊತ್ತಿನಲ್ಲಿ ಸರಕಾರದ ಮಂದಿ ಗಡಗಡ ನಡುಗುತ್ತಿದ್ದರು.



ಅನಂತಮೂರ್ತಿಯವರೂ ಹಾಗೆಯೇ. ಅವರು ಯಾವ ವಿಚಾರವನ್ನೇ ಪ್ರಸ್ತಾಪಿಸಲಿ ಅಲ್ಲಿ ಒಂದು ಭಿನ್ನತೆ ಇರುತ್ತದೆ, ಅನನ್ಯತೆ ಇರುತ್ತದೆ, ಅನುಭವ ಮತ್ತು ಜ್ಞಾನಬಲದ ವಿಶಿಷ್ಟ ಆಲೋಚನೆಗಳಿರುತ್ತವೆ, ಇತರರಿಗೆ ಥಟ್ಟನೆ ಕಾಣದ ಒಳನೋಟಗಳಿರುತ್ತವೆ. ಕಳೆದ ಶತಮಾನದ ಕೊನೆಯ ದಶಕವೆಂದರೆ ಅದು ದಕ್ಷಿಣಕನ್ನಡ ಜಿಲ್ಲೆಯ ಮಟ್ಟಿಗೆ ಪರಿಸರ ಪರ ಹೋರಾಟಗಳು ಉಚ್ಛ್ರಾಯಸ್ಥಿತಿಯನ್ನು ತಲುಪಿದ್ದ ಸಮಯ. ಕೊಜೆಂಟ್ರಿಕ್ಸ್ ವಿದ್ಯುತ್ ಸ್ಥಾವರದ ವಿರುದ್ಧ ತೀವ್ರ ಹೋರಾಟ ನಡೆಯುತ್ತಿದ್ದ 1995ರ ಸುಮಾರಿಗೆ ಮಂಗಳೂರಿನಲ್ಲಿ ಇದೇ ಸಂಬಂಧ ಚಾರಿತ್ರಿಕವಾದ ಒಂದು ಸಮಾವೇಶ ನಡೆಯಿತು. ಮಂಗಳೂರಿನ ನೆಹರೂ ಮೈದಾನ ಪ್ರತಿಭಟನಾಕಾರರಿಂದ ಅಕ್ಷರಶಃ ತುಂಬಿಹೋಗಿತ್ತು. ಕಾರಂತರು, ಕುಸುಮಾ ಸೊರಬ ಮೊದಲಾದ ಅನೇಕ ಘಟಾನುಘಟಿ ಪರಿಸರವಾದಿಗಳು ಭಾಷಣಕಾರರಾಗಿ ಅದರ ಮಹತ್ವ ಹೆಚ್ಚಿಸಿದ್ದರು. ಆ ಸಭೆಯಲ್ಲಿ ಅನಂತಮೂರ್ತಿಯವರೂ ಭಾಗವಹಿಸಿದ್ದು ಸದರಿ ಪರಿಸರ ಪರ ಹೋರಾಟದ ಅಗತ್ಯವನ್ನು ಕುರಿತು ಮಾತಾಡುತ್ತಾ ಅವರು ಆಡಿದ ಮಾತು ಇಂದಿಗೂ ನನಗೆ ನೆನಪಿದೆ. ಅವರು,

ತಾಯಿಯ ಗುಣವುಳ್ಳ ಅನಂತಮೂರ್ತಿ



ನಾನು ಮೊಟ್ಟಮೊದಲು ಓದಿ, ವಿಪರೀತ ಹಚ್ಚಿಕೊಂಡ ...ಡದ ಕಾದಂಬರಿಯೆಂದರೆ 'ಸಂಸ್ಕಾರ'. ಬಹುಶಃ ಆ ...ಸ್ತಕ ನನ್ನನ್ನು ಆವರಿಸಿಕೊಂಡಷ್ಟು ಬೇರೆ ಯಾವ ಪುಸ್ತಕವೂ ...ನ್ನು ಆವರಿಸಿಲ್ಲ.

ನಾನು ಆ ಕಾದಂಬರಿಯನ್ನು ಪಿಯುಸಿಯಲ್ಲಿದ್ದಾಗಲೇ ... ಮುಗಿಸಿದ್ದೆ. ಹಾಗಂತ ನನಗದು ಅರ್ಥವಾಗಿತ್ತೆಂದಲ್ಲ. ...ರ ಕಥಾವಸ್ತು ಬ್ರಾಹ್ಮಣರು, ಅಗ್ರಹಾರ, ಪ್ರಾಣೇಶಾಚಾರ್ಯರ ...ತ ಇವೆಲ್ಲ ನನಗೆ ತೀರ ಅಪರಿಚಿತವಾಗಿದ್ದರಿಂದಲೋ ...ಲೋ ಆ ಕಾದಂಬರಿ ಏನನ್ನು ಹೇಳುತ್ತಿದೆ ಎಂದೇ ...ಗೆ ಅರ್ಥವಾಗಿರಲಿಲ್ಲ. ಆದರೆ ನನ್ನನ್ನು ಹಿಡಿದಿಟ್ಟದ್ದು ...ಕಾದಂಬರಿಯ ಭಾಷೆ ಮತ್ತು ನಾರಣಪ್ಪನ ಬಂಡಾಯ ...ವೃತ್ತಿ.

ನಾರಣಪ್ಪ ಎಂಬ ಕಥಾಪಾತ್ರವೇ ನನಗೆ ಹೊಸದಾಗಿತ್ತು. ...ನ ಬಂಡಾಯದ ತೀವ್ರತೆ ಆಗಷ್ಟೆ ಪಿಯುಸಿ ಓದುತ್ತಿದ್ದ ...ನ್ನು ಬಹಳ ದಿನಗಳವರೆಗೂ ಕಾಡಿತ್ತು. ಕೆಲವೊಮ್ಮೆ ...ನ್ನೊಳಗೂ ಒಬ್ಬ ನಾರಣಪ್ಪ ಇರಬಹುದೇ ಎಂಬ ಗುಮಾನಿ ...ಸ್ಕಾರ' ಓದಿದ ಮೇಲೆ ನನ್ನಲ್ಲಿ ವಿಪರೀತವಾಗಿತ್ತು. ಈ ...ರಣಪ್ಪ ಎಂಥ ವ್ಯಕ್ತಿ ಎಂದರೆ ಆತ ಸಂಭಾವಿತರಂತೆ ...ಸುವವರನ್ನು ಹೊಕ್ಕು ಚಕಿತಗೊಳಿಸಬಲ್ಲ ಮನುಷ್ಯ. ... ಕಾಲದಲ್ಲಿ ನಾನು ಥೇಟ್ ಪ್ರಾಣೇಶಾಚಾರ್ಯನಂತಹ ...ಮನುಷ್ಯನಾಗಿದ್ದೆ. ವಿಪರೀತ ಮುಜುಗರದ, ಮುಲಾಜಿನಿಂದ ...ವರ್ತಿಸುವ, ಸಾಫ್ಟ್ ಅನಿಸುವಂಥ ವ್ಯಕ್ತಿ. ಆದ್ದರಿಂದಲೋ ...ಲೋ ನಾರಣಪ್ಪನನ್ನು ನೆನೆಸಿದರೆ ನನಗೇಕೋ ಒಳಗೊಳಗೇ ...ಪುಕುಪುಕು. ಆತ ನನ್ನ ಹೊಕ್ಕ ಮೇಲಂತೂ ನನ್ನೊಳಗೆ ...ನ ನಾರಣಪ್ಪನಿಗೂ, ಪ್ರಾಣೇಶಾಚಾರ್ಯನಿಗೂ ಸದಾ ಜಗಳ. ... ಜಗಳವನ್ನು ಪರಿಹರಿಸುವುದರಲ್ಲೇ ನನ್ನ ಕಾಲ ...ಯುವಾಗುತಿತ್ತು.

ಪ್ರಾಣೇಶಾಚಾರ್ಯನ ವಿಶೇಷತೆಯೆಂದರೆ ಅವರ ತಾಯಿ ...ಮನಸ್ಸು. ಮೂಲತಃ ಪೋಷಿಸುವಂತಹದ್ದು. ಮೊದಲು ... ಕಾಯಿಲೆಬಿದ್ದ ಹೆಂಡತಿಯನ್ನು ಪೋಷಿಸುವ ಅವರು ...ತರ ಪುಟ್ಟನ ಜೊತೆಗೂ ಅಂತಹದ್ದೇ ಸಂಬಂಧ ...ಟ್ಟಿಕೊಳ್ಳುತ್ತಾರೆ ಎಂದು ನನಗನಿಸುತ್ತದೆ. ಆದರೆ ...ರಣಪ್ಪನದ್ದು ಸ್ಫೋಟಿಸುವ ವ್ಯಕ್ತಿತ್ವ. ಕಾದಂಬರಿಯಲ್ಲಿ ... ಗಮನ ಸೆಳೆದ ಅಂಶವೆಂದರೆ ಪ್ರಾಣೇಶಾಚಾರ್ಯರು ...ೀ ಅಗ್ರಹಾರವನ್ನೇ ಪ್ರಭಾವಿಸುತ್ತಿರುತ್ತಾರೆ. ಕಾದಂಬರಿ ...ಡ ಹಾಗೇ ಹೇಳುತ್ತದೆ. ಆದರೆ ವಾಸ್ತವದಲ್ಲಿ ...ಣೇಶಾಚಾರ್ಯರ ಪ್ರಭಾವಕ್ಕೆ ಒಳಗಾಗುವರು ಇಬ್ಬರು ...ತ್ರ ಒಬ್ಬ ನಾರಣಪ್ಪ, ಮತ್ತೊಬ್ಬ ಪುಟ್ಟ. ನಾರಣಪ್ಪ ...ಣೇಶಾಚಾರ್ಯರ ಜೊತೆ ಯುದ್ಧಕಿಳಿಯುವುದೇ ತಾನು ...ರ ಪ್ರಭಾವಕ್ಕೊಳಗಾಗುತ್ತಿದ್ದೇನೆಂಬ ಗುಮಾನಿಯಿಂದ. ...ರಿಂದ ತಪ್ಪಿಸಿಕೊಳ್ಳುವ ಇರಾದೆಯಿಂದ. ಆದರೆ, ಅದೇ ...ಸಂದರ್ಭದಲ್ಲಿ ಸ್ವತಃ ಪ್ರಾಣೇಶಾಚಾರ್ಯರು ಕೂಡ ...ಅರಿವಿಲ್ಲದಂತೆ ನಾರಣಪ್ಪನ ಪ್ರಭಾವಕ್ಕೆ ಸಿಲುಕುತ್ತಾರೆ. ...ಗುಮಾನಿ ಅವರಿಗಿರುವುದರಿಂದ ಅವರು ಅವನಿಂದ ...ತಪ್ಪಿಸಿಕೊಳ್ಳುವ ಯತ್ನವನ್ನೂ ಮಾಡುತ್ತಾರೆ. ಅಂತಿಮವಾಗಿ ...ಣೇಶಾಚಾರ್ಯರೂ ಕೂಡ ಬ್ರಾಹ್ಮಣ್ಯವನ್ನು ತೊರೆಯುತ್ತಾರೆ. ...ರೆ ಅವರು ನಾರಣಪ್ಪನಂತೆ ಅತಿಗೆ ಹೋಗುವುದಿಲ್ಲ. ... ಜೀವಪೋಷಕ ಗುಣವನ್ನು ಹೊತ್ತುಕೊಂಡೇ ಅವರು ಅಗ್ರಹಾರವನ್ನು ಬಿಟ್ಟು ನಡೆಯುತ್ತಾರೆ.

ನಾರಣಪ್ಪ ಮತ್ತು ಪ್ರಾಣೇಶಾಚಾರ್ಯರೆಂಬ ಎರಡು ವ್ಯಕ್ತಿತ್ವಗಳು ಅನಂತಮೂರ್ತಿಯವರೇ ಆಗಿರಬಹುದೆಂಬ ಸಣ್ಣ ಗುಮಾನಿ ನನ್ನದು. ಅವರೊಳಗಿನ ಸಂಘರ್ಷವೇ ಹೀಗೆ ಎರಡು ವ್ಯಕ್ತಿತ್ವಗಳಾಗಿ ರೂಪುತಾಳಿರಬಹುದು. 'ಸಂಸ್ಕಾರ' ಕಾದಂಬರಿಯ ಒಂದು ಹಂತದವರೆಗೂ ಕಾಣಿಸಿಕೊಳ್ಳುವ ನಾರಣಪ್ಪ ನಂತರ ತನ್ನ ಸಾವಿನ ಮೂಲಕವೇ ಇಡೀ ಅಗ್ರಹಾರವನ್ನು ಕಾಡತೊಡಗುತ್ತಾನೆ. ಅಂದರೆ ಅವನು




ದೈಹಿಕವಾಗಿ ಸತ್ತಿದ್ದರೂ ಅಗ್ರಹಾರದ ಜನರ ಮನಸ್ಸಿನಲ್ಲಿ ಜೀವಂತವಿದ್ದಾನೆ. ಅವರ ದೈನಂದಿನ ಬೇಕುಬೇಡಗಳನ್ನೇ ನಿಯಂತ್ರಿಸುವಷ್ಟರ ಮಟ್ಟಿಗೆ ಆತ ಅವರನ್ನು ಪೀಡಿಸುತ್ತಾನೆ. ಆದರೆ ಕಾದಂಬರಿಯಲ್ಲಿ ಅಂತಿಮವಾಗಿ ಎದ್ದು ಕಾಣುವುದು ಪ್ರಾಣೇಶಾಚಾರ್ಯರೇ. ಕಾದಂಬರಿಕಾರನ ಗಮನವಿರುವುದು ಕೂಡ ಪ್ರಾಣೇಶಾಚಾರ್ಯರ ಕಡೆಗನೆ. ಆದರೆ, ಹಿನ್ನೆಲೆಯಲ್ಲಿ ನಾರಣಪ್ಪನೂ ಇದ್ದಾನೆ, ಆತ ನೇರವಾಗಿ ಕಾಣಿಸಿಕೊಳ್ಳದಿದ್ದರೂ ಅಗ್ರಹಾರ ಬಿಡುವ, ಚಂದ್ರಿಯನ್ನು ಕೂಡುವ ಪ್ರಾಣೇಶಾಚಾರ್ಯರ ನಿರ್ಧಾರದಲ್ಲಿ ಆತ ಕಾಣಿಸಿಕೊಳ್ಳುತ್ತಾನೆ. ಆದರೆ, ಪ್ರಾಣೇಶಾಚಾರ್ಯರು ತನ್ನ ದಾರಿಗೆ ಬಂದರೆಂದು ಆತ ಗಹಗಹಿಸುವಂತಿಲ್ಲ. ಯಾಕೆಂದರೆ ಆಚಾರ್ಯರು ನಾರಣಪ್ಪ ತುಳಿದ ಹಾದಿಯನ್ನು ತುಳಿದೂ, ಅದನ್ನು ಮೀರಿ ಹೋಗುತ್ತಾರೆ. ನಾರಣಪ್ಪನಂತೆ ಅವರು ಬ್ರಾಹ್ಮಣ್ಯವನ್ನು ತೊರೆದರೂ, ಆತನಂತೆ ಒಮ್ಮೆಲೆ ಸ್ಫೋಟಿಸುವುದಿಲ್ಲ. ಯಾರನ್ನೂ ಹಂಗಿಸುವುದಿಲ್ಲ. ಕೊನೆಯವರೆಗೂ ಒಂದು ರೀತಿಯ ಗೊಂದಲ, ಪಾಪಪ್ರಜ್ಞೆ ಅವರನ್ನು ಕಾಡುತ್ತಿರುತ್ತದೆ. ನಾರಣಪ್ಪನಂತೆ ಅವರಿಂದ ಬ್ರಾಹ್ಮಣ್ಯವನ್ನು ಸಂಪೂರ್ಣವಾಗಿ ತೊರೆಯಲಾಗುವುದಿಲ್ಲ, ಕೆಲವೊಮ್ಮೆ ಅದನ್ನು ಹೊತ್ತುಕೊಂಡೇ ತೊರೆಯುವ ನಾಟಕವಾಡುತ್ತಾರೆ ಎನಿಸುತ್ತದೆ. ಅಥವಾ ಬ್ರಾಹ್ಮಣ್ಯದ ಜೀವಪೋಷಕ ಅಂಶಗಳನ್ನು ಉಳಿಸಿ, ಉಳಿದದ್ದನ್ನು ತೊರೆಯುವ ಕಷ್ಟಹಾದಿಯಲ್ಲಿ ಅವರು ಕ್ರಮಿಸುತ್ತಾರೆ ಎನಿಸುತ್ತದೆ. ನಾರಣಪ್ಪ ಎಲ್ಲವನ್ನೂ ನಿರಾಕರಿಸಿ ಬಿಂದಾಸ್ ಆಗಿ ಬದುಕುವ ಸುಲಭದ ದಾರಿಯನ್ನು ಆಯ್ದುಕೊಂಡರೆ, ಪ್ರಾಣೇಶಾಚಾರ್ಯರಿಗೆ ಅದು ಸಾಧ್ಯವಾಗುವುದಿಲ್ಲ, ಅವರ ವ್ಯಕ್ತಿತ್ವವೇ ಅಂತಹದ್ದು. ಯಾರನ್ನೂ ಸಂಪೂರ್ಣ ತೊರೆಯಲಾಗದ, ಅಗ್ರಹಾರದ ಪರಮ ನೀಚರನ್ನೂ ಕರುಣೆಯ ಕಣ್ಣಿಂದ ಕಾಣುವ ತಾಯಿಗರುಳು ಅವರದ್ದು. ಬಹುಶಃ ಇಂದಿನ ಅನಂತಮೂರ್ತಿಯವರ ಸ್ಥಿತಿಯೂ ಅದೇ ಎನಿಸುತ್ತದೆ. ಎಲ್ಲರನ್ನೊಳಗೊಳ್ಳುವ ತಾಯಿ ಮನಸ್ಸು ಅವರದ್ದು.

ಇತ್ತೀಚಿನ ದಿನಗಳಲ್ಲಿ ಅವರು ಆಡುವ ಮಾತುಗಳೆಲ್ಲಾ ತಾಯಿ ತನ್ನ ಮಗನಿಗೆ ಹೇಳುವ ಪಿಸುಮಾತಿನಂತೆಯೇ ಕೇಳಿಸುತ್ತದೆ. ಇತ್ತೀಚೆಗೆ ಅವರು ಮೋದಿಯ ಕುರಿತು ಆಡಿದ ಮಾತುಗಳೇ ಇದಕ್ಕೆ ನಿದರ್ಶನ. ಹಾದಿ ತಪ್ಪಿದ ಮಗನನ್ನು ಎದುರು ನಿಲ್ಲಿಸಿಕೊಂಡು 'ನೀನು ಹೀಗೆ ಮುಂದುವರಿದರೆ ನಿನ್ನ ಮನೆಯಲ್ಲಿ ನಾನು ಒಂದುಕ್ಷಣವೂ ಇರಲಾರೆ' ಎಂದು ಮುನಿಸಿಕೊಂಡು ಮಗಳ ಮನೆಗೆ ಹೊರಡುವ ತಾಯಿಯಷ್ಟೇ ಸಹಜವಾಗಿ ಅವರು ಮೋದಿಯನ್ನು ಟೀಕಿಸಿದರು. ಆದರೆ, ಮೋದಿಯ ಅಭಿಮಾನಿಗಳಿಗೆ ಇದೆಲ್ಲ ಅರ್ಥವಾಗಲಿಲ್ಲ. ತಾಯಿ ಮನಸ್ಸನ್ನು ಅರ್ಥಮಾಡಿಕೊಳ್ಳಲಾಗದ ಪ್ರತೀ ವ್ಯಕ್ತಿಯೂ ಅಂತಿಮವಾಗಿ ಪೌರುಷದ ಕ್ರೌರ್ಯದಲ್ಲಿ ಕಳೆದುಹೋಗುತ್ತಾರಷ್ಟೆ.

ಈ ಹಿಂದೆ ಅನಂತಮೂರ್ತಿಯವರು ಕುಮಾರಸ್ವಾಮಿಯವರಿಗೆ ಬ್ರೂಸ್ ನೀಡಿದ್ದನ್ನೂ ನಾವು ಈ ಹಿನ್ನೆಲೆಯಲ್ಲಿಯೇ ನೋಡಬೇಕಾಗುತ್ತದೆ. ಕುಮಾರಸ್ವಾಮಿ ಈ ಹಿಂದೆ ತನ್ನನ್ನು ಅವಮಾನಿಸಿದ್ದ ವ್ಯಕ್ತಿ ಎಂಬುದು ಕೂಡ ಅವರಿಗೆ ಆ ಸಂದರ್ಭದಲ್ಲಿ ಮುಖ್ಯವಾಗಲಿಲ್ಲ. ಈತ ಎಷ್ಟೇ ಭ್ರಷ್ಟನಾಗಿದ್ದರೂ ಈ ಸಂದರ್ಭಕ್ಕೆ ಏನನ್ನೋ ಒಳ್ಳೆಯದನ್ನು ಮಾಡುವ ಪ್ರಯತ್ನ ಮಾಡುತ್ತಿದ್ದಾನೆ; ಯಾವುದೋ ಕಾರಣಕ್ಕೆ ನೊಂದು ಬಿಸಿಲಲ್ಲಿ ಮೊಂಡು ಹಿಡಿದು ಕೂತಿದ್ದಾನೆ; ಆತನನ್ನು ಸಮಾಧಾನಿಸುವ ಎಂಬುದಷ್ಟೇ ಅವರಿಗೆ ಮುಖ್ಯವಾಯಿತೇ ವಿನಃ ಆತನ ಮೂರ್ಖತನದ ಮಾತುಗಳಲ್ಲ. ಆದರೆ ಕುಮಾರಸ್ವಾಮಿಯವರಿಗೆ ಮಾತ್ರ ಅದು ಅರ್ಥವಾಗಲಿಲ್ಲ. ಇದು ನಮ್ಮ ಇಂದಿನ ಜಾತ್ಯತೀತ ರಾಜಕೀಯದ ದುರಂತವಾಗಿರಬಹುದು.

ಕೋಮುವಾದವನ್ನು ಅನಂತಮೂರ್ತಿಯವರೆಷ್ಟು ತೀವ್ರವಾಗಿ ವಿರೋಧಿಸುತ್ತಾರೆಂದರೆ, ಇಂದಿಗೂ ಅಟ್‌ಲೀಸ್ಟ್ ಜನರ ಮುಂದೆಯಾದರೂ ಕೋಮುವಾದವನ್ನು ಅಪರಾಧವೆಂದೇ ಪರಿಗಣಿಸುವ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷವನ್ನು ಬೆಂಬಲಿಸುವ ಪ್ರಯತ್ನವನ್ನೂ ಮಾಡುತ್ತಾರೆ. ಅದೇ ಕಾರಣಕ್ಕೆ ಹಲವರಲ್ಲೂ ಒಂದು ರೀತಿಯ ಗೊಂದಲವನ್ನೂ, ಗುಮಾನಿಯನ್ನೂ ಹುಟ್ಟಿಸುತ್ತಾರೆ. ಅದು ಭ್ರಷ್ಟ ಪಕ್ಷಗಳೆಂಬುದು ಗೊತ್ತಿದ್ದೂ ಕನಿಷ್ಠ ಪಕ್ಷ ಮನುಷ್ಯ ಸಂಬಂಧಗಳಾದರೂ ಉಳಿಯಲಿ ಎಂಬ ಒಬ್ಬ ಅಮಾಯಕ ತಾಯಿಯ ಕನಸು ಅವರದ್ದು. ಆಳವಾದ ಧಾರ್ಮಿಕ ಪ್ರಜ್ಞೆಯಿರುವ ವ್ಯಕ್ತಿಗೆ ಮಾತ್ರ ಹೀಗೆ ನಿರಂತರವಾಗಿ ಕೋಮುವಾದದ ವಿರುದ್ಧ ಧ್ವನಿ ಎತ್ತಲು ಸಾಧ್ಯ.




● ಸ್ವಾಲಿಹ್ ಜೆ.ಎಂ, ಮಂಗಳೂರು

...ಪರ್ಯಾಯಗಳನ್ನು ಕಂಡುಕೊಳ್ಳುವ ಶಕ್ತಿಯೂ ...ಜ್ಞಾನಕ್ಕೆ ಇದೆ. ಆದರೆ ಅದು ಸುಖಾಸುಮ್ಮನೆ ಆ ...ಸವನ್ನು ಮಾಡುವುದಿಲ್ಲ. ಹಾಗಾಗಿಯೇ ...ರ್ಯಾಯಗಳನ್ನು ಕಂಡುಕೊಳ್ಳುವುದನ್ನು ...ವಾರ್ಯಗೊಳಿಸುವಂತಹ ಒತ್ತಡ ...ಯೋಗವಾಗಿಸುವ ಇಂತಹ ಪ್ರತಿಭಟನೆಗಳು ಮತ್ತು ...ೋರಾಟಗಳು ಬಹಳ ಮುಖ್ಯವಾಗುತ್ತವೆ. ಆಗ ...ವಾರ್ಯವಾಗಿ ವಿಜ್ಞಾನವು ಪರಿಸರಕ್ಕೆ ...ಂದರೆಯಾಗದ ದಾರಿಗಳನ್ನು ...ಕೊಳ್ಳಹೊರಡುತ್ತದೆ' ಎಂಬರ್ಥದ ಮಾತುಗಳನ್ನು ...ದ್ದರು. ಪರಿಸರ ರಕ್ಷಣೆಯ ಪರವಾಗಿ ಕೇವಲ ...ರ್ಣಾತ್ಮಕವಾಗಿ ಮಾತನಾಡುವವರು ಮತ್ತು ...ಮುಗುರಿಯಿಲ್ಲದೆ ವೀರಾವೇಶವೊಂದನ್ನೇ ಬಂಡವಾಳ ...ಕೊಂಡು ಹೋರಾಟದ ಮಾತುಗಳನ್ನಾಡುವವರ ...ವೆ ಅತ್ಯಂತ ಮಾರ್ಮಿಕವಾದ ಮತ್ತು ಸಮುಚಿತ್ತದ ...ಆಲೋಚನೆಗಳು ನನಗೆ ತೀರಾ ಭಿನ್ನವಾಗಿ ...ವು. ಇಂತಹ ಅನನ್ಯ ಆಲೋಚನೆಗಳಿಂದಾಗಿಯೇ ...ನಂತಮೂರ್ತಿಯವರ ಮಾತುಗಳಿಗೆ ಸದಾ ವಿಶೇಷ ...ರ್ಥ ಇರುತ್ತದೆ ಮತ್ತು ನನ್ನಂಥ ಅಸಂಖ್ಯ ... ಮಂದಿಯನ್ನು ಅವರ ಮಾತುಗಳು ರೋಮಾಂಚಿತಗೊಳಿಸುತ್ತಿರುತ್ತವೆ. ಚಿಂತನೆಗೆ ಹಚ್ಚುತ್ತಿರುತ್ತವೆ.



● ಶ್ರೀನಿವಾಸ ಕಾರ್ಕಳ

ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿ ಕುರಿತು...



ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿ ನನ್ನ ಅಚ್ಚುಮೆಚ್ಚಿನ ಕೃತಿಗಳಲ್ಲಿ ಒಂದು. ಯಾಕೆಂದು ಆಲೋಚಿಸುವಾಗಲೆಲ್ಲಾ ನನ್ನ ಮುಂದೆ ಹೊಸ ಹೊಸ ಅರ್ಥಗಳು ತೆರೆದುಕೊಳ್ಳುತ್ತವೆ.

ಮುಖ್ಯವಾಗಿ ಈ ಕಾದಂಬರಿಯಲ್ಲಿ ಹೀರೋಯಿಸಂ ಇಲ್ಲ, ನಾಯಕ-ನಾಯಕಿ ಹೀಗೇ ಇರಬೇಕೆಂಬ ಆದರ್ಶವನ್ನು ಭಂಜಿಸಿ ವಾಸ್ತವದ ಲೋಪ-ದೋಷಗಳ ಸಮೇತ ಪಾತ್ರ ಚಿತ್ರಣ ಹೃದಯಂಗಮವಾಗಿ ಮೂಡಿಬಂದಿದೆ.

ತಾವು ಹುಟ್ಟಿದ ಬ್ರಾಹ್ಮಣ ಜನಾಂಗದ ಅಂಧ ಶ್ರದ್ಧೆಯನ್ನು ಧೈರ್ಯವಾಗಿ ಪ್ರಶ್ನಿಸುವ- ವಿಶ್ಲೇಷಿಸುವ ಕಾದಂಬರಿಕಾರರು ಇಂದಿಗೂ ಅಗತ್ಯವಿರುವ 'ಧರ್ಮಸೂಕ್ಷ್ಮ'ದ ಬಗೆಗೆ ಮರೆಯಬಾರದ ಪ್ರಶ್ನೆಯನ್ನು ಎತ್ತುತ್ತಾರೆ.


ಮತ್ತೆ ಮತ್ತೆ ಚಿಂತಿಸುವಾಗ 'ಗೃಹಸ್ಥ ಧರ್ಮ'ದ ಬಗೆಗೆ ನಿಜವಾದ ಧರ್ಮಸೂಕ್ಷ್ಮದ ಒಳನೋಟವೊಂದು ಯಾವುದೇ ಸೋಗಲಾಡಿತನವಿಲ್ಲದೆ ಇಲ್ಲಿ ಕಂಡುಬರುತ್ತದೆ. ಈ ಒಳನೋಟ ಶಾಸ್ತ್ರವನ್ನು ಮೀರಿದ ಶಾಸ್ತ್ರೀಯತೆಯೆಂದು ನನಗನಿಸುತ್ತದೆ.

ವೈದೀಕ ಬ್ರಾಹ್ಮಣರೆನಿಸಿಕೊಂಡು ವೇದ-ಶಾಸ್ತ್ರ-ಪುರಾಣ ಓದಿಕೊಂಡವರ ಜ್ಞಾನವೆಲ್ಲಾ ಅವರ ಜುಟ್ಟು-ಜನಿವಾರ-ಮುದ್ರೆಗಳ ಬಹಿರಂಗವನ್ನು ಮಾತ್ರ ಕಾಪಾಡಿಕೊಳ್ಳುತ್ತ ಹೊಟ್ಟೆ ಹೊರೆಯುವ ಆಸ್ತಿ ಪ್ರಜ್ಞೆಯಲ್ಲಿ- ಚಿನ್ನ ಕೂಡಿಡುವ ಅತಿಯಾಸೆಯಲ್ಲಿ ನಿರತವಾಗಿರುತ್ತದೆ. ಆದರೆ ಕುಲದಲ್ಲಿ ಕೀಳೆನಿಸಿಕೊಂಡು ವೇಶ್ಯೆಯ ಪಟ್ಟ ಹೊತ್ತ ಚಂದ್ರಿ ಮಾತ್ರ ತಾನು ಉಟ್ಟು-ತೊಟ್ಟ ಚಿನ್ನವನ್ನೆಲ್ಲಾ ಯಾವುದೇ ಲೋಭವಿಲ್ಲದೆ ಕಳೆದುಕೊಳ್ಳಲು ಸಿದ್ಧಳಾಗಿ ತಾನು ಕೂಡಿದ ನಾರಣಪ್ಪನ ಶವಸಂಸ್ಕಾರಕ್ಕಾಗಿ ವಿನಿಯೋಗಿಸಲು ಸಿದ್ಧಳಾಗುತ್ತಾಳೆ. ಬ್ರಾಹ್ಮಣರೆಲ್ಲಾ ಆ ಅನಾಥಶವವನ್ನು ತಮ್ಮ ಕುಲದ್ದೆಂದು ಹೇಳಿಕೊಳ್ಳಲು ಹಿಂಜರಿದು ಶವದ ವಾಸನೆ ಹರಡಲು ಬಿಟ್ಟಾಗ ಚಂದ್ರಿ ತನ್ನ ಹೃದಯವಂತಿಕೆಯ 'ಗೃಹಸ್ಥ' ಧರ್ಮವನ್ನು ಮರೆದು ಆ ಶವಸಂಸ್ಕಾರವಾಗಬೇಕೆಂದು ಎಲ್ಲ ಮುತುವರ್ಜಿಯನ್ನೂ ವಹಿಸುತ್ತಾಳೆ. ಪತ್ನಿ ವಿಹೀನ ಪ್ರಾಣೇಶಾಚಾರ್ಯರನ್ನು ಒಲವಿನಿಂದ ಕೂಡಿ ಅವರ ಹೆಸರಿಗೆ ಕಳಂಕ ತರಬಾರದೆಂದು ಮಮತೆಯಿಂದ ದೂರವಾಗಿ ನೆನೆಸಲೇಬೇಕಾದ 'ಪತಿವ್ರತೆ'ಯ ಸ್ಥಾನದಲ್ಲಿ ಉತ್ತಮ ಕುಲದವಳಾಗಿ ಕಂಗೊಳಿಸುತ್ತಾಳೆ. ಈಗ ಮತ್ತೆ ಅನಂತಮೂರ್ತಿಯವರು ಈ ಕಾದಂಬರಿಯ ಮುಂದಿನ ಭಾಗ ಬರೆದು ಪ್ರಾಣೇಶಾಚಾರ್ಯ ಮತ್ತು ಚಂದ್ರಿ ನಡೆಸುವ ಸುಖಸಂಸಾರದ ಕಥೆ ಹೇಳಲಿ ಎಂದು ಆಸೆಯಾಗುತ್ತದೆ.

● ಜ್ಯೋತಿ ಗುರುಪ್ರಸಾದ್, ಕಾರ್ಕಳ



6 -5= 2 ಒಂದು ದೆವ್ವದ ಗೆಲುವು



ಸದ್ದೇ ಇಲ್ಲದೆ ಎಲ್ಲಿಂದಲೋ ಒಂದು ಧೂಮಕೇತು ಬಂದು ಅಪ್ಪಳಿಸಿದಂತೆ ಗಾಂಧಿನಗರದ ಲೆಕ್ಕಾಚಾರಗಳೆಲ್ಲವನ್ನೂ ಹೇಳಹೆಸರಿಲ್ಲದ ಹುಡುಗರು ತಲೆಕೆಳಗು ಮಾಡಿದ್ದಾರೆ!

ಸೂಪರ್‌ಸ್ಟಾರ್, ಪವರ್‌ಸ್ಟಾರ್, ಗೋಲ್ಡನ್‌ಸ್ಟಾರ್, ಚಾಲೆಂಜಿಂಗ್‌ಸ್ಟಾರ್, ರೆಬೆಲ್‌ಸ್ಟಾರ್: ಇತ್ಯಾದಿ ಯಾವುದೇ ಸ್ಟಾರ್‌ಗಳಿಲ್ಲದೆ, ಕೋಟಿಕೋಟಿಯ ಬಜೆಟ್ಟಿಲ್ಲದೆ, ಹೀರೋಯಿನ್ನು, ವಿಲ್ಲನ್ನು, ಐಟಮ್ಮು, ಡ್ಯಾನ್ಸು, ಫೈಟು, ಸೆಕ್ಸು- ಏನೊಂದು ಇಲ್ಲದೆ, ಪ್ರಚಾರದ ಅಬ್ಬರ, ಮೀಡಿಯಾ ಅರ್ಭಟಗಳಿಗೂ ಕೈಹಾಕದೆ ಹೇಗೆ ಚಿತ್ರವೊಂದನ್ನು ಗೆಲ್ಲಿಸಬಹುದೆಂಬ ಪಾಠವನ್ನು ಅನಾಮಧೇಯರ ತಂಡವೊಂದು ಗಾಂಧಿನಗರದ ಸಿನಿಮಾ ಪಂಡಿತರಿಗೆ ಕಲಿಸಿಕೊಟ್ಟಿದೆ!

ಅದು 6-5=2 ಎಂಬ ವಿಚಿತ್ರ ಹೆಸರಿನ ಸರ್ವಸಾಧಾರಣ ಚಿತ್ರವೊಂದರ ಮೂಲಕ.

ಇಲ್ಲಿಗೆ ಮೂರು ವಾರಗಳ ಹಿಂದೆ ಅಂದರೆ ಕಳೆದ ನವೆಂಬರ್ 29ರಂದು ಬೆರಳೆಣಿಕೆಯಷ್ಟು ಪಿವಿಆರ್‌ಗಳಲ್ಲಷ್ಟೇ ತೆರೆಕಂಡ 6-5=2 ಎಂಬುದು ಅಸಲಿಗೆ ಕನ್ನಡದ ಚಿತ್ರವೊಂದರ ಹೆಸರೆಂಬುದೇ ಯಾರಿಗೂ ಗೊತ್ತಿರಲಿಲ್ಲ, ಏಕೆಂದರೆ ಕನ್ನಡದ ಯಾವುದೇ ನ್ಯೂಸ್ ಚಾನಲ್‌ಗಳಲ್ಲಾಗಲಿ, ಟೀವಿಗಳಲ್ಲಾಗಲಿ ಈ ಬಗ್ಗೆ ಕಾಟಾಚಾರದ ಪ್ರಸ್ತಾವನೆ ಕೂಡ ಇರಲಿಲ್ಲ, ಕೆಲ ಪತ್ರಿಕೆಗಳಲ್ಲಿ ಈ ಬಗ್ಗೆ ಜಾಹಿರಾತಿತ್ತಾದರೂ ಮೇಲುನೋಟಕ್ಕದು ಯಾವುದೋ ಹಾಲಿವುಡ್ ಹಾರರ್ ಚಿತ್ರವೆಂದೇ ಭಾಸವಾಗುತ್ತಿತ್ತು, ಅಲ್ಲಲ್ಲಿ ವಾಲ್‌ಪೋಸ್ಟರ್‌ಗಳಿದ್ದವಾದರೂ ಅದೂ ಕೂಡ ಯಾವುದೋ ಇಂಗ್ಲಿಷ್ ಚಿತ್ರವೆಂದೇ ಜನ ಭಾವಿಸಿದ್ದರು.

ಹಬ್ಬಿದ ವದಂತಿ

ಆದರೆ ಎರಡನೇ ವಾರದ ಹೊತ್ತಿಗೆ 6-5=2 ಬಗ್ಗೆ ಬೇರೆಯದೇ ಪುಕಾರೊಂದು ಹುಟ್ಟಿಕೊಂಡಿತು. ಅದೊಂದು ಕನ್ನಡದ ಸಿನಿಮಾ ಎಂದೂ ಟ್ರೆಕ್ಕಿಂಗಿಗೆಂದು ಹೋಗಿ ಹೆಣವಾದ ಯಾರೋ ರಮೇಶ್ ಎಂಬಾತನ ವೀಡಿಯೋ ಕ್ಯಾಮೆರಾದ ದೃಶ್ಯಾವಳಿಗಳನ್ನೇ ಥಿಯೇಟರ್‌ಗಳಿಗೆ ಬಿಡುಗಡೆ ಮಾಡಿದ್ದಾರೆಂದೂ, ಕೊಲೆಯಾಗುವ ಮುನ್ನ ಆತ ತನ್ನ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದ ದೃಶ್ಯಾವಳಿಗಳಲ್ಲಿ ನಂಬಲಸಾಧ್ಯ ಸಂಗತಿಗಳಿವೆಯೆಂದೂ, ದುರ್ಗಮ ಕಾಡೊಂದರಲ್ಲಿ ದಾರಿತಪ್ಪುವ ಟ್ರೆಕ್ಕಿಂಗ್ ತಂಡಕ್ಕೆ ಅತೀಂದ್ರಿಯ ಪಜೀತಿಗಳು ಮತ್ತು ಆ ಕಾರಣದ ದುರಂತದ ನೈಜ ಚಿತ್ರಣಗಳು ಭಯಾನಕವಾಗಿವೆಯೆಂದೂ ಬಾಯಿಂದ ಬಾಯಿಗೆ ವದಂತಿ ಹಬ್ಬತೊಡಗಿತ್ತು.

ವದಂತಿಯ ತೀವ್ರತೆ ಹೇಗಿತ್ತೆಂದರೆ ಬೆರಳೆಣಿಕೆಯಷ್ಟು ಪಿವಿಆರ್‌ಗಳಲ್ಲಷ್ಟೇ ತೆರೆಕಂಡಿದ್ದ 6-5=2 ಎರಡನೇ ವಾರದ ಹೊತ್ತಿಗೆ ಕರ್ನಾಟಕದ 45 ಥೇಟರುಗಳನ್ನಾಕ್ರಮಿಸಿತ್ತು. ಮೂರನೇ ವಾರದ ಹೊತ್ತಿಗೆ ಈ ಚಿತ್ರ ಅದೆಂಥಾ ಸೆನ್ಸೇಷನ್ ಸೃಷ್ಟಿಸಿತ್ತೆಂದರೆ ರಾಜ್ಯದ ಉದ್ದಗಲಕ್ಕೂ ಸರಿಸುಮಾರು 80 ಚಿತ್ರ ಮಂದಿರಗಳಲ್ಲಿ ಕಿಕ್ಕಿರಿದ ಪ್ರೇಕ್ಷಕರಿಂದ ತುಂಬಿತ್ತು. ಉದಾಹರಣೆಗೆ ಮಾಗಡಿ ರಸ್ತೆಯ ವೀರೇಶ ಥೇಟರನ್ನೇ ತೆಗೆದುಕೊಂಡರೆ ಬಿಡುಗಡೆಯಾದಾಗ ಕೇವಲ ಒಂದು ಷೋ ಅಂದರೆ ರಾತ್ರಿ ಏಳೂವರೆಯ ಆಟಕ್ಕಷ್ಟೇ ಸೀಮಿತಗೊಂಡಿದ್ದ 6-5=2 ಎರಡನೇ ವಾರದ ಹೊತ್ತಿಗೆ ಮಧ್ಯಾಹ್ನ 4.30ರ ಷೋಗೂ ವಿಸ್ತರಿಸಿತ್ತು. ಮೂರನೇ ವಾರದ ಹೊತ್ತಿಗದು ಥೇಟರಿನ ಅಷ್ಟೂ ಐದು ಆಟಗಳನ್ನಾಕ್ರಮಿಸಿತ್ತು.

ಕೇವಲ ವೀರೇಶ ಮಾತ್ರವೇ ಅಲ್ಲ, ನಾಗರಬಾವಿ ರಿಂಗ್ ರಸ್ತೆಯ ಮಲ್ಲತ್ತಹಳ್ಳಿ ಏರಿಯಾದ ರಾಜರಾಜೇಶ್ವರಿ ಚಿತ್ರಮಂದಿರದಲ್ಲಿ ಕನ್ನಡದ ಯಾರೇ ಹೀರೋ ಒಬ್ಬನ ಚಿತ್ರ ಈ ತನಕ ಎರಡನೇ ವಾರಕ್ಕೆ ಕಾಲಿಟ್ಟ ನಿದರ್ಶನವಿಲ್ಲ, ಆದರೆ ಈ ಚಿತ್ರ ಅಂಥಾ ಬರಗೆಟ್ಟ ಥೇಟರಿನಲ್ಲೂ 2ನೇ ವಾರಕ್ಕೆ ಕಾಲಿಟ್ಟಿದೆ. ಇನ್ನು ಕಾಮಾಕ್ಷಿಪಾಳ್ಯದ ವಿಶಾಲ ಚಿತ್ರಮಂದಿರಕ್ಕೆ ಬಂದರೆ ಅಲ್ಲಿ ಅದೆಂಥಾ ಚಿತ್ರವಿದ್ದರೂ ಒಂದೇ ವಾರಕ್ಕೆ ಎತ್ತಂಗಡಿ ಗ್ಯಾರಂಟಿ. ಅಂಥಾದ್ದರಲ್ಲಿ 6-5=2 ಎರಡನೇ ವಾರಕ್ಕೆ ಕಾಲಿಟ್ಟಿದೆಯೆಂದರೆ ಏನರ್ಥ?

6-5=2 ಚಿತ್ರದಲ್ಲಿ ಅಂಥಾದ್ದೇನಿದೆ? ಹೆಸರಾಂತ ಸ್ಟಾರ್‌ಗಳಿಲ್ಲ, ಸೆಕ್ಸಿ ಹೀರೋಯಿನ್ನುಗಳಿಲ್ಲ, ಅಸಾಧ್ಯ ಕತೆ, ಅಸಾಧಾರಣ ಸಂಗೀತ ಯಾವುದೂ ಇಲ್ಲದ ಈ ಚಿತ್ರ ಈ ತನಕದ ಭರ್ಜರಿ ಯಶಸ್ಸಿನ ಕನ್ನಡ ಚಿತ್ರಗಳ್ಯಾವವೂ ಮಾಡದ ವಿಚಿತ್ರಗಳಿಗೆ ಏನು ಕಾರಣ?

ವೀಡಿಯೋದಲ್ಲೇನಿದೆ?

ಇದೊಂದು ವಿಚಿತ್ರ ಸಿನಿಮಾ. ಯಾರೋ ಅನಾಮಿಕ ಆರು ಮಂದಿ ಗೆಳೆಯರು ದುರ್ಗಮ ಕಾಡೊಂದಕ್ಕೆ ಟ್ರೆಕ್ಕಿಂಗ್ ಹೊರಡುತ್ತಾರೆ. ಅವರಲ್ಲಿ ಒಬ್ಬ ಮಾತ್ರ ಜೀವಂತ ವಾಪಸ್ಸಾಗುತ್ತಾನೆ. ಉಳಿದವರೆಲ್ಲ ಕಾಡಿನಲ್ಲಿ ದಿಕ್ಕುತಪ್ಪಿ ಚಿತ್ರವಿಚಿತ್ರ ಪಜೀತಿಗಳಿಗೆ ಸಿಲುಕಿ ದುರಂತ ಅಂತ್ಯಕ್ಕೀಡಾಗುತ್ತಾರೆ. ಬದುಕಿ ಬಂದವನು ನೀಡಿದ ಮಾಹಿತಿಯ ಮೇರೆಗೆ ಅರಣ್ಯ ಇಲಾಖೆಯ ಸಿಬ್ಬಂದಿ ಉಳಿದವರಿಗಾಗಿ ಶೋಧಕ್ಕಿಳಿದಾಗ ಆ ಪೈಕಿ ರಮೇಶ್ ಎಂಬಾತನ ವೀಡಿಯೋ ಕ್ಯಾಮೆರಾ ಮಾತ್ರವೇ ಪತ್ತೆಯಾಗುತ್ತದೆ. ಟ್ರೆಕ್ಕಿಂಗ್‌ಗೆ ಹೊರಡುವ ಮುನ್ನ ಅರಣ್ಯ ಇಲಾಖೆಯ ಗಾರ್ಡ್ ಮೊದಲೇ ಎಚ್ಚರಿಕೆ ನೀಡಿರುತ್ತಾನೆ. ಗುಂಡ್ಯ ಅರಣ್ಯದ ಒಂಬತ್ತು ಗುಡ್ಡದ ಕಾಡೆಂದರೆ ಅದು ಚಿತ್ರವಿಚಿತ್ರಗಳ ಕಣಿವೆಯೆಂದೂ ಅಲ್ಲಿಗೆ ಟ್ರೆಕ್ಕಿಂಗಿಗೆ ಹೋದ ಅನೇಕರು ವಾಪಸ್ಸಾಗಿಲ್ಲವೆಂದೂ ಇಂಥಾ ದುರ್ಗಮ ಕಾಡೇ ಕೆಲ, ಅತೀಂದ್ರಿಯ ಶಕ್ತಿಗಳ ನೆಲೆವೀಡೆಂಬ ಅನುಮಾನ ಅರಣ್ಯ ಇಲಾಖೆಗಿದೆ ಎಂದೂ ಗಾರ್ಡ್ ಕೊಟ್ಟ ಎಚ್ಚರಿಕೆಯನ್ನು ಟ್ರೆಕ್ಕಿಂಗ್ ತಂಡ ನಿರ್ಲಕ್ಷಿಸುತ್ತದೆ.

ಕಾಡಿನ ಭಯಾನಕ

ಹಾಗೆ ಕಾಡು ಹೊಕ್ಕ ಆರು ಮಂದಿ ಗೆಳೆಯರ ಪೈಕಿ ಜೊಲ್ಲು ಪ್ರಕಾಶ ಎಂಬಾತ ವಿಚಿತ್ರ ಸನ್ನಿವೇಶವೊಂದರಲ್ಲಿ ದಿಕ್ಕುತಪ್ಪಿ ವಾಪಸ್ಸಾದರೆ ಮಿಕ್ಕ ಐದು ಮಂದಿ ಮಾತ್ರ ಭಯಾನಕ ಪಜೀತಿಗಳಿಗೆ ಸಿಲುಕುತ್ತಾರೆ. ಅವರು ಎದುರಿಸಿದ ಸನ್ನಿವೇಶ, ನಡುರಾತ್ರಿಯಲ್ಲಿ ಕಾಡಿನ ಭೀಕರ, ಅಸಾಧ್ಯ ಏಕಾಂತದಲ್ಲಿ ಸಣ್ಣಪುಟ್ಟ ಪ್ರಸಂಗಗಳೂ ಕೂಡ ಭಯಾನಕವಾಗಿ ಕಾಣಿಸುತ್ತವೆ. ಸಾಮಾನ್ಯರ ಕಣ್ಣಿಗೆ ಗೋಚರವಾಗದ ಘಟನಾವಳಿಗಳೆಲ್ಲ ವೀಡಿಯೋ ಕ್ಯಾಮೆರಾದಲ್ಲಿ ಬೇರೆಯದೇ ರೀತಿಯಲ್ಲಿ ವ್ಯಕ್ತಗೊಳ್ಳುತ್ತವೆ.

ಇಡೀ ಚಿತ್ರದ ಯಶಸ್ಸಿರುವುದೇ ಇದು ಹತನಾದ ರಮೇಶ್ ಎಂಬಾತನ ವೀಡಿಯೋ ಕ್ಯಾಮೆರಾದ ದೃಶ್ಯಾವಳಿಗಳು ಎಂದು ನಂಬಿಸುವಲ್ಲಿ, ವೀಡಿಯೋ ರೆಕಾರ್ಡ್ ಆಗುತ್ತಿರುವಂತೆಯೇ ಪರದೆಯ ಮೇಲೆ ಟೈಮಿಂಗ್ ಸೂಚ್ಯಂಕ ಮೂಡುತ್ತದೆ. ಇಡೀ ಚಿತ್ರದಲ್ಲೆಲ್ಲೂ ಇದು ನಟನೆಗಾಗಿ ನಟಿಸಿದಂತೆ ಎನ್ನಿಸುವುದಿಲ್ಲ, ಪಾತ್ರಧಾರಿಗಳ್ಯಾರೂ ನಟರಲ್ಲ, ಬೇರೆಲ್ಲ ಚಿತ್ರಗಳಂತೆ ಇಲ್ಲಿ ಹಿನ್ನೆಲೆ ಸಂಗೀತ, ನಾಟಕೀಯ ಡೈಲಾಗ್, ಹಾಡು, ಕ್ಯಾಮೆರಾದ ಚಲನೆ ಕಂಡುಬರುವುದಿಲ್ಲ, ಇದೆಲ್ಲಕ್ಕೂ ಮಿಗಿಲಾದದ್ದು ಚಿತ್ರಕ್ಕಿಟ್ಟ ಹೆಸರು 6-5=2.

ಸತ್ತವನ ಕ್ಯಾಮೆರಾ

ಅಂದರೆ ಆರರಲ್ಲಿ ಐದು ಕಳೆದರೆ ಹೇಗೆ ಎರಡು ಉಳಿಯಲು ಸಾಧ್ಯ? ಆರು ಮಂದಿಯ ಪೈಕಿ ಐವರು ಹೆಣವಾದ ನಂತರವೂ ಹೇಗೆ ತಾನೆ ಇಬ್ಬರು ಉಳಿಯಲು ಸಾಧ್ಯವೆಂಬ ವಿಚಿತ್ರ ಪ್ರಶ್ನೆಯೇ ಕುತೂಹಲದ ಬೆಟ್ಟವಾಗಿ ಪ್ರೇಕ್ಷಕನನ್ನು ಥಿಯೇಟರ್‌ನತ್ತ ಸೆಳೆಯುತ್ತದೆ. ಇದಕ್ಕಿಂತಲೂ ಅಚ್ಚರಿಯೆನಿಸುವುದು ಚಿತ್ರದ ಉಪಶೀರ್ಷಿಕೆ. **A Video shot by late Ramesh** ಅಂದರೆ ಇದು ಹತನಾದ ರಮೇಶ್ ಎಂಬಾತ ಚಿತ್ರೀಕರಿಸಿದ ವೀಡಿಯೋ!

ಇದನ್ನು ಗಿಮ್ಮಿಕ್ಕೆನ್ನಿ, ತಂತ್ರವೆನ್ನಿ, ಇಡೀ ಚಿತ್ರದ ಪೋಸ್ಟರ್ ಹುಡುಕಾಡಿದಾಗಲೂ ಬೇರೆಲ್ಲ ಚಿತ್ರಗಳಂತೆ ಇಲ್ಲಿ ನಿರ್ದೇಶಕರ್ಯಾರು, ಛಾಯಾಗ್ರಾಹಕರ್ಯಾರು, ಸಂಗೀತ, ಚಿತ್ರಕತೆ, ಕಥೆ, ಸಂಭಾಷಣೆ ಇತ್ಯಾದಿ ಯಾವುದೇ ವಿವರಗಳಿಲ್ಲ, ಚಿತ್ರದ ಬಿಡುಗಡೆಗೂ ಮುನ್ನ ಸಣ್ಣದೊಂದು ಪತ್ರಿಕಾಗೋಷ್ಠಿ ಶೂಟಿಂಗ್ ವೇಳೆಯ ಸುದ್ದಿಗಳು, ಚಿತ್ರದ ಮುಹೂರ್ತ ಇತ್ಯಾದಿ ಯಾವುದೇ ಸುಳಿವು ಕೂಡ ನೀಡದೆ ಅಚಾನಕ್ಕಾಗಿ ಥೇಟರುಗಳಲ್ಲಿ ಕಾಣಿಸಿಕೊಂಡ ಈ ಚಿತ್ರವನ್ನು ಜನ ತಾನೇ ಸತ್ತವನ ವೀಡಿಯೋ ತುಣುಕುಗಳ ಸಂಗ್ರಹವೆನ್ನದೆ ಅನ್ಯಥಾ ಭಾವಿಸುವಂತಿಲ್ಲ, ದೆವ್ವ ಪಿಶಾಚಿ, ಅತೀಂದ್ರಿಯಗಳ ಕುರಿತಂತೆ ಕನ್ನಡದಲ್ಲಿ ಬಂದ ಅಸಂಖ್ಯಾತ ಚಿತ್ರಗಳಿಗಿಂತಲೂ ಇದು ವಿಶಿಷ್ಟ ಮತ್ತು ವಿಭಿನ್ನ ಎನಿಸುತ್ತಿರುವುದೇ ಈ ಕಾರಣಕ್ಕೆ.

ಕಾಡೇ ಈ ಚಿತ್ರದ ನಾಯಕ. 132 ನಿಮಿಷಗಳ ಇಡೀ ಚಿತ್ರ ಗಾಂಧಿನಗರದ ಜನಪ್ರಿಯ ಮಾನದಂಡಗಳನ್ನೆಲ್ಲ ಸುಳ್ಳಾಗಿಸುತ್ತದೆ. ಸಿನಿಮಾ ಪಂಡಿತರ ಲೆಕ್ಕಾಚಾರವನ್ನೆಲ್ಲ ತಲೆಕೆಳಗು ಮಾಡುತ್ತದೆ. ಕೋಟಿ ಕೋಟಿ ಸುರಿದೇ ಸಿನಿಮಾ ತೆಗೆಯಲಿ ಅಥವಾ ಹತ್ತಿಪ್ಪತ್ತು ಲಕ್ಷದಲ್ಲೇ ಚಿತ್ರ ನಿರ್ಮಿಸಲಿ ಅದನ್ನು ನಿರ್ಧರಿಸುವವನು ಪ್ರೇಕ್ಷಕ ಮಾತ್ರ ಎಂಬ ಪರಮಸತ್ಯವನ್ನಿದು ಅಕ್ಷರಶಃ ಸಾಬೀತುಮಾಡುತ್ತದೆ. ಅಷ್ಟಕ್ಕೂ ಇಡೀ ಚಿತ್ರಕ್ಕಾದ ಖರ್ಚೆಷ್ಟು ಗೊತ್ತೆ?

ಕೇವಲ 30 ಲಕ್ಷ!

ಬಿಡುಗಡೆಯಾದ ಮೊದಲ ವಾರಕ್ಕೆ ಇದು 45 ಲಕ್ಷದ ಗಳಿಕೆ ಮಾಡಿಯಾಗಿತ್ತು, ಎರಡನೇ ವಾರದ ಹೊತ್ತಿಗೆ ಇದು 50 ಲಕ್ಷಕ್ಕೇರಿತ್ತು, ಮೂರನೇ ವಾರದ ಹೊತ್ತಿಗೆ ಇದರ ಥಿಯೇಟರ್ ಗಳಿಕೆಯೊಂದೇ ಒಂದೂವರೆ ಕೋಟಿ ಮುಟ್ಟಿತ್ತು, ಐದೋ ಆರೋ ಕೋಟಿ ಸುರಿದು ದೊಡ್ಡ ದೊಡ್ಡ ಸ್ಟಾರ್‌ಗಳನ್ನಿಟ್ಟು ಸಿನಿಮಾ ಮಾಡಿ ಹತ್ತೋ ಇಪ್ಪತ್ತೋ ಕೋಟಿ ಲಾಭ ಮಾಡುವುದಕ್ಕೂ, ಕೇವಲ 30 ಲಕ್ಷದಲ್ಲಿ ಸಿನಿಮಾ ಮಾಡಿ ಎರಡೋ ಮೂರೋ ಸಂಪಾದಿಸುವುದಕ್ಕೂ ದೊಡ್ಡ ವ್ಯತ್ಯಾಸವೇನಿಲ್ಲ, ಈ ನಿಟ್ಟಿನಲ್ಲಿ 6-5=2 ನ ಯಶಸ್ಸಿಗೆ ಇಡೀ ಗಾಂಧಿನಗರವೇ ಬೆಚ್ಚಿ ಬಿದ್ದಿದೆ.

ಯಾರು ಈ ಅಶೋಕ್?

ಬೇರೆಲ್ಲ ಚಿತ್ರಗಳಂತೆ ಬಿಡುಗಡೆಗೂ ಮೊದಲೇ ಈ ಬಗ್ಗೆ **Hype** ಹುಟ್ಟು ಹಾಕಿದ್ದಾಗಲಿ, ಪ್ರಚಾರವಾಗಲಿ ಇರಲೇ ಇಲ್ಲ, ಸಿನಿಮಾ ಬಿಡುಗಡೆಯಾಗುವ ಸಣ್ಣದೊಂದು ಸೂಚನೆ ಕೂಡ ಇರಲಿಲ್ಲ, ಇದರ ಜೊತೆಗೇ ತೆರೆ ಕಂಡ ಯೋಗರಾಜ್ ಭಟ್ಟರ 'ದ್ಯಾವ್ರೇ' ಚಿತ್ರಕ್ಕೆ ದೊರೆತ ಪ್ರಚಾರ, ಹೈಪ್ ಮತ್ತು ಪತ್ರಿಕಾ ವಿಮರ್ಶೆಗಳ ಅರ್ಭಟದ ಮುಂದೆ 6-5=2 ಎಂಬ ಚಿತ್ರ ಬಿಡುಗಡೆಯಾಗಿದ್ದೇ ಯಾರಿಗೂ ಗೊತ್ತಾಗಲಿಲ್ಲ, ಇಂಥಾದ್ದೊಂದು ಚಿತ್ರ ತೆರೆಕಂಡಿದೆಯೆಂಬ ಬಗ್ಗೆ ಯಾವೊಂದು ಪತ್ರಿಕೆಯೂ ವಿಮರ್ಶೆ ಪ್ರಕಟಿಸಲಿಲ್ಲ, ಇದಾದನಂತರ ಶಿವಣ್ಣನ ಭಜರಂಗಿಯಂತ ದೈತ್ಯ ಚಿತ್ರದ ಆರ್ಭಟವಿದ್ದಾಗಲೂ ಇವೆಲ್ಲವನ್ನೂ 6-5=2 ಮೀರಿಸಿತ್ತು.

ಯಾವುದೋ ಕಾಲಕ್ಕೆ ಹಾಲಿವುಡ್‌ನಲ್ಲಿ ಬಂದಿದ್ದ **Blair witch project** ಮತ್ತು **Paranormal Activity** ಎಂಬ ಚಿತ್ರಗಳಿಂದ ಪ್ರೇರಣೆಗೊಂಡೇ ಅಶೋಕ್ ಎಂಬ ವೃತ್ತಿನಿರತ ಇಂಜಿನಿಯರ್ ಓರ್ವ ನಿರ್ಮಿಸಿದ ಕನ್ನಡದ ಮೊಟ್ಟ ಮೊದಲ **Found footage** ಚಿತ್ರವಿದು. ಯಾವುದೋ ಕಂಪೆನಿಯೊಂದರಲ್ಲಿ ಕೈತುಂಬಾ ಸಂಬಳವಿದ್ದೂ ಸಿನಿಮಾ ಗೀಳಿಗೆ ಬಿದ್ದು ಕೆಲಸ ಬಿಟ್ಟು ಚಿತ್ರ ನಿರ್ಮಾಣಕ್ಕಿಳಿದ ಅಶೋಕ್ ತಂತ್ರಗಾರಿಕೆಯೇ ಹಾಗಿತ್ತು, ಸತ್ತವನ ಕ್ಯಾಮೆರಾದ ದೃಶ್ಯಾವಳಿಗಳೆಂದೇ ಪ್ರೇಕ್ಷಕನನ್ನು ನಂಬಿಸಬೇಕು. ಹಾಗೆ ನಂಬಿಸಲಿಕ್ಕೆಂದೇ ಬಿ.ಎಲ್. ಕೀರ್ತಿ ಎಂಬ ಕ್ಯಾಮೆರಾಮನ್‌ನನ್ನು ಆಯ್ದುಕೊಂಡರು. ಇದಕ್ಕೂ ಮುನ್ನ ವಿಶಿಷ್ಟ ಕ್ಯಾಮೆರಾತಂತ್ರಗಳನ್ನು ಅಭ್ಯಸಿಸಲಾಯ್ತು, ಟ್ರೆಕ್ಕಿಂಗ್‌ಗೆ ಹೊರಟ ಅನಾಮಧೇಯರಂಥ ಪಾತ್ರಗಳಿಗೆಂದೇ ಹೇಳ ಹೆಸರಿಲ್ಲದವರನ್ನು ಗುರುತಿಸಲಾಯ್ತು, ಇಡೀ ಚಿತ್ರದ ಶೂಟಿಂಗ್, ಮುಹೂರ್ತ, ನಿರ್ಮಾಣವನ್ನು ಪ್ರಜ್ಞಾಪೂರ್ವಕವಾಗೇ ರಹಸ್ಯವಾಗಿಡಲಾಯ್ತು, ಬಿಡುಗಡೆಯ ಬಗ್ಗೆಯೂ ಅದೇ ನಿಗೂಢತೆಯನ್ನು ಕಾಯಲಾಯ್ತು, ಇದೆಲ್ಲದರ ಪ್ರತಿಫಲವೆಂಬಂತೆ 6-5=2 ಗೆದ್ದಿದೆ. ಕಲ್ಪನೆ ಮತ್ತು ವಾಸ್ತವವನ್ನು ಅದೆಷ್ಟು ಸೂಕ್ಷ್ಮವಾಗಿ ಸಂಯೋಜಿಸಲಾಗಿದೆಯೆಂದರೆ ಎಲ್ಲೂ ಇದೊಂದು ಚಿತ್ರ ಎನ್ನಿಸುವುದೇ ಅಲ್ಲ, ಎಲ್ಲೂ ಅಬ್ಬರದ ಹಿನ್ನೆಲೆ ಸಂಗೀತವಿಲ್ಲ, ಶಬ್ದಗ್ರಹಣ ಅದೆಷ್ಟು ಕರಾರುವಾಕ್ಕೆಂದರೆ ಶಬ್ದಕ್ಕಿಂತಲೂ ಮೌನವೇ ಇಡೀ ಚಿತ್ರದ ಜೀವಾಳದಂತಿದೆ.

6-5=2 ಚಿತ್ರದ ಅನಿರೀಕ್ಷಿತ ಯಶಸ್ಸಿಗೂ ಕನ್ನಡ ಪ್ರೇಕ್ಷಕನ ಅಭಿರುಚಿಯೇ ಬದಲಾಗಿರುವುದಕ್ಕೂ ಸಂಬಂಧವಿದೆಯೆ? ಈ ಹಿಂದೆ ಮಚ್ಚು, ಲಾಂಗು, ಹಲ್ಕಾ ಡೈಲಾಗು ಮಾತ್ರವೇ ಚಿತ್ರವೊಂದನ್ನು ಗೆಲ್ಲಿಸುತ್ತದೆಯೆಂಬ ಗಾಂಧಿನಗರದ ನಂಬಿಕೆಯನ್ನು ಪ್ರಜ್ಞಾವಂತ ಪ್ರೇಕ್ಷಕ ವರ್ಗ ಸುಳ್ಳಾಗಿಸ ಹೊರಟಿದೆಯೇ? ಹೊಸ ಪೀಳಿಗೆಯ ಪ್ರೇಕ್ಷಕ ಸಮೂಹವೊಂದು ಹುಟ್ಟಿಕೊಂಡಿದ್ದರ ಸೂಚನೆಯಾ ಇದು?

6-5=2 ಯಶಸ್ಸು ಸದ್ಯ ಕನ್ನಡದ ಮಟ್ಟಿಗಂತೂ ಅಭೂತಪೂರ್ವವೇ ಸರಿ.

● ರಾ. ಸೋಮನಾಥ್

ಸಿಂಪಲ್ಲಾಗ್, ಲೂಸಿಯಾ, ಜಟ್ಟ ಮತ್ತು ಗೊಂಬೆಗಳ ಲವ್...!

ಬ್ಯಾನರ್, ಬಜೆಟ್ ಮತ್ತು ಸ್ಟಾರ್‌ವ್ಯಾಲ್ಯೂ ಮೀರಿ ಕೇವಲ ಕತೆ ಮತ್ತು ನಿರೂಪಣೆಯ ಕಾರಣಕ್ಕಾಗೇ ಸಿನಿಮಾಗಳು ಹಿಟ್ಟಾಗುವ ಪ್ರವೃತ್ತಿ ಇಲ್ಲಿಗೆ 10 ವರ್ಷಗಳ ಹಿಂದೆಯೇ ತಮಿಳು, ತೆಲುಗಿನಲ್ಲಿ ಶುರುವಾಗಿತ್ತು. ತಡವಾಗಿಯಾದರೂ ಅದೀಗ ಕನ್ನಡದಲ್ಲಿ ಕಾಲಿಟ್ಟಿದೆಯೆ? ಅಥವಾ ಹೊಸ ಪೀಳಿಗೆಯ ಪ್ರಜ್ಞಾವಂತ ಪ್ರೇಕ್ಷಕ ವರ್ಗವೊಂದು ಕನ್ನಡದ ಪಾಲಿಗೆ ಸೃಷ್ಟಿಯಾಗಿದೆಯೆ?

2013ರ ಸಾಲಂತೂ ಇಂಥದೊಂದು ಸಾಧ್ಯತೆಯನ್ನು ನಿಚ್ಚಳವಾಗಿಸಿದೆ. ಕಾಶಿನಾಥ್ ಚಿತ್ರ '12AM' ಈ ಪೈಕಿ ನಾಂದಿ ಎನ್ನಬಹುದಾದ ಚಿತ್ರವೆ. ಹೆಸರಿಗದು ಹಾರರ್ ಚಿತ್ರವಾದರೂ ಪುನರ್ಜನ್ಮ ಮತ್ತು ದೆವ್ವದ ಅಸ್ತಿತ್ವದ ಪ್ರಶ್ನೆಯನ್ನೇ ತಾರ್ಕಿಕವಾಗಿ ನಿರೂಪಣೆಗೈದಿತ್ತು. ದೊಡ್ಡ ಬಜೆಟ್, ಸ್ಟಾರ್‌ಗಿರಿ ಯಾವುದೂ ಇಲ್ಲದೆ ಸದ್ದಿಲ್ಲದೆ ಹಿಟ್ಟಾದ ಆ ಚಿತ್ರದ ಬಗ್ಗೆ ವಿಮರ್ಶಕರ್ಯಾರೂ ತಲೆಕೆಡಿಸಿಕೊಳ್ಳಲಿಲ್ಲ, ಇದರ ಬೆನ್ನಲ್ಲೇ ತೆರೆಕಂಡದ್ದು ಸಂತೋಷ್ ನಿರ್ದೇಶನದ 'ಗೊಂಬೆಗಳ ಲವ್'.

ಶ್ರುತಿಯ ಹೊರತಾಗಿ ಮಿಕ್ಕೆಲ್ಲರೂ ಅಪರಿಚಿತರಾಗಿದ್ದರೂ ಕತೆ ಮತ್ತು ನಿರೂಪಣೆಯಿಂದಾಗಿ ಅದು ವಿಮರ್ಶಕ ವಲಯದ ಗಮನ ಸೆಳೆದಿತ್ತು, ಅಷ್ಟಕ್ಕೂ ಇಡೀ ಚಿತ್ರಕ್ಕೆ ತಗುಲಿದ್ದು ಕೇವಲ 50 ಲಕ್ಷ ಮಾತ್ರ. ಇಷ್ಟು ಕಮ್ಮಿಗೆ ನಿರ್ಮಿಸಿದ 'ಗೊಂಬೆಗಳ ಲವ್' ಇಪ್ಪತ್ತೋ ಇಪ್ಪತ್ತೈದೋ ಥೇಟರುಗಳಲ್ಲಿ ತೆರೆಕಂಡಿತಾದರೂ ಒಂದೇ ವಾರಕ್ಕೆ ಅದರ ಅರ್ಧ ಬಂಡವಾಳ ಟಿಕೆಟ್ಟುಗಳ ಮೂಲಕ ಬಂದಿತ್ತು, ಸ್ಯಾಟಲೈಟ್ ಹಕ್ಕೊಂದರಿಂದಲೇ ಇಡೀ ಚಿತ್ರದ ಬಜೆಟ್ ಮೊತ್ತ ವಾಪಸ್ಸಾಗಿತ್ತು, ಬಹುಶಃ ಪ್ರಮೋಷನ್ ಇನ್ನೂ ಉತ್ತಮವಾಗಿದ್ದರೆ ಚಿತ್ರ ಹೆಸರು ಮತ್ತು ದುಡ್ಡು ಎರಡನ್ನೂ ಮಾಡುತ್ತಿತ್ತೇನೊ!

ಹಾಗಂಥ 'ಗೊಂಬೆಗಳ ಲವ್' ಹುಟ್ಟಿಸಿದ ನಿರೀಕ್ಷೆಯನ್ನಂತೂ ಅಷ್ಟು ಸುಲಭಕ್ಕೆ ನಿರ್ಲಕ್ಷಿಸುವಂತಿರಲಿಲ್ಲ, ಇದನ್ನು ಮತ್ತಷ್ಟೂ ಉತ್ತಮಪಡಿಸಿದ್ದು ಪ್ರತಿಭಾವಂತ ನಿರ್ದೇಶಕ ಸುನೀಲ್ ನಿರ್ಮಾಣದ 'ಸಿಂಪಲ್ಲಾಗ್ ಒಂದು ಲವ್ ಸ್ಟೋರಿ!'

ಕಚಗುಳಿಯಿಡುವ ಡೈಲಾಗ್ ಒಂದನ್ನೇ ಬಂಡವಾಳವಾಗಿಸಿಕೊಂಡಿದ್ದ 'ಸಿಂಪಲ್ಲಾಗ್...' ಕೇವಲ 62 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣಗೊಂಡಿತ್ತು, ರಿಲೀಜು ಪ್ರಚಾರ ಸೇರಿ 1.30 ಕೋಟಿಯ ತನಕ ಖರ್ಚಾಗಿತ್ತು, ಬಿಡುಗಡೆಯಾದ 3ನೇ ವಾರದ ಹೊತ್ತಿಗದು ಮೂರುವರೆ ಕೋಟಿ ರೂಪಾಯಿಗಳ ಲಾಭ ಗಳಿಸಿತ್ತು.

ಇದರರ್ಥ 'ಸಿಂಪಲ್ಲಾಗ್' ಅದ್ಭುತ ಚಿತ್ರವೆಂದೇನಲ್ಲ, ವಿಭಿನ್ನ ಧಾಟಿಯ ನಿರೂಪಣೆಯ ಒಂದೇ ಕಾರಣಕ್ಕೆ ಯಾರೇ ಸ್ಟಾರ್‌ಗಳು, ತಾಂತ್ರಿಕತೆಯಿಲ್ಲದೆ ಗೆದ್ದಿತ್ತು, ಇದರ ವಿಶೇಷವೆಂದರೆ ಬಿಡುಗಡೆಗೂ ಮೊದಲೇ ಫೇಸ್‌ಬುಕ್ ಮತ್ತು ಯೂ ಟ್ಯೂಬ್‌ಗಳಲ್ಲಿ ಚಿತ್ರದ ಟ್ರೈಲರ್ ನೋಡಿದ್ದ ಸುಶಿಕ್ಷಿತ ವರ್ಗ ಸದ್ದಿಲ್ಲದೇ ಚಿತ್ರವನ್ನು ಗೆಲ್ಲಿಸಿತ್ತು. ಆನಂತರದ 'ಲೂಸಿಯಾ' ಹಿಟ್ಟಾಗಿದ್ದು ಕೂಡ ಇದೇ ಇಂಟರ್ನೆಟ್ ಪರಿಣಿತ ಪ್ರೇಕ್ಷಕ ವರ್ಗದ ಮೂಲಕವೆ. ಫೇಸ್‌ಬುಕ್ ಮೂಲಕ ತನ್ನ ಗೆಳೆಯರು ಹಾಗೂ ಸಿನಿಮಾ ವ್ಯಸನಿಗಳಿಂದ ಚಿತ್ರಕ್ಕೆ ಬಂಡವಾಳ ಸಂಗ್ರಹಿಸಿದ ನಿರ್ದೇಶಕ ಪವನ್ ವಿಭಿನ್ನ ಕತೆಯೊಂದನ್ನೇ ಆಧಾರವಾಗಿಸಿಕೊಂಡಿದ್ದಕ್ಕೆ ನಿರೀಕ್ಷೆಗೂ ಮೀರಿದ ಯಶಸ್ಸು ಸಿಕ್ಕಿತ್ತು, ನೀನಾಸಂ ಸತೀಶ್ ಆಗಷ್ಟೇ ಕಣ್ಣು ಬಿಡುತ್ತಿದ್ದ ನಟ. ಕೇವಲ 50 ಲಕ್ಷದಲ್ಲಿ ಇಡೀ ಚಿತ್ರ ಮುಗಿಸಿ ಪ್ರಚಾರಕ್ಕೆಂದು ಅಷ್ಟೇ ಖರ್ಚು ಮಾಡಿ ಸರಿಸುಮಾರು 70 ಥೇಟರುಗಳಲ್ಲಿ ತೆರೆಕಂಡ 'ಲೂಸಿಯಾ' ಒಂದೇ ವಾರಕ್ಕೆ ಹಾಕಿದ ಬಂಡವಾಳವನ್ನು ದುಡಿದಿತ್ತು.

'ಲೂಸಿಯಾ' ಹುಟ್ಟಿಸಿದ ಮತ್ತೊಂದು ಸಾಧ್ಯತೆಯೆಂದರೆ ಕನ್ನಡ ಚಿತ್ರಗಳೆಂದರೇನೇ ಮೂಗು ಮುರಿಯುತ್ತಿದ್ದ ಪಿವಿಆರ್, ಮಲ್ಟಿಪ್ಲೆಕ್ಸ್‌ಗಳಲ್ಲಿ ಶತದಿನೋತ್ಸವ ಆಚರಿಸಿದ್ದು!

ಕೇವಲ ಒಂದು ಕೋಟಿ ವೆಚ್ಚದಲ್ಲಿ ಚಿತ್ರ ಬಿಡುಗಡೆ ಮಾಡಿ ನಾಲ್ಕು ಕೋಟಿ ಗಳಿಸಿ ಎರಡು ಕೋಟಿಯ ಲಾಭ ತಂದ 'ಲೂಸಿಯಾ' ಗೆದ್ದದ್ದು ಕೂಡ ಇಂಟರ್ನೆಟ್ ಪ್ರಭಾವಿತ ಪ್ರೇಕ್ಷಕ ವರ್ಗದಿಂದಲೇ.

ಇದೇ ಸಾಲಿಗೆ ಸೇರುವ ಲೇಟೆಸ್ಟ್ ನಿದರ್ಶನವಿದ್ದರೆ ಅದು ಗಿರಿರಾಜ್ ನಿರ್ದೇಶನದ 'ಜಟ್ಟ'. ಪ್ರಯೋಗಶೀಲ ಸಿನಿಮಾ ಒಂದರ ಎಲ್ಲಾ ಸಾಧ್ಯತೆಗಳನ್ನೂ ಮೇಳೈಸಿಕೊಂಡಿದ್ದ 'ಜಟ್ಟ' ಚಿತ್ರವನ್ನು ಮತ್ತಷ್ಟು ವ್ಯವಸ್ಥಿತವಾಗಿ ಬಿಡುಗಡೆ ಮಾಡಿದ್ದರೆ ಇನ್ನಷ್ಟು ಮಂದಿ ವೀಕ್ಷಿಸುತ್ತಿದ್ದರೇನೊ. ಕೇವಲ 70 ಲಕ್ಷದಲ್ಲಿ ತಯಾರಾಗಿ ಬಿಡುಗಡೆಗೆ ಮೊದಲೇ 1.35 ಕೋಟಿ ಟೀವಿ ರೈಟ್ಸ್ ಗಿಟ್ಟಿಸಿದ ಈ ಚಿತ್ರದ ತಮಿಳು ಡಬ್ಬಿಂಗ್‌ಗೂ ಗಣನೀಯ ಬೆಲೆ ದೊರೆತಿತ್ತು.

ಆದರೆ '6-5=2' ಒಂದೆಡೆ ಮಲ್ಟಿಪ್ಲೆಕ್ಸ್ ಪ್ರೇಕ್ಷಕ ವರ್ಗ ಇನ್ನೊಂದೆಡೆ ಗಾಂಧಿಕ್ಲಾಸ್ ವೀಕ್ಷಕ ಸಮೂಹ ಎರಡನ್ನೂ ಸೆಳೆಯಲಾರಂಭಿಸಿದೆ. ಫೇಸ್‌ಬುಕ್ ಮತ್ತು ಯೂ ಟ್ಯೂಬ್‌ಗಳಲ್ಲಿ ಇದಕ್ಕೆ ವ್ಯಕ್ತವಾದ ಪ್ರತಿಕ್ರಿಯೆಗಳಂತೂ 'ಲೂಸಿಯಾ' ಹುಟ್ಟುಹಾಕಿದ ಇಂಟರ್‌ನೆಟ್ ಪ್ರಭಾವದ ಪರಂಪರೆಯನ್ನು ದುಪ್ಪಟ್ಟಾಗಿಸಿದೆಯಂತೆ. ಇನ್ನು ಮುಂದೆ ಕನ್ನಡ ಚಿತ್ರಗಳೆಂದರೆ ಕೇವಲ ಹೀರೋಗಳು, ಬ್ಯಾನರ್ ಮತ್ತು ಕೋಟಿ ಲೆಕ್ಕವಷ್ಟೇ ಆಗಿರುವುದಿಲ್ಲ.

ಪ್ರತಿಭಾವಂತ ಪ್ರೇಕ್ಷಕನೊಬ್ಬ ಕೂಡ ಸಿನಿಮಾ ಮಾಡಬಹುದು ಮತ್ತು ಗೆಲ್ಲಬಹುದೆಂಬುದನ್ನು ಯಾರಿಂದಲೂ ತಡೆಯಲಾಗುವುದಿಲ್ಲ!

ಸಂದರ್ಶನ

'ಹಾಡು ಹೊಸೆಯುವುದು ಸುಲಭವಲ್ಲ'

ಯುವ ಚಿತ್ರದ 'ಓ ತಾವರೆ ಕೆಂದಾವರೆ', ದಾಸವಾಳ ಚಿತ್ರದ 'ಒಂದು ಎರಡು ಮೂರು', ಸ್ಟೋರಿ ಕಥೆ ಚಿತ್ರದ 'ಬದ್ಕೋಕೆ ಸಾಯ್ತಾವ್ನೆ ನರಮನ್ಸ', ಪ್ರೇಮಕಹಾನಿ ಚಿತ್ರದ, 'ಗಿಳಿಯ ಮರಿಯೊಂದು ಗೂಡು ಬಿಟ್ಟಿದೆ', ವಿಲನ್ ಚಿತ್ರದ 'ಗೆಳತಿ ನನ್ನಿಂದ ದೂರಾದೆ ಯಾಕೆ', 'ಗೋವಿಂದಾಯ ನಮಃ' ಚಿತ್ರದ 'ಮೊದಮೊದಲಿಗೆ ಹೀಗೇನೆ', ಜೀವ ಚಿತ್ರದ 'ಬೇಕೇ ಬೇಕು' ಸೇರಿದಂತೆ ಸುಮಾರು ನೂರು ಹಾಡುಗಳನ್ನು ರಚಿಸಿರುವ ಭರವಸೆಯ ಚಿತ್ರಸಾಹಿತಿ ಸಂತೋಷ್ ನಾಯ್ಕ್ ಇಲ್ಲಿ ಮಾತಾಡಿದ್ದಾರೆ.

ನಿಮ್ಮ ಊರು, ಕುಟುಂಬ, ಶಿಕ್ಷಣದ ಕುರಿತು ಹೇಳುವಿರಾ?

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಗೇರುಸೊಪ್ಪ ನನ್ನ ಹುಟ್ಟೂರು. ತಂದೆ ಪರಮೇಶ್ವರ ನಾಯ್ಕ ವೃತ್ತಿಯಲ್ಲಿ ಕೃಷಿಕರು. ತಾಯಿ ಸೀತಾ ಗೃಹಿಣಿ. ಗೇರುಸೊಪ್ಪದಲ್ಲೇ ಹೈಸ್ಕೂಲು ಮುಗಿಸಿ ಎಸ್.ಡಿ.ಎಂ. ಕಾಲೇಜ್ ಹೊನ್ನಾವರದಲ್ಲಿ ಪದವಿ ಶಿಕ್ಷಣ ಪೂರೈಸಿದೆ. ಇತ್ತೀಚಿಗೆ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಮಾಡಿದೆ.

** ಕಾವ್ಯದೆಡೆಗಿನ ಆಸಕ್ತಿ ಯಾವ ವಯಸ್ಸಿನಲ್ಲಿ ಹುಟ್ಟಿಕೊಂಡಿತು? ಹೇಗೆ?*

ಚಿಕ್ಕವನಿರುವಾಗಲೇ ಕಾವ್ಯದೆಡೆಗೆ ಸೆಳೆತವಿತ್ತು. ಕಾರಣ ಯಕ್ಷಗಾನ ನನ್ನ ಮೇಲೆ ಪ್ರಭಾವ ಬೀರಿದ್ದು. ಅಲ್ಲಿ ಹಲವು ಹಳಗನ್ನಡ ಕಾವ್ಯವನ್ನು ಹೊಸಗನ್ನಡಕ್ಕೆ ಭಾಷಾಂತರಿಸುವ ಪ್ರಕ್ರಿಯೆ ಇದೆ. ಅದೇ ನನ್ನಲ್ಲಿ ಸಾಹಿತ್ಯದ ಒಲವು ಮೂಡಿಸಿತು ಎಂದರೆ ಅತಿಶಯೋಕ್ತಿ ಆಗಲಾರದು. ಕ್ರಮೇಣ ನಾನು ಬರವಣಿಗೆಯಲ್ಲಿ ತೊಡಗಿಸಿಕೊಂಡೆ. ಮೊದಲೇ ನಾಚಿಕೆ ಸ್ವಭಾವದವನಾದ್ದರಿಂದ ಬರೆದ ಕವನವನ್ನು ಯಾರಿಗೂ ತೋರಿಸುತ್ತಿರಲಿಲ್ಲ. ಶಾಲಾದಿನಗಳಲ್ಲಿ ಬರೆದ ಕವನಗಳು ಈಗಲೂ ನನ್ನ ಶೇಖರಣೆಯಲ್ಲಿವೆ. ಕಾಲೇಜು ದಿನಗಳಲ್ಲಿ ಬರವಣಿಗೆಯ ಹುಚ್ಚು ಹೆಚ್ಚಾಗುತ್ತಾ ಹೋಯಿತು. ಆ ಉತ್ಸಾಹಕ್ಕೆ ಪ್ರೋತ್ಸಾಹ ತುಂಬಿದ್ದು ನನ್ನ ಅಕ್ಕ. ಒಮ್ಮೆ ಧಾರವಾಡದಲ್ಲಿ ನಡೆದ ಯುವಕವಿಗಳ ಕಾವ್ಯವಾಚನ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆದೆ. ಅದು ನನ್ನೊಳಗಿರುವ ಕವಿಯಲ್ಲಿ ಆತ್ಮವಿಶ್ವಾಸ ತುಂಬಿತು.

** ಚಿತ್ರರಂಗದತ್ತ ಒಲವು ಬಂದಿದ್ದು ಯಾವಾಗ? ಯಾಕೆ?*

ಆರಂಭಿಕ ದಿನಗಳಲ್ಲಿ ಗಂಭೀರ ಸಾಹಿತ್ಯದತ್ತ ನನ್ನ ಚಿತ್ತವಿತ್ತು. ಕಾಲಕ್ರಮೇಣ ಬರವಣಿಗೆಯಲ್ಲಿ ಬದುಕು ಕಟ್ಟಿಕೊಳ್ಳಬೇಕೆಂಬ ಬಯಕೆ ಮತ್ತು ಸಿನಿಮಾದಲ್ಲಿ ಏನಾದರೂ ಸಾಧಿಸಬೇಕೆಂಬ ತುಡಿತ ಈ ಕಡೆ ವಾಲುವಂತೆ ಮಾಡಿತು. ಈ ನನ್ನ ಆಸೆಗೆ ಮನೆಯವರಿಂದ ಪ್ರೋತ್ಸಾಹವೂ ದೊರಕಿದ್ದು ನನ್ನ ಸುದೈವ. ಮೊದಮೊದಲು ಸಿನಿಮಾ ಶೈಲಿಗೆ ಹೊಂದಿಕೊಳ್ಳಲು ಪರದಾಡಬೇಕಾಯ್ತು. ಕ್ರಮೇಣ ಹೊಂದಿಕೊಂಡು ಗೀತರಚನೆಯನ್ನೇ ವೃತ್ತಿಯಾಗಿ ಸ್ವೀಕರಿಸಿದೆ.

** ಗೀತರಚನಾಕಾರನಾಗಿ ನಿಮ್ಮ ಮೊದಲ ಹಾಡು ಯಾವುದು? ಆ ಅವಕಾಶ ಒದಗಿಬಂದದ್ದು ಹೇಗೆ?*

ಎಲ್ಲರಂತೆ ಅವಕಾಶಕ್ಕಾಗಿ ಗಾಂಧಿನಗರ ಅಲೆಯುವ ಪರಿಸ್ಥಿತಿ ನನಗೆ ಒದಗಿಬರಲಿಲ್ಲ. ಪದವಿ ಪರೀಕ್ಷೆ ಬರೆದು ಸೀದಾ ಹೋಗಿ ನಿಂತಿದ್ದು ಗುರುಕಿರಣ್ ಸರ್ ಮನೆ ಎದುರು. ಆ ದಿನವೇ ಸಿನಿಮಾವೊಂದಕ್ಕೆ ಹಾಡು ಬರೆಯಿಸುವ ಭರವಸೆ ನೀಡಿದರು. ಅದರಂತೆ 'ಯುವ' ಚಿತ್ರದ 'ಓ ತಾವರೆ ಕೆಂದಾವರೆ' ಎಂದು ಶುರುವಾಗುವ ಗೀತೆಯನ್ನು ಬರೆಯುವ ಅವಕಾಶವನ್ನು ಗುರುಕಿರಣ್ ಸರ್ ಒದಗಿಸಿಕೊಟ್ಟು ನನ್ನನ್ನು ಚಿತ್ರರಂಗಕ್ಕೆ ಪರಿಚಯಿಸಿದರು. ಅಂದಿನಿಂದ ಇಲ್ಲೀವರೆಗೆ ಸುಮಾರು ನೂರು ಹಾಡಿನ ಸಮೀಪ ಬಂದುನಿಂತಿರುವೆ.

** ನೀವು ಈವರೆಗೆ ಬರೆದಿರುವ ಚಿತ್ರಗೀತೆಗಳನ್ನು ಹೆಸರಿಸುವಿರಾ?*

ಇಲ್ಲಿಯತನಕ ತೊಂಬತ್ತಕ್ಕೂ ಹೆಚ್ಚು ಹಾಡುಗಳನ್ನು ರಚಿಸಿದ್ದೇನೆ. ಒಂದೆರಡು ಧಾರಾವಾಹಿಗಳಿಗೂ ಶೀರ್ಷಿಕೆ ಗೀತೆ ರಚಿಸಿದ್ದೇನೆ. ಇಲ್ಲಿಯವರೆಗೆ ಬರೆದಿರುವ ಹಾಡುಗಳಲ್ಲಿ ಹೆಚ್ಚಿನವು ಬಿಡುಗಡೆಗೊಳ್ಳಬೇಕಿದೆ. ಹಲವು ಬಿಡುಗಡೆಗೊಂಡಿವೆ. ಬಿಡುಗಡೆಗೊಂಡವುಗಳಲ್ಲಿ ಯುವ ಚಿತ್ರದ 'ಓ ತಾವರೆ ಕೆಂದಾವರೆ', ದಾಸವಾಳ ಚಿತ್ರದ 'ಒಂದು ಎರಡು ಮೂರು', ಸ್ಟೋರಿ ಕಥೆ ಚಿತ್ರದ 'ಬದ್ಕೋಕೆ ಸಾಯ್ತಾವ್ನೆ ನರಮನ್ಸ', ಪ್ರೇಮಕಹಾನಿ ಚಿತ್ರದ 'ಗಿಳಿಯ ಮರಿಯೊಂದು ಗೂಡು ಬಿಟ್ಟದೆ' ವಿಲನ್ ಚಿತ್ರದ 'ಗೆಳತಿ ನನ್ನಿಂದ ದೂರಾದೆ ಯಾಕೆ', ಗೋವಿಂದಾಯ ನಮಃ ಚಿತ್ರದ 'ಮೊದ ಮೊದಲಿಗೆ ಹೀಗೇನೆ', ಜೀವ ಚಿತ್ರದ 'ಬೇಕೇ ಬೇಕು', ರಾಧನ ಗಂಡ ಚಿತ್ರದ 'ಬಟರ್ ಫ್ಲೈಸ ಬಿಟ್ಟಂಗಾಯ್ತು' ಇತ್ಯಾದಿ...

** ನೀವು ಚಿತ್ರ ಸಂಭಾಷಣೆಯನ್ನೂ ಬರೆಯುತ್ತೀರಿ ಎಂದು ಕೇಳಿದ್ದೇನೆ. ಅದರ ಬಗ್ಗೆ ಹೇಳುವಿರಾ?*


ಸಂಭಾಷಣಾಕಾರನಾಗಿ ನಾನಿನ್ನೂ ಗುರುತಿಸಿಕೊಂಡಿಲ್ಲ. ನನ್ನ ಗೆಳೆಯರೊಬ್ಬರ ಹೆಸರಿಡದ ಚಿತ್ರಕ್ಕೆ ಈಗ ಬರೆಯುತ್ತಿದ್ದೇನೆ. ನನ್ನ ಪ್ರಕಾರ ಗೀತರಚನೆಗಿಂತ ಸಂಭಾಷಣೆ ಹೊಸೆಯುವುದು ಸುಲಭ. ಆದರೆ ಪಾತ್ರದ ಒಳಅರಿವು, ಪಾತ್ರದ ಮೇಲೆ ಹಿಡಿತ, ಮನರಂಜನಾತ್ಮಕ ಅಂಶಗಳನ್ನು ಬೆರೆಸುವುದರಲ್ಲಿ ನೈಪುಣ್ಯತೆಯನ್ನು ಹೊಂದಿರಬೇಕು. ಇಂಥ ಕೆಲವು ಸೂಕ್ಷ್ಮತೆ ಹೊಂದಿದ್ದರೆ ಸಂಭಾಷಣೆ ಬರೆಯುವ ಕೆಲಸ ಸುಲಭ. ಆದರೆ ಹಾಡು ಹೊಸೆಯುವುದು ಎಲ್ಲರು ಅಂದುಕೊಂಡಂತೆ ಸುಲಭದ ಕಾಯಕವಲ್ಲ ಅನ್ನೋದು ನನ್ನ ಅಭಿಪ್ರಾಯ.

** ಒಬ್ಬ ಸಾಹಿತಿಗೆ ಅಧ್ಯಯನಶೀಲ ಗುಣ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಯಾವ ಯಾವ ಸಾಹಿತಿಯ ಕೃತಿಗಳನ್ನು ಓದಿದ್ದೀರಾ? ನೀವು ಕವಿತೆಗಳನ್ನೂ ಬರೆಯುತ್ತೀರಾ?*

ಕುವೆಂಪು, ಎಸ್.ಎಲ್.ಭೈರಪ್ಪ, ಶಿವರಾಂ ಕಾರಂತ, ಬೇಂದ್ರೆ, ಪಿ.ಲಂಕೇಶ್, ಕಂಬಾರರು, ಜಿ.ಪಿ.ರಾಜರತ್ನಂ ಸೇರಿದಂತೆ ಹಲವು ಬರಹಗಾರರ ಹಲವಾರು ಕಾವ್ಯ ಪ್ರಕಾರವನ್ನು ಓದಿದ್ದೇನೆ, ಓದುತ್ತಿದ್ದೇನೆ, ಓದುತ್ತಿರುತ್ತೇನೆ. ಹೌದು, ಆಗಾಗ ಕವಿತೆಗಳನ್ನೂ ಬರೆಯುತ್ತೇನೆ. ನನ್ನ ಒಂದು ಕವನ ಸಂಕಲನವನ್ನು ಪ್ರಕಟಿಸುವ ಮಹದಾಸೆ ಇದೆ. ಅದು ಸದ್ಯದಲ್ಲೇ ಕಾರ್ಯ ರೂಪಕ್ಕೆ ಬರಲಿದೆ.

** ನಿಮ್ಮ ನೆಚ್ಚಿನ ಗೀತರಚನಕಾರರು ಯಾರು? ಯಾಕೆ?*

ಹಂಸಲೇಖ ಸರ್ ನನ್ನ ನೆಚ್ಚಿನ ಚಿತ್ರ ಸಾಹಿತಿ. ಅವರು ಸಿನಿಮಾ ಸಾಹಿತ್ಯದ ವಿಶ್ವವಿದ್ಯಾಲಯ ಇದ್ದಂತೆ. ಗಂಭೀರ ವಿಷಯವನ್ನು ಸುಲಭವಾಗಿ ಸುಲಲಿತವಾಗಿ ಆಡುಭಾಷೆಯಲ್ಲಿ ಎಲ್ಲರ ಮನಮುಟ್ಟುವಂತೆ ಹೇಳುವ ಅವರ ಶೈಲಿಯೇ ನನಗಿಷ್ಟ. ಉಳಿದಂತೆ ಉದಯಶಂಕರ್, ಜಯಂತ್ ಕಾಯ್ಕಿಣಿ ಸೇರಿದಂತೆ ಇತ್ತೀಚಿನ ಅನೇಕರು ನನಗಿಷ್ಟವಾಗುತ್ತಾರೆ.



ಎಲ್ಲರೂ ಒಂದಲ್ಲ ಒಂದು ರೀತಿ ನನ್ನ ಮೇಲೆ ಪ್ರಭಾವ ಬೀರಿದವರೇ. ಹಾಗೇನೆ, ಹಳೆಯ ಹಿಂದಿ ಹಾಡುಗಳನ್ನೂ ತುಂಬ ಇಷ್ಟಪಡುತ್ತೇನೆ. ಆನಂದ್ ಭಕ್ಷಿ, ಜಾವೇದ್ ಅಕ್ತರ್, ಸಮೀರ್, ಗುಲ್ಜಾರ್ ಮುಂತಾದವರು ನನ್ನ ಮೆಚ್ಚಿನ ಗೀತಸಾಹಿತಿಗಳು.

** ಚಿತ್ರರಂಗದಲ್ಲಿ ಬದುಕು ಕಟ್ಟಿಕೊಳ್ಳುತ್ತೇನೆ ಎಂಬ ವಿಶ್ವಾಸ ಇದೆಯಾ? ಇದ್ದರೆ ಹೇಗೆ?*

ಖಂಡಿತವಾಗಿ ಇದೆ. ಇಲ್ಲಿಯವರೆಗೆ ದೊಡ್ಡ ಯಶಸ್ಸು ಸಿಗದಿದ್ದರೂ ಅವಕಾಶಕ್ಕೇನು ಕೊರತೆ ಇಲ್ಲ. ಹಣಕಾಸಿಗೇನು ಕೊರತೆ ಆಗಿಲ್ಲ. ಜೊತೆಗೆ, ನನ್ನ ಇನ್ನೊಂದು ಗುರಿ ನಿರ್ದೇಶನ. ಅದರ ತಯಾರಿ ತೆರೆಮರೆಯಲ್ಲಿ ನಡೆಯುತ್ತಿದೆ. ಮುಂದಿನ ವರ್ಷ ನಿರ್ದೇಶನದ ಕನಸು ನನಸಾಗಲಿದೆಯೆಂದು ನಂಬಿದ್ದೇನೆ. ಹೀಗಾಗಿ ಇಲ್ಲಿ ಗಟ್ಟಿಯಾಗಿ ನೆಲೆಕಂಡುಕೊಳ್ಳುವ ವಿಶ್ವಾಸ ನನ್ನದು.

** ನಿಮ್ಮ ಮುಂದಿನ ಚಿತ್ರಗಳು ಯಾವುವು?*


'ಬ್ರಹ್ಮ', 'ಭೈರೇಗೌಡ', 'ಅನಾಮಿಕ';, ರಮ್ಯ ದಿಗಂತ್ ನಟನೆಯ ಚಿತ್ರ 'ಖುಷಿ ಪಡಿ' ಹೀಗೊಂದಿಷ್ಟು...



ಸಂದರ್ಶಕ
ಹೃದಯಶಿವ

...ಉದ್ಧಾರವಾಗಿದ್ದು ಕರ್ನಾಟಕವಲ್ಲ! ಕರವೇ ಕಾರ್ಯಕರ್ತರು!!!

ಡಿಸೆಂಬರ್ 10, 2013 ರ ರಾತ್ರಿಯಲ್ಲಿ ...ಮಾಯಸಂದ್ರದ ಬಳಿ ನಡೆದ ಕರವೇ ಕಾರ್ಯಕರ್ತ (ನಾರಾಯಣ ಗೌಡ ಬಣ)ರ ದರೋಡೆ ಪ್ರಕರಣದಿಂದ ಕನ್ನಡಿಗರೆಲ್ಲರೂ ತಲೆತಗ್ಗಿಸುವಂತಾಗಿದೆ. ಆದರೆ ಆಶ್ಚರ್ಯವಾಗಲಿಲ್ಲ. ಯಾಕೆಂದರೆ ಈ ಸಂಘಟನೆ ಹುಟ್ಟಿಕೊಂಡಿದ್ದೇ ಅದಕ್ಕಾಗಿ. ಈ ಸಂಘಟನೆ ನಡೆಸುತ್ತಿರುವ ಎಷ್ಟೋ ದರೋಡೆ ಪ್ರಕರಣಗಳು ಬೆಳಕಿಗೆ ಬಂದಿಲ್ಲ. ...ಮೊನ್ನೆ ನಡೆದ ಪ್ರಕರಣ ಮಾತ್ರ ...ಜಗಜ್ಜಾಹೀರಾಗಿದೆ. ಇಂತಹ ದರೋಡೆಕೋರರ ಸಂಘಟನೆಗಳನ್ನು ಸರ್ಕಾರ ಮಟ್ಟ ಹಾಕುವ ...ಟ್ಟಿನಲ್ಲಿ ಚಿಂತಿಸುವುದೊಳಿತು. ಜೀವ ಬೆದರಿಕೆಯೊಡ್ಡಿ ಹಣ ವಸೂಲಿ ಮಾಡಲೆತ್ನಿಸಿದ 22 ಕರವೇ



ಕಾರ್ಯಕರ್ತರನ್ನು ಬಂಧಿಸಿ ಕಂಬಿ ಎಣಿಸಲು ಜೈಲಿಗೆ ಕಳುಹಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಮಹೇಶ್‌ಕುಮಾರ್‌ರವರ ಕರ್ತವ್ಯ ನಿಷ್ಠೆಯನ್ನು ಹಾಗೂ ತೈಲಗೆರೆ ಗ್ರಾಮಸ್ಥರ ದಿಟ್ಟತನವನ್ನು ಪ್ರಶಂಸಿಸಬೇಕು.


ಕರ್ನಾಟಕದಲ್ಲಿ ನೆಲೆಸಿರುವ ಅನ್ಯಭಾಷಿಕರು, ಗುತ್ತಿಗೆದಾರರು, ಕೆಲವು ಸರ್ಕಾರಿ ಅಧಿಕಾರಿಗಳು, ಐಟಿ/ಬಿಟಿ ಕಂಪನಿಗಳ ಮಾಲೀಕರು, ಇನ್ನೂ ಅನೇಕರು ಕರವೇ ಹೆಸರು ಕೇಳಿದರೆ ಸಾಕು ಗಡಗಡನೆ ನಡುಗಿಬಿಡುತ್ತಾರೆ. ಲಾಂಗು ಮಚ್ಚುಗಳನ್ನು ಝಳಪಿಸಿ ಹಫ್ತಾ ವಸೂಲಿ ಮಾಡುವ ರೌಡಿಗಳೂ ಕೂಡ ಪ್ರಾಯಶಃ ಕರವೇ ಕಾರ್ಯಕರ್ತರಷ್ಟು ಹಣ ಸುಲಿದಿರಲಾರರು. ನನಗೆ ತಿಳಿದ ಎಷ್ಟೋ ಆಟೋ ಚಾಲಕರು ಕರವೇ ಕಾರ್ಯಕರ್ತರಾದ ಮೇಲೆ ಹತ್ತು ಬೆರಳಿಗೆ ಚಿನ್ನದ ಉಂಗುರವನ್ನು, ಕತ್ತಿಗೆ ಬಂಗಾರದ ಸರವನ್ನು ಧರಿಸಿಕೊಂಡು ಐಷಾರಾಮಿ ಕಾರುಗಳಲ್ಲಿ, ಮೋಟಾರು ಬೈಕುಗಳಲ್ಲಿ ಮಿರಿಮಿರಿ ಮಿಂಚುತ್ತಾ ಓಡಾಡುತ್ತಿದ್ದಾರೆ. ಗುತ್ತಿಗೆದಾರರನ್ನು, ದೊಡ್ಡದೊಡ್ಡ ಕಟ್ಟಡ ಮಾಲೀಕರನ್ನು ಬೆದರಿಸಿ ಭಾರಿ ಮೊತ್ತದ ಹಣಕ್ಕಾಗಿ ಬೇಡಿಕೆ ಇಡುವ ಇವರು ಹಣ ಕೊಡದಿದ್ದರೆ ನಾನಾ ರೀತಿಯಲ್ಲಿ ಬೆದರಿಕೆಗಳನ್ನೊಡ್ಡುತ್ತಾರೆ.

ಇವರ ಈ ಪುಂಡಾಟಿಕೆಗಳು ಹೊಸದೂ ಅಲ್ಲ, ರಹಸ್ಯವೂ ಅಲ್ಲ. ಯಾರ ಭಯಭೀತಿ ಇಲ್ಲದೆ ರಾಜಾರೋಷವಾಗಿ ಹಣ ಸುಲಿಯುತ್ತಿದ್ದಾರೆ. ಈ ಸಂಬಂಧ ಯಾರೂ ಬಾಯಿ ಬಿಡುವುದಿಲ್ಲ. ಪೊಲೀಸರಿಗೆ ದೂರು ನೀಡುವುದಿಲ್ಲ. ಕೆಲವು ದೃಶ್ಯ ಮಾಧ್ಯಮಗಳಂತೂ ಇವರನ್ನು ಆಪತ್ಬಾಂಧವರಂತೆ, ಅನಾಥರಕ್ಷಕರಂತೆ ವೈಭವೀಕರಿಸಿ ಬೆಳೆಸಿಬಿಟ್ಟಿವೆ. ಕನ್ನಡ ಹೋರಾಟಗಾರರ, ಕರ್ನಾಟಕ ಇತಿಹಾಸದ ಗಂಧಗಾಳಿ ತಿಳಿಯದ, ಅರ್ಥಹೀನ ಪ್ರತಿಭಟನೆಗಳನ್ನು ಮಾಡುತ್ತಾ, ಸಂಬಂಧವಿಲ್ಲದ ವಿಚಾರಕ್ಕೆಲ್ಲಾ ಮೂಗು ತೂರಿಸುತ್ತಾ ಹಣ ವಸೂಲಿ ಮಾಡುವುದೇ ಗುರಿಯಾಗಿಟ್ಟುಕೊಂಡಿರುವ ಇವರು ಕರ್ನಾಟಕದ ಮಾನಮರ್ಯಾದೆಯನ್ನು ರಾಷ್ಟ್ರಮಟ್ಟದಲ್ಲಿ ಹರಾಜು ಹಾಕುತ್ತಿದ್ದಾರೆ.

ಅತ್ತ ಕೋಮುವಾದಿಗಳಿಗೂ ಬೆಂಬಲ ಸೂಚಿಸುತ್ತಾರೆ, ಇತ್ತ ಪ್ರಗತಿಪರ ಪ್ರತಿಭಟನೆಗಳಲ್ಲೂ ಭಾಗವಹಿಸುತ್ತಾರೆ. ಯಾವುದೇ ಗೊತ್ತುಗುರಿಯಿಲ್ಲದ ಧಾಟಿಯಲ್ಲಿ ವರ್ತಿಸುವ ಇಂತಹ ಸಂಘಟನೆಗಳು ರಾಜ್ಯಕ್ಕೆ ಅಗತ್ಯವಿದೆಯೇ? ಇಂತಹ ಬುದ್ಧಿಗೇಡಿಗಳಿಂದ ರಾಜ್ಯದ ಜನ ಏನು ತಾನೇ ನಿರೀಕ್ಷಿಸಿಯಾರು? ಹೊಡಿಬಡಿ ಸಂಸ್ಕೃತಿಯನ್ನೇ ಬಂಡವಾಳವನ್ನಾಗಿಸಿಕೊಂಡು ನಾಯಿಕೊಡೆಗಳಂತೆ ಹುಟ್ಟಿಕೊಳ್ಳುವ ಇಂತಹ ಸಂಘಟನೆಗಳು ಅಷ್ಟೇ ವೇಗದಲ್ಲಿ ಹೇಳಹೆಸರಿಲ್ಲದಂತೆ ಪರಿಸಮಾಪ್ತಿ ಹೊಂದಿರುವ ಉದಾಹರಣೆಗಳು ಸಾಕಷ್ಟಿವೆ. ಈ ಸತ್ಯವನ್ನು ಕೆಲವು ಕನ್ನಡ ಪರ ಸಂಘಟನೆಗಳು ಮನಗಾಣಬೇಕು.


ಕರವೇ ಕಾರ್ಯಕರ್ತರನ್ನು ಯಾವುದೇ ಮುಲಾಜಿಲ್ಲದೆ ಜೈಲಿಗಟ್ಟಿದ ವಿಶ್ವನಾಥಪುರ ಪೊಲೀಸ್ ಠಾಣೆಯ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳು ನಿಜಕ್ಕೂ ಶ್ಲಾಘನೀಯರು. ಗೂಳಿ ಹಾರಿ ಬದ್ದರೆ ಆಳಿಗೊಂದು ಕಲ್ಲು ಎಂಬ ಗಾದೆಯನ್ನು ನೆನಪಿಸಿದ ತೈಲಗೆರೆ ಗ್ರಾಮಸ್ಥರನ್ನು ಮೆಚ್ಚಲೇಬೇಕು.

-ಎಸ್. ಪ್ರಭಾಕರ್, ಬೆಂಗಳೂರು



(ಅ) ಧರ್ಮಸ್ಥಳದ ಮೋದಿಯನ್ನು ಮುಂದಿಟ್ಟುಕೊಂಡು 'ನುಡಿಸಿರಿ' ಎಂಬ ಆತ್ಮ ವಂಚಕ ಕಿರಿಕಿರಿಯನ್ನು ನಡೆಸುತ್ತಿರುವ ಮೋಹನ್ ಆಳ್ವಾ ಮಡೆಸ್ನಾನವನ್ನು ಒಂದು ಸ್ತಬ್ಧ ಚಿತ್ರ ಮಾಡಿ ಜಿಲ್ಲೆ ಜಿಲ್ಲೆಯಲ್ಲೂ ಪ್ರದರ್ಶಿಸಬಹುದಲ್ಲಾ. ಅವರು ಹಾಗೆ ಮಾಡಿದರೆ ಹಿಂದೂ ಸಂಸ್ಕೃತಿ ಪುನೀತವಾದೀತು!

- ರವಿ ಕುಮಾರ್, ಹಾಸನ



ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ವ್ಯಕ್ತಿತ್ವವನ್ನು ಕುರಿತ ಗೌರಿ ಲಂಕೇಶ್ ಲೇಖನ ಚೆನ್ನಾಗಿತ್ತು.

- ಅನಿಲ್, ಶಿವಮೊಗ್ಗ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಇಲ್ಲವೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.



Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 15/-



ಲೋಕಿ ಹೋಗಿ ಮರಸೂರ್ ಬಂತು



ಶಿವರಾಜಕುಮಾರ್ ಅಭಿನಯದ 'ಸತ್ಯ ಇನ್ ಲವ್' ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾದ ರಾಘವ್ ಲೋಕಿ ತಮ್ಮ ಚೊಚ್ಚಲ ಚಿತ್ರದಲ್ಲಿ ತಮ್ಮದೇ ಹೊಸ ಛಾಪು ಮೂಡಿಸುವಲ್ಲಿ ವಿಫಲರಾದದ್ದು ಈಗ ಹಳೇ ವಿಷಯ. ಅನಂತರ, ಜಗ್ಗೇಶ್ ಮಗನನ್ನು ಹಾಕಿಕೊಂಡು 'ಗಿಲ್ಲಿ' ಎನ್ನುವ ರೀಮೇಕ್ ಚಿತ್ರದ ಮೂಲಕ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗಿಳಿದರೂ ಜನ 'ಗಿಲ್ಲಿ'ಯನ್ನು ಮೂಸಿ ನೋಡಲಿಲ್ಲ. ಮತ್ತೊಮ್ಮೆ, ಶಿವರಾಜ್ ಕುಮಾರ್ ಜೊತೆ 'ಲಕ್ಷ್ಮಿ' ಸಿನಿಮಾ ಮಾಡಿದರು. ಯಾಕೋ ಆ ಚಿತ್ರದಲ್ಲೂ ಲಕ್ಷ್ಮಿ ನಿರೀಕ್ಷಿತ ಮಟ್ಟದಲ್ಲಿ ನಿರ್ಮಾಪಕರ ಕೈ ಹಿಡಿಯಲಿಲ್ಲ. ಇಂತಹ ಇತಿಹಾಸವಿರುವ ರಾಘವ್ ಲೋಕಿ ಈಗ ಹೊಸದೊಂದು ಚಿತ್ರವನ್ನು ನಿರ್ದೇಶಿಸುವ ಸಾಹಸಕ್ಕೆ ಕೈ ಹಾಕಿದ್ದಾರೆ. ಚಿತ್ರದ ಹೆಸರು 'ಎ ಸೆಕೆಂಡ್ ಹ್ಯಾಂಡ್ ಲವರ್' ಅಂತ. ಅಜಯ್ ರಾವ್ ನಾಯಕನಟರಾಗಿ ನಟಿಸುತ್ತಿರುವ ಈ ಚಿತ್ರಕ್ಕೆ ಗುರುಕಿರಣ್ ಹಾಡುಗಳನ್ನು ಮಾಡಿಕೊಟ್ಟಿದ್ದಾರೆ. ಉಳಿದಂತೆ, ಕೆ.ಎಸ್.ಚಂದ್ರಶೇಖರ್ ಕ್ಯಾಮೆರಾ ಹಿಡಿದರೆ, ರವಿವರ್ಮ ಫೈಟ್ ಮಾಡಿಸುತ್ತಾರೆ. ಈ ಚಿತ್ರದ ಎರಡು ವಿಶೇಷತೆಗಳೆಂದರೆ, ಸ್ವತಃ ನಿರ್ದೇಶಕ ರಾಘವ್ ಲೋಕಿಯವರೇ ನಿರ್ಮಾಪಕರಾಗುತ್ತಿರೋದು ಹಾಗೂ ತಮ್ಮ ಹೆಸರನ್ನು ರಾಘವ್ ಮರಸೂರ್ ಅಂತ ಬದಲಾಯಿಸಿಕೊಂಡಿರೋದು. ಇನ್ನಾದರೂ ಲೋಕಿಯವರಿಗೆ ಅದೃಷ್ಟ ಒಲಿದುಬರುತ್ತದೋ ಏನೋ ಕಾದುನೋಡಬೇಕಿದೆ.

ಜಯಂತಿ ಫಿಫ್ಟಿ

1963ರಲ್ಲಿ ತೆರೆಕಂಡ 'ಜೇನುಗೂಡು' ಚಿತ್ರದ ಮೂಲಕ ಪ್ರಪ್ರಥಮವಾಗಿ ಬಣ್ಣ ಹಚ್ಚಿದ ಪ್ರತಿಭಾನ್ವಿತ ನಟಿ ಜಯಂತಿಯವರು ಚಿತ್ರರಂಗಕ್ಕೆ ಬಂದು ಈ 2013ಕ್ಕೆ ಬರೋಬ್ಬರಿ ಐವತ್ತು ವರ್ಷಗಳು ತುಂಬಿವೆ. 'ಶ್ರೀ ರಾಮಾಂಜನೇಯ ಯುದ್ಧ', 'ಚಂದವಳ್ಳಿಯ ತೋಟ', 'ಪತಿಯೇ ದೈವ', 'ಬೆಟ್ಟದ ಹುಲಿ', 'ಮಂತ್ರಾಲಯ ಮಹಾತ್ಮೆ', 'ಒಂದೇ ಬಳ್ಳಿಯ ಹೂವುಗಳು', 'ನಕ್ಕರೆ ಅದೇ ಸ್ವರ್ಗ', 'ದೇವರ ಗೆದ್ದ ಮಾನವ', 'ರಾಜದುರ್ಗದ ರಹಸ್ಯ', 'ಚಕ್ರತೀರ್ಥ', 'ಜೇಡರ ಬಲೆ', 'ರೌಡಿ ರಂಗಣ್ಣ', 'ಭಲೇ ರಾಜ', 'ಬಹದ್ದೂರ್ ಗಂಡು', 'ಬ್ಯಾಂಕರ್ ಮಾರ್ಗಯ್ಯ', 'ಮಸಣದ ಹೂವು', 'ಕಸ್ತೂರಿ ನಿವಾಸ', 'ಪರೋಪಕಾರಿ' ಸೇರಿದಂತೆ ಇವರು ನಟಿಸಿರುವ ಚಿತ್ರರತ್ನಗಳನ್ನು ಹೆಸರಿಸುತ್ತಾ ಹೋಗಬಹುದು. ಇಂತಹ ಅದ್ಭುತ ಕೊಡುಗೆ ನೀಡಿರುವ ನಟಿಗೆ ಈ ನಿಟ್ಟಿನಲ್ಲಿ ಖಾಸಗಿ ಟ್ರಸ್ಟೊಂದು ಅಭಿನಂದನಾ ಕಾರ್ಯಕ್ರಮ ಏರ್ಪಡಿಸಿ ಅಭಿನಂದಿಸಿದೆ.

ಹಾಗೇನೇ ಸದ್ಯದಲ್ಲೇ 'ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ' ವತಿಯಿಂದ ಜಯಂತಿಯವರಿಗೆ ಗೌರವ ಸಲ್ಲಿಸುವುದಾಗಿ ಮಂಡಳಿಯ ಅಧ್ಯಕ್ಷ ಹೆಚ್.ಡಿ.ಗಂಗರಾಜು ಹೇಳಿದ್ದಾರೆ. ಈ ಸುದೀರ್ಘ ಅವಧಿಯಲ್ಲಿ ಕನ್ನಡ ಪ್ರೇಕ್ಷಕನಿಗೆ ತಮ್ಮ ಅಭಿನಯದ ಮೂಲಕ ಮನರಂಜನೆ ನೀಡುತ್ತ ಬಂದಿರುವ ಈ ಹಿರಿಯನಟಿಗೆ ಈ ಮೂಲಕ ಅಭಿನಂದನೆಗಳು.

ಶೋಭಾ ಬನ್ ಗಯೀ ಸಿಎಂ



ಅದ್ಭುತ ನಟ ಯಡಿಯೂರಪ್ಪ ಹಾಕುವ ತಾಳಕ್ಕೆ ದೂಸ್ರಾ ಮಾತಾಡದೆ ಹೆಜ್ಜೆ ಹಾಕುತ್ತಾ ಬಂದ ಕು.ಶೋಭಕ್ಕನದು ಇದೀಗ ಬಣ್ಣ ಹಚ್ಚಿ ನಟಿಸುವ ಸರದಿ. ಜೀ ಕನ್ನಡದಲ್ಲಿ ಪ್ರಸಾರವಾಗಲಿರುವ 'ಸಿ.ಐ.ಡಿ ಕರ್ನಾಟಕ' ಎನ್ನುವ ಮೆಗಾಧಾರಾವಾಹಿಯಲ್ಲಿ ನಟಿಸುತ್ತಿರುವ ಶೋಭಕ್ಕನದು ಮುಖ್ಯಮಂತ್ರಿ ಪಾತ್ರವೆಂಬುದು ವಿಶೇಷ. ಇತ್ತೀಚೆಗಷ್ಟೇ ನಾಗರಬಾವಿಯ ರೆಸಾರ್ಟೊಂದರಲ್ಲಿ ಚಿತ್ರೀಕರಿಸಿಕೊಂಡ ದೃಶ್ಯಗಳಲ್ಲಿ ಶೋಭಕ್ಕನ ಅಭಿನಯ ಭೇಷ್ ಅನ್ನುವಂತಿತ್ತಂತೆ. ಕಲಾಗಂಗೋತ್ರಿ ಮಂಜು ನಿರ್ದೇಶನ ಈ ಧಾರಾವಾಹಿಯಲ್ಲಿ 'ಎನ್‌ಕೌಂಟರ್ ದಯಾನಾಯಕ್' ಖ್ಯಾತಿಯ ಸಚಿನ್ ಸುವರ್ಣ ಹೀರೋ. ಸಸ್ಪೆನ್ಸ್ ಮತ್ತು ಥ್ರಿಲ್ಲರ್ ಧಾರಾವಾಹಿಯ ಹೈಲೈಟ್ಸ್. ನಿಜಜೀವನದಲ್ಲಿ ಮುಖ್ಯಮಂತ್ರಿಯಾಗಲು ಅವಕಾಶ ಸಿಕ್ಕದ ನಿರುದ್ಯೋಗಿ ಶೋಭಕ್ಕ ಈ ಧಾರಾವಾಹಿ ಮೂಲಕವಾದರೂ ತಮ್ಮಾಸೆ ತೀರಿಸಿಕೊಳ್ಳುವಂತಾಗಿರುವುದು ಅಯ್ಯೋ ಎನಿಸದಿರದು ಅಲ್ಲವೇ?

ಮನೋಹರರ ತುಳು ಚಿತ್ರ



ಗೀತರಚನೆ, ಸಂಗೀತ ನಿರ್ದೇಶನ, ನಟನೆ ಮೂಲಕ ಚಿತ್ರರಂಗದಲ್ಲಿ ತಮ್ಮದೇ ಸ್ಥಾನ ಕಂಡುಕೊಂಡಿರುವ ಆಲ್ ರೌಂಡರ್ ವಿ.ಮನೋಹರ್ ಅವರು ದಶಕದ ಹಿಂದೆ ರಮೇಶ್ ಅರವಿಂದ್, ಚಾರುಲತಾ ಅಭಿನಯದಲ್ಲಿ 'ಓ ಮಲ್ಲಿಗೆ' ಎನ್ನುವ ಚಿತ್ರದ ಮೂಲಕ ನಿರ್ದೇಶಕರಾದ ವಿಚಾರ ಗೊತ್ತಿರುವಂಥದ್ದೇ. ಯಾವಾಗ 'ಓ ಮಲ್ಲಿಗೆ' ನೂರು ದಿನ ಓಡಿತೋ ಅದೇ ಜೋಶಿನಲ್ಲಿ ಮನೋಹರ್ ಶಿವರಾಜ್ ಕುಮಾರ್ ಹಾಕಿಕೊಂಡು 'ಇಂದ್ರಧನುಶ್' ಎನ್ನುವ ಸಿನಿಮಾ ತೆಗೆದರು. ಆ ಚಿತ್ರ ಬಾಕ್ಸಾಫೀಸಿನಲ್ಲಿ ಸೋತಿತು. ಅನಂತರ ಮನೋಹರ್ ತಮ್ಮ ಎಂದಿನ ಗೀತರಚನೆ, ಸಂಗೀತ ನಿರ್ದೇಶನ, ಅಭಿನಯದ ಕಡೆ ತಿರುಗಿಕೊಂಡರು. ಇಂತಹ ಮನೋಹರ್ ಈಗೊಂದು ಸಿನಿಮಾ ನಿರ್ದೇಶನ ಮಾಡಲು ಮುಂದಾಗಿದ್ದಾರೆ. ಕನ್ನಡದಲ್ಲಲ್ಲ, ತುಳು ಭಾಷೆಯಲ್ಲಿ. ತುಳುನಾಡಿನ ಪ್ರಸಿದ್ಧ ನಟರಾದ ದೇವದಾಸ್ ಕಾಪಿಕಾಡ್, ನವೀನ್ ಡಿ ಪಡೀಲ್ ಪ್ರಮುಖ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ವಿಶೇಷವೆಂದರೆ ಮನೋಹರ್ ಸ್ವತಃ ತಾವೇ ಸಂಗೀತ ನಿರ್ದೇಶಕರಾಗಿದ್ದರೂ, ಈ ಚಿತ್ರದ ಸಂಗೀತ ನಿರ್ದೇಶನದ ಹೊಣೆಯನ್ನು ಪ್ರಕಾಶ್ ಪಾಂಡೇಶ್ವರ್ ಎನ್ನುವವರಿಗೆ ನೀಡಿದ್ದಾರೆ.




ಸಡಗರ
ಯಜ್ಞ ಶೆಟ್ಟಿ

ಘಾಯ್ ಚಿತ್ರದಲ್ಲಿ ಬಚ್ಚನ್ ಇಲ್ಲ

ಸರಬ್ಜಿತ್ ಸಿಂಗ್ ಬದುಕನ್ನು ಆಧರಿಸಿ ಸುಭಾಷ್ ಘಾಯ್ ನಿರ್ಮಿಸುತ್ತಿರುವ ಚಿತ್ರದಲ್ಲಿ ಅಮಿತಾಬ್ ಬಚ್ಚನ್ ಪಾಕಿಸ್ತಾನಿ ಲಾಯರ್ ಪಾತ್ರ ಮಾಡಬೇಕಿತ್ತು. ಈ ಕುರಿತು ಸುಭಾಷ್ ಘಾಯ್ ತಮ್ಮ ಚಿತ್ರದ ಸ್ಕ್ರಿಪ್ಟ್ ಅನ್ನು ಅಮಿತಾಬ್ ಬಚ್ಚನ್ ಅವರಿಗೆ ಓದಲು ಕೊಟ್ಟಿದ್ದಾರೆ. ಸ್ಕ್ರಿಪ್ಟ್ ಓದಿದನಂತರ ಅಮಿತಾಬ್ "ಬೇರೊಂದು ಚಿತ್ರದಲ್ಲಿಯೂ ಲಾಯರ್ ಪಾತ್ರ ಮಾಡುತ್ತಿರುವುದರಿಂದ ಆ ಪಾತ್ರವನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ" ಎಂದು ಹೇಳಿದ್ದಾರೆ. ಈ ನಿರ್ಧಾರದಿಂದ ಅಷ್ಟೇನೂ ಬೇಸರ ಮಾಡಿಕೊಳ್ಳದ ಸುಭಾಷ್ ಘಾಯ್ ಆ ಪಾತ್ರಕ್ಕೆ ಹೊಂದುವ ಸೂಟಬಲ್ ನಟರೊಬ್ಬರ ತಲಾಷೆಯಲ್ಲಿ ತೊಡಗಿದ್ದಾರೆ. ಈ ಚಿತ್ರದಲ್ಲಿ ಸರಬ್ಜಿತ್ ಸಿಂಗ್ ಬದುಕಿನಲ್ಲಿ ನಡೆದ ನೈಜಘಟನೆಗಳನ್ನು ಯಥಾವತ್ತು ತೆರೆದಿಡುವ ಪ್ರಯತ್ನ ಮಾಡಲಾಗುವುದಂತೆ. ಪಾಕಿಸ್ತಾನದಲ್ಲಿ ಸರಬ್ಜಿತ್ ಸಿಂಗ್ ಮಡಿದನಂತರ ಜಾವೇದ್ ಅಖ್ತರ್, ಸಲ್ಮಾನ್ ಖಾನ್, ಮಧುರ್ ಭಂಡಾರ್ಕರ್ ಸೇರಿದಂತೆ ಇಡೀ ಸೃಜನಶೀಲವಲಯ ತೀವ್ರವಾಗಿ ಅಸಮಾಧಾನ ವ್ಯಕ್ತಪಡಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.


ಲಂಕೇಶ್ ಮೀಡಿಯಾದ



ಗೈಡ್ ಮಾಸಿಕ & ಜಾಬ್‌ನ್ಯೂಸ್
ಹೊಸ ಸಂಚಿಕೆಗಳು
ಬಿಡುಗಡೆಯಾಗಿದೆ



ಗೈಡ್ ಪ್ರಕಾಶನದ ಕೊಡುಗೆ
ಸಮಗ್ರ ಮಾಹಿತಿಗಳೊಂದಿಗೆ
ರೈಲ್ವೇ ಗ್ರೂಪ್ ಡಿ
ನೇಮಕಾತಿ ಪರೀಕ್ಷಾ ಪುಸ್ತಕ
ಪುಟ-400
ಬೆಲೆ-250/-
ಎಲ್ಲೆಡೆ ಲಭ್ಯ
ಹೆಚ್ಚಿನ ಮಾಹಿತಿಗಾಗಿ:
080-26676427 9880302817



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com